ಸಾಹಿತ್ಯ ದಾಸೋಹ – ೨೦೮

ಸಂಚಿಕೆ ೩೨ – ಜನವರಿ ೨೦೨೩ ೧೦.೧೨.೨೦೨೨ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

೨೦೮ನೆಯ ನೋಡಿಯೋ ಸಾಹಿತ್ಯ ದಾಸೋಹದ ಸಂಚಿಕೆಯನ್ನು ನಿಮ್ಮ ಮುಂದೆ ಪ್ರಸ್ತುತಪಡಿಸುತ್ತಿದ್ದೇವೆ. ಇದು ಪಿಡಿಎಫ್ ರೂಪದಲ್ಲಿ ಮೂಡಿಬಂದ ೩೨ನೆಯ ಸಂಚಿಕೆ.

೨೦೭ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿ ತಮ್ಮ ಅಭಿಪ್ರಾಯಗಳನ್ನು ಬರಹ ರೂಪದಲ್ಲಿ ನೀಡಿದ ಶ್ರೀ ಭ.ರಾ. ವಿಜಯಕುಮಾರ್ ಅವರಿಗೆ ನಮ್ಮ ಕೃತಜ್ಞತೆಗಳು.

ನಮ್ಮ ನೋಡಿಯೋ ವೇದಿಕೆಯಲ್ಲಿ ಅಂತರ್ಜಾಲ ಮುಖೇನ ವೈವಿಧ್ಯಮಯ ಕತೆ, ಕವನ, ಲೇಖನಗಳನ್ನು ಪ್ರಸ್ತುತಪಡಿಸಿದ ಎಲ್ಲ ದಾಸೋಹಿಗಳಿಗೆ ಹಾಗೂ ಕೇಳುಗರಾಗಿ ಭಾಗವಹಿಸಿದ ಎಲ್ಲ ಸದಸ್ಯರಿಗೆ, ತಾಂತ್ರಿಕವರ್ಗಕ್ಕೆ, ಜಿಮೀಟ್ ಆತಿಥ್ಯ ನಿರ್ವಹಿಸಿ ದವರಿಗೆ ಮತ್ತು ಈ ಸಂಚಿಕೆಯನ್ನು ಸಿದ್ಧಪಡಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರಿಗೆ ವಂದನೆಗಳು.

ಶುಭಾಶಯಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು

08.01.2023

ದಾಸೋಹದ ಪುಟಗಳಲ್ಲಿ ...

ಮುಖಚಿತ್ರ: ಡಿಸೆಂಬರ್ ಸೂರ್ಯಾಸ್ತ (ಕೃಪೆ : ಅಂತರ್ಜಾಲ)

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 208

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ 10.12.2022ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ಶ್ರೀ ಭ.ರಾ. ವಿಜಯಕುಮಾರ್ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ ತಿಂಗಳ ದಾಸೋಹ ಕಾರ್ಯಕ್ರಮ ಅಂತರ್ಜಾಲ ವೇದಿಕೆಯ ಮೂಲಕ ನಡೆಯಿತು. ಇದು 208ನೆಯ ದಾಸೋಹ.

ಶ್ರೀಮತಿ ಶೀಲಾ ಅರಕಲಗೂಡುರವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿದರು. ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ನಿರಂತರವಾಗಿ ಸಾಹಿತ್ಯ ದಾಸೋಹ ಕಾರ್ಯಕ್ರಮವನ್ನು ನಡೆಸುತ್ತಾ ಬರುತ್ತಿರುವುದು ಅದರ ಕರ್ತೃತ್ವ ಶಕ್ತಿಯ ದ್ಯೋತಕ ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ವಿಜಯಕುಮಾರ್‌ರವರ ಪ್ರತಿಭೆ, ವ್ಯಕ್ತಿತ್ವ, ಬರವಣಿಗೆಯ ತಾಕತ್ತು ಎಲ್ಲರಿಗೂ ಗೊತ್ತಿದೆ. ಇವರು ಓದಿದ್ದು ಬಿಎಸ್‌ಸಿ. ನಂತರ ಆಸಕ್ತಿಯಿಂದ ಕನ್ನಡ ಎಂಎ ಮಾಡಿದ ಇವರು, ಕಾರ್ಪೋರೇಷನ್ ಬ್ಯಾಂಕಿನ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ಈಗ ನಿವೃತ್ತರಾಗಿದ್ದಾರೆ. ಇವೆಲ್ಲವೂ ಮೇಲ್ನೋಟಕ್ಕೆ ಸಂಬಂಧವೇ ಇಲ್ಲದಂತೆ ಕಂಡರೂ ವಿಜ್ಞಾನ, ಸಾಹಿತ್ಯ, ಗಣಿತ ಹೀಗೆ ಎಲ್ಲವನ್ನೂ ಸೇರಿಸಿ ಅನುಭವದ ಮೂಸೆಗೆ ಒಡ್ಡಿ, ತಾವು ಕಾಲಿಟ್ಟ ಕ್ಷೇತ್ರಗಳಲ್ಲೆಲ್ಲ ಹೊಸತನವನ್ನು ತಾವು ಕಾಲಿಟ್ಟ ಕ್ಷೇತ್ರದಲ್ಲಿ ಮೂಡಿಸುವ ಜಾಣ್ಮೆ ಇವರದು. ಹಿಂದೆ ಹಾಸನದಲ್ಲಿ ಇದ್ದಾಗ ಶ್ರೀ ಕಬ್ಬಿನಾಲೆ ವಸಂತ ಭಾರದ್ವಾಜರೊಂದಿಗೆ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಿದವರು, ಕ್ರಿಕೆಟ್ ಆಟದ ಕ್ಯಾಪ್ಟನ್ ಆಗಿದ್ದವರು. ಇವರ ಜೀವನ ಪ್ರೀತಿ ಅಪಾರ. ಇವರು ಕವಿ, ನಾಟಕಕಾರ, ಧಾರಾವಾಹಿ–



ಸಿನಿಮಾದಲ್ಲೂ ಪಾತ್ರ ಮಾಡಿದ್ದಾರೆ. ಕಲಾಗಂಗೋತ್ರಿಯ ಸದಸ್ಯರು. ಭಾಷಣ ಕಲೆ ಇವರಿಗೆ ಕರಗತ ವಾಗಿದೆ. ರಾಷ್ಟ್ರೀಯ ಸಾಹಿತ್ಯ ವೇದಿಕೆಯ ಬೆಂಗಳೂರಿನ ಸಹ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಿವೃತ್ತಿಯ ನಂತರವೂ ಬಿಡುವಿಲ್ಲದೆ ಹಲವು ಕೆಲಸ ಕಾರ್ಯಗಳಲ್ಲಿ ತೊಡಗಿ ಕೊಂಡಿದ್ದಾರೆ. ಸತ್ವ ಭರಿತವಾಗಿ ಬರೆಯುವ ಇವರದು ಮಾರ್ಗದರ್ಶಿ ವ್ಯಕ್ತಿತ್ವ. ಇವರ ಮೂರು ಕೃತಿಗಳು, ಭಾವಗೀತೆಗಳ ಸಂಕಲನ, 'ಪಂಚರದೊಳಗಿನ ಇಂಚರ', ಮಕ್ಕಳ ಕವನ ಸಂಕಲನ 'ಸುರ್ ಸುರ್ ಬತ್ತಿ' ಮತ್ತು ಶ್ರೀ ವಿ. ನರಹರಿಯವರನ್ನು ಕುರಿತ ವ್ಯಕ್ತಿಚಿತ್ರ ಪ್ರಕಟವಾಗಿವೆ.

ಇವರು ಭ.ರಾ. ಎಂದರೆ ಭರಪೂರ ರಾರಾಜಿಸುವ, ಎಲ್ಲೆಡೆ ವಿಜಯ ಸಾಧಿಸಬಲ್ಲ ವಿಜಯಕುಮಾರ್ ಎಂದು ಶ್ಲಾಘಿಸಿ, ಅಧ್ಯಕ್ಷರ ಪರಿಚಯವನ್ನು ಸಂಕ್ಷಿಪ್ತವಾಗಿಯೂ, ಸೊಗಸಾಗಿಯೂ ಮಾಡಿಕೊಟ್ಟು ಅವರಿಗೆ ಹೃತ್ಪೂರ್ವಕ ಸ್ವಾಗತ ಕೋರಿದರು.

ನಂತರ ನೋಡಿಯೋ ಸಾಹಿತ್ಯ ದಾಸೋಹದ 207ರ ಸಂಚಿಕೆಯನ್ನು ಲೋಕಾರ್ಪಣೆಗೊಳಿಸಿ ಶ್ರೀ ಎಸ್. ಶೃಂಗೇಶ್ವರ ಶರ್ಮರವರು ಮಾತನಾಡಿ, ಇದು ಪಿಡಿಎಫ್ ರೂಪದ 31ನೆಯ ಸಂಚಿಕೆಯಾಗಿದ್ದು, ಈ ಸಂಚಿಕೆಯ ವಿಶೇಷವೆಂದರೆ, 20ನೆಯ ನವೆಂಬರ್ 2022ರಂದು ನೋಡಿಯೋ ಸಾಹಿತ್ಯ ವೇದಿಕೆ ಆಶ್ರಯದಲ್ಲಿ 'ಅಡಿಗ ಎಂಬ ಕೋಲ್ಮಿಂಚು' ಎಂಬ ವಿಷಯ ಕುರಿತು ಶ್ರೀ ಕೆ.ಜನಾರ್ದನ ತುಂಗರು ನೀಡಿದ ಉಪನ್ಯಾಸ ಮತ್ತು ಸಂವಾದವನ್ನು ಒಳಗೊಂಡಂತೆ ಶ್ರೀ ತುಂಗರು ನೀಡಿದ 25 ಪುಟಗಳ ಲೇಖನ ಮತ್ತು ಸಂವಾದ ಹಾಗೂ ಕಾರ್ಯಕ್ರಮಕ್ಕೆ ಕಾವ್ಯದ ಮೂಲಕ ಸಭಿಕರನ್ನು ಆಹ್ವಾನಿಸಿದ ಶ್ರೀ ಬೆಂ.ಶ್ರೀ.ರವೀಂದ್ರರ 'ಆಹ್ವಾನ ಕಾವ್ಯ'ವನ್ನೂ ಈ ಸಂಚಿಕೆಯಲ್ಲಿ ನೀಡಲಾಗಿದೆ ಎಂದರಲ್ಲದೆ, ಅಡಿಗರ ಸುಂದರ ಮುಖಚಿತ್ರ ಇರುವ ಸಂಚಿಕೆಯನ್ನು ಪ್ರದರ್ಶಿಸಿದರು.

ದಾಸೋಹದ ಸಂಚಾಲಕರೂ ಕಾರ್ಯಕ್ರಮ ನಿರ್ವಾಹಕರೂ ಆದ ಶ್ರೀ ಕೆ ಎನ್ ಮಹಾಬಲರವರು ರಾಜ್ಯೋತ್ಸವ ವಿಶೇಷವಾಗಿ ವೇದಿಕೆಯಲ್ಲಿ ನಡೆಸಿದ ಕನ್ನಡ ಸಾಹಿತ್ಯ ಕೃತಿ ಪರಿಚಯ ಸಂಭ್ರಮ ಎಂಬ ಅಭಿಯಾನದಲ್ಲಿ ಹಲವು ಸದಸ್ಯರು ಭಾಗವಹಿಸಿದ್ದಾರೆ. ಅವಧಿಯನ್ನು ಡಿಸೆಂಬರ್ 15 ರವರೆಗೂ ವಿಸ್ತರಿಸಲಾಗಿದ್ದು ಸುಮಾರು ನೂರು ಕೃತಿಗಳ ಪರಿಚಯವಾಗಲಿದೆ. ಇತರ ಸದಸ್ಯರೂ ಒಂದೊಂದು ಪುಸ್ತಕ ಪರಿಚಯಿಸಬೇಕೆಂದು ವಿನಂತಿಸಿದರು.

ನಂತರ ವೇದಿಕೆಯ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಭ.ರಾ.ವಿಜಯಕುಮಾರ್‌ರವರು ಕೊನೆಯಲ್ಲಿ ಮಾತನಾಡಿ, ಕೆಲವೇ ತಿಂಗಳ ಹಿಂದೆ ತಾನು ಈ ವೇದಿಕೆಗೆ ಸೇರಿದ್ದರೂ ಎಲ್ಲರೂ ಆತ್ಮೀಯರೆಂಬ ಭಾವ ನನ್ನಲ್ಲಿ ಮೂಡಿದೆ. ಇಂದು ದಾಸೋಹದ ಅಧ್ಯಕ್ಷತೆ ವಹಿಸುವ ಜವಾಬ್ದಾರಿ ತಮಗೆ ನೀಡಿದ್ದಕ್ಕಾಗಿ ವೇದಿಕೆಗೆ ಹಾಗೂ ಪರಿಚಯಿಸಿದ ಶ್ರೀಮತಿ ಶೀಲಾ ಅರಕಲಗೂಡು ರವರಿಗೆ ವಂದನೆ ಸಲ್ಲಿಸಿದರು. ಈ ದಾಸೋಹದಲ್ಲಿ ಎಲ್ಲರೂ ಚೆನ್ನಾಗಿ ತಮ್ಮ ಪ್ರಸ್ತುತಿಗಳನ್ನು ಮಂಡಿಸಿದ್ದಾರೆ, ಬೇರೆ ಬೇರೆ ಪ್ರಕಾರದ 18 ಲೇಖನಗಳು ಇಲ್ಲಿ ಪ್ರಸ್ತುತಗೊಂಡಿವೆ. ಪದ್ಯಗದ್ಯಗಳ ಸಮನ್ವಯ ಕಂಡಿದೆ. ಪ್ರತಿಕ್ರಿಯೆಗಳಿಗೆ ಬಹಳ ಮಹತ್ವ ಇದೆ. ಇಲ್ಲಿ ಹಿರಿಯರು, ಪ್ರಾಜ್ಞರು, ಬಹಳ ಓದಿದವರು ಇದ್ದೀರಿ. ಮಾತನಾಡಲು ಮಾನಸಿಕ, ಬೌದ್ಧಿಕ ಸಿದ್ಧತೆ ಬೇಕಾಗುತ್ತದೆ. ಬರೆಯುವುದು ಇನ್ನೂ ಕಷ್ಟದ ಕೆಲಸ ಒಮ್ಮೆ ಬರೆದರೆ ಅದು ದಾಖಲಾಗುತ್ತದೆ. ಅದು ಜವಾಬ್ದಾರಿಯ ಕೆಲಸ. ಇಲ್ಲಿ 18 ಬೇರೆಬೇರೆ ಹಿನ್ನೆಲೆಯಲ್ಲಿ ವಿಭಿನ್ನ ದೃಷ್ಟಿಕೋನದ ಬೇರೆಬೇರೆ ಮಜಲಿನ ಬರಹಗಳು ಪ್ರಸ್ತುತವಾಗಿವೆ. ಕಥೆ, ಕವನ, ಹಾಸ್ಯ, ಪ್ರವಾಸ, ಅನುಭವ ಕಥನ ಎಲ್ಲವೂ ಇವೆ. ವಿಮರ್ಶೆ ಅನ್ನುವುದಕ್ಕಿಂತ ಕೇಳಿ ಆನಂದಿಸಿ ಪ್ರತಿಕ್ರಿಯೆ ನೀಡುವ ಸಮಯ ಇದಾಗಿದೆ ಎಂದು ಭಾವಿಸುವೆ ಎಂದು ಹೇಳಿ, ಪ್ರತಿಯೊಂದು ಪ್ರಸ್ತುತಿಯ ಬಗ್ಗೆ ಸೊಗಸಾಗಿ ವಿಶ್ಲೇಷಿಸಿ ಮಾತನಾಡಿದರು. ಅಲ್ಲಲ್ಲಿ ಅಗತ್ಯವೆನಿಸುವ ಪೂರಕ ಮಾಹಿತಿಗಳನ್ನೂ ನೀಡಿದರು. ಹಿತವನ್ನು ಕೊಡುವುದು ಸಾಹಿತ್ಯ.. ಅಂತೆಯೇ ಹಿತವನ್ನು ಕೊಡುವ ಕೆಲಸವನ್ನು ಈ ಗುಂಪು ಮಾಡುತ್ತಾ ಬಂದಿದೆ ಎಂದು ಹೇಳಿ ಎಲ್ಲ ಪ್ರಸ್ತುತಿಕಾರರಿಗೂ ಅಭಿನಂದನೆ ಸಲ್ಲಿಸಿದರು.

ಕೊನೆಯಲ್ಲಿ ಶ್ರೀ ವಿಠಲ್ ಇಜೇರಿಯವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು

***

ತರ್ಕಾತೀತ ಅನುಭವ

– ಗೌರಿ ಭಟ್ಟ

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಮಂಗಳೂರಿನಲ್ಲಿ ನನಗೆ ಆದ ಎರಡು ವಿಶಿಷ್ಟ ಅನುಭವಗಳನ್ನು ಇಂದು ನಾನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

1. ನಾನು ಮಂಗಳೂರಿಗೆ ಬಂದ ಹೊಸತು. ಅಕ್ಕಪಕ್ಕದವರು ಹೆಚ್ಚಾಗಿ ಪರಿಚಯವಿರಲಿಲ್ಲ. ಬ್ಯಾಂಕಿನ ಕೆಲಸ, ಮನೆ ಕೆಲಸ, ಮಗು ಬೇರೆ ಚಿಕ್ಕದು. ಯಾವುದಕ್ಕೂ ಪುರುಸೊತ್ತಿರಲಿಲ್ಲ. ಒಂದು ದಿನ ನನ್ನ ಅಪ್ಪಯ್ಯ ಫೋನ್ ಮಾಡಿ ತುರ್ತಾಗಿ ಮಗನನ್ನು ಕರೆದುಕೊಂಡು ಅವರ ಮನೆಗೆ ಬರಬೇಕೆಂದು ಹೇಳಿದರು. ಮುಂದಿನ ತಿಂಗಳು ಗಣೇಶ ಚತುರ್ಥಿಗೆ ಹೇಗೂ ಊರಿಗೆ ಹೋಗಬೇಕೆಂದುಕೊಂಡಿದ್ದೆ. ನನಗೆ ರಜೆಯೂ ಕಡಿಮೆ ಇದ್ದುದರಿಂದ ಈಗ ಸಾಧ್ಯವಿಲ್ಲ ಎಂದು ಹೇಳಿದರೆ, ಕೂಡಲೇ ಮಗನನ್ನು ಕರೆದುಕೊಂಡು ಬರಲೇಬೇಕೆಂದೂ, ಕಾರಣ ಮತ್ತೆ ಹೇಳುತ್ತೇನೆ ಅಂತಲೂ ಹೇಳಿದರು. "ಯಾವಾಗಲೂ ನಿನ್ನ ಕರ್ತವ್ಯ ನೀನು ಮಾಡಿಕೋ" ಎಂದು ಹೇಳುವ ಅಪ್ಪಯ್ಯ ಏಕಿಷ್ಟು ಒತ್ತಾಯ ಮಾಡುತ್ತಿದ್ದಾರೆ?' ಎಂದುಕೊಳ್ಳುತ್ತಲೇ ಕೆಂಪು ಬಣ್ಣದ ಬಸ್ಸಿನಲ್ಲಿ ಮಗನನ್ನು ಕರೆದುಕೊಂಡು ತುರ್ತಾಗಿ ಊರಿಗೆ ಹೊರಟೆ.

ಮನೆ ತಲುಪಿದ ಕೂಡಲೇ ನನ್ನನ್ನೇ ಕಾಯುತ್ತಿರುವವರಂತೆ ಇದ್ದ ಚಿಕ್ಕಪ್ಪ ಅವರ ಮನೆಯಿಂದ ಓಡಿಕೊಂಡು ಅಪ್ಪನ ಮನೆಗೆ ಬಂದರು. ನನ್ನ ಯೋಗಕ್ಷೇಮವನ್ನೂ ವಿಚಾರಿಸದೇ, "ನಿನ್ನ ಮಗನಿಗೆ ಹುಷಾರಿಲ್ಲ. ಹೇಗಾಗಿದ್ದಾನೆ ನೋಡು, ನೀನಿರುವ ಬಾಡಿಗೆ ಮನೆಯ ಪಕ್ಕ ಒಂದು ದೊಡ್ಡ ಕೆರೆ ಇದೆ. ಅದರ ದಂಡೆಯಲ್ಲಿ ಒಂದು ಅಶ್ವತ್ಥ ಮರವಿದೆ. ಆ ಮರದ ಒಂದು ಟೊಂಗೆ ನಿಮ್ಮ ಬಾಡಿಗೆ ಮನೆಯ ಮಾಡಿಗೆ ಬಾಗಿಕೊಂಡಿದೆ. ಆ ಮರದಲ್ಲಿ ಒಬ್ಬ ಬ್ರಹ್ಮರಾಕ್ಷಸ ವಾಸವಾಗಿದ್ದು ನಿನ್ನ ಮಗನನ್ನು ಕಾಡುತ್ತಿದ್ದಾನೆ. ಕಾರಣ ನಿನ್ನ ಮಗ ಕೃಶವಾಗಿದ್ದಾನೆ. ಅದಕ್ಕೆ ನಾನು ಒಂದು ಪರಿಹಾರ ಹೇಳುತ್ತೇನೆ. ಒಂದು ತೆಂಗಿನಕಾಯಿ ಮಂತ್ರಿಸಿ ಕೊಡುತ್ತೇನೆ. ಕುಂಕುಮದ ನೀರನ್ನು ಮಂತ್ರಿಸಿದ ತೆಂಗಿನಕಾಯಿಯ ಮೇಲೆ ಹಾಕಿ ಆ ಕೆರೆಯ ಸುತ್ತ ಮೂರು ಪ್ರದಕ್ಷಿಣೆ ಹಾಕಿ ಅದನ್ನು ಒಡೆಯಬೇಕು' ಅಂತ ಸ್ವಲ್ಪ ದೊಡ್ಡ ಧ್ವನಿಯಲ್ಲೇ ಹೇಳಿದರು. ಹಾಗೂ ಈ ಕೆಲಸ ಅರ್ಜೆಂಟಾಗಿ ಮೂರು ದಿನಗಳ ಒಳಗೆ ಅಂದರೆ ಬರುವ ಅಮಾವಾಸ್ಯೆಯ ಮೊದಲು ಆಗಬೇಕೆಂದು ನನಗೆ ಹೇಳಿ ಹೋದರು. ಚಿಕ್ಕಪ್ಪನ ಮಾತಿಗೆ ಅಪ್ಪಯ್ಯ ಇಷ್ಟು ತುರ್ತಾಗಿ ನನ್ನನ್ನು ಊರಿಗೆ ಕರೆಯಿಸಿಕೊಂಡ ವಿಚಾರ ಮನವರಿಕೆ ಆಯಿತು. ಅಪ್ಪಯ್ಯನ ಮೇಲೆ ಒಂಥರಾ ಸಿಟ್ಟು ಬಂತು.

"ಅಪ್ಪಯ್ಯ, ದೇವರನ್ನು ನಂಬಿದ ಮೇಲೆ ದೆವ್ವ ಏನೂ ಮಾಡದು. ಮಾಟ-ಮಂತ್ರವೆಲ್ಲಾ ದೇವರ ಮುಂದೆ ಶಕ್ತಿ ಕಳೆದುಕೊಳ್ಳುತ್ತದೆ. ಇದು ನೀವೇ ಹೇಳಿದ ಮಾತು. ಈಗ ಚಿಕ್ಕಪ್ಪ ಹೇಳಿದ ಬ್ರಹ್ಮರಾಕ್ಷಸನ ಕಥೆ ಹೇಗೆ ನಂಬಲಿ? ನನ್ನಿಂದ ಸಾಧ್ಯವಿಲ್ಲ. ಹಾಗೂ ಅವರು ಹೇಳಿದ ಹಾಗೆ ಮಾಡುವುದೂ ಇಲ್ಲ ಅಂತ ಸ್ವಲ್ಪ ಅಸಹನೆಯಿಂದಲೇ ಹೇಳಿದೆ.

ಆಗ ಅಪ್ಪಯ್ಯ "ನಿನ್ನ ಮಗನಿಗೆ ಒಳ್ಳೆಯದಾದರೆ ಅಷ್ಟೇ ಸಾಕು. ಹಟ ಮಾಡಬೇಡ. ಚಿಕ್ಕಪ್ಪ ಹೇಳಿದ ಹಾಗೇ ಕೇಳು. ಕೆಲವೊಂದು ಸಲ ದೊಡ್ಡವರು ಹೇಳಿದ ಹಾಗೇ ಕೇಳಬೇಕಷ್ಟೆ.', ಎಂದಾಗ ನಾನು ಮರುಮಾತಾಡಲಿಲ್ಲ.

ಚಿಕ್ಕಪ್ಪ ಮಂತ್ರಿಸಿ ಕೊಟ್ಟ ತೆಂಗಿನಕಾಯಿ ತೆಗೆದುಕೊಂಡು ಮಾರನೇ ದಿನವೇ ಅಮ್ಮನ ಮನೆ ಕುಮಟಾದಿಂದ ಮಂಗಳೂರಿಗೆ ಬಂದೆ.

ನಮ್ಮ ಬಾಡಿಗೆ ಮನೆಯ ಪಾಗಾರದ ಆಚೆಯ ಕೆರೆ, ಅದರ ದಂಡೆಯ ಮೇಲಿನ ಅಶ್ವತ್ಥಮರ ಎಲ್ಲಾ ನಾನು ಗಮನಿಸಿಯೇ ಇರಲಿಲ್ಲ. ನನಗೆ ಆಶ್ಚರ್ಯವಾಗಿದ್ದೇನೆಂದರೆ ನನ್ನ ಬಿಡಾರವನ್ನು ನೋಡದೇ ನನ್ನ ಚಿಕ್ಕಪ್ಪ ಹೇಳಿದ ದೊಡ್ಡ ಕೆರೆ, ಕೆರೆಯ ದಂಡೆಯ ಮೇಲಿನ ಮರದ ರೆಂಬೆ ನಮ್ಮ ಬಾಡಿಗೆ ಮನೆಯ ಕೋಣೆಯ ಮೇಲೆ ಒರಗಿದ್ದ ವಿಷಯಗಳು, ನನ್ನನ್ನು ವಿಸ್ಮಯ ಗೊಳಿಸಿದವು.

ಊರಿನಿಂದ ಬಂದ ದಿನವೇ ನಮ್ಮ ಮನೆಯವರು ಚಿಕ್ಕಪ್ಪ ಕೊಟ್ಟ ತೆಂಗಿನಕಾಯಿಗೆ ಕುಂಕುಮದ ನೀರು ಹಾಕಿ ಕೆರೆಯ ಸುತ್ತು ಮೂರು ಪ್ರದಕ್ಷಿಣೆ ಹಾಕಿ ಬಂದು ಅದನ್ನು ನೆಲಕ್ಕೆ ಅಪ್ಪಳಿಸಿ ಒಡೆದರು. ಇನ್ನೂ ಏನೇನೋ ಕುತೂಹಲಗಳು ಮನದಲ್ಲಿ ಇದ್ದವು.

ಮಾರನೇ ದಿನ ನಾನು ಪಕ್ಕದ ಮನೆಗೆ ಹೋದೆ. ವಿಚಾರಿಸಲಾಗಿ ಅದು ನನ್ನ ಗೆಳತಿಯ ತಂಗಿಯ ಮನೆಯಾಗಿತ್ತು. ಅವಳ ಗಂಡ ಜಗದೀಶ್ ಶೆಟ್ಟಿಯವರು ನಮ್ಮ ಬ್ಯಾಂಕಿನ ಗ್ರಾಹಕರಾಗಿದ್ದರು. ಚಹಾ ಕುಡಿಯುತ್ತಾ ಅವರು ಮನೆಯ ವಿಷಯಗಳನ್ನು ನನಗೆ ಹೇಳಿದರು. ಒಂದು ತಿಂಗಳ ಹಿಂದೆಯಷ್ಟೇ ಶೆಟ್ಟರ ಅಪ್ಪ ತೀರಿಕೊಂಡರಂತೆ. ಅವರ ತಂಗಿಗೂ ತುಂಬಾ ಹುಷಾರಿಲ್ಲದೇ ಆಪರೇಷನ್ ಮಾಡಿ ಆರು ಇಂಚು ಕರುಳು ತೆಗೆದಿದ್ದಾರಂತೆ. ಡಾ. ಬಿ.ಎಂ.ಹೆಗ್ಡೆಯವರ ಪೇಷಂಟ್. ಪುದುವಾಳರನ್ನು ಕೇಳಿದಾಗ ಮನೆಯ ಅಂಗಳದಲ್ಲಿರುವ ಅಶ್ವತ್ಥ ಮರದಲ್ಲಿ ವಾಸವಾಗಿದ್ದ ಬ್ರಹ್ಮರಾಕ್ಷಸನ ಉಪಟಳವೇ ಇದಕ್ಕೆಲ್ಲಾ ಕಾರಣ, ಅದಕ್ಕೆ ಮೋಕ್ಷ ಕೊಡಿಸಬೇಕು ಎಂದು ಹೇಳಿದ್ದರಂತೆ. ಆ ಕೆಲಸ ಸದ್ಯದಲ್ಲೇ ಮಾಡಿಸಬೇಕು ಅಂತ ಹೇಳಿದ್ರು. ನನ್ನ ಮೈ ಝುಂ ಅಂದಿತು.

ಏನೋ ಭ್ರಮೆಯಲ್ಲೇ ಮನೆಗೆ ಬಂದೆ. ಆಶ್ಚರ್ಯವೆಂದರೆ ಅದೇ ದಿನ ನನ್ನ ಮಗನಿಗೂ ಜ್ವರ, ಕೆಮ್ಮು ಜೋರಾಗಿ, ಎಕ್ಸ್‌ರೇ ಮಾಡಿಸಲಾಗಿ ಡಾಕ್ಟರ್ ಅದು primary complex (ಚಿಕ್ಕವರಿಗೆ ಬರುವ ಕ್ಷಯರೋಗ) ಅಂತ ನಿರ್ಣಯಿಸಿದರು. ವರ್ಷಗಟ್ಟಲೆ ಔಷಧ ಮಾಡಿಸಿದ್ದೆವು.

ಈಗಲೂ ನನಗೆ ಆಶ್ಚರ್ಯವಾಗುವುದು ನಮ್ಮ ಮಂಗಳೂರಿನ ಬಾಡಿಗೆ ಮನೆಯನ್ನೇ ನೋಡದ ಚಿಕ್ಕಪ್ಪ ಹೇಗೆ ಆ ಜಾಗದ ಬಗ್ಗೆ ನಿಖರವಾಗಿ, ಹೇಳಿದರು ಅದರ ನಂತರ ಒಂದು ಸಲವೂ ಚಿಕ್ಕಪ್ಪ ಆ ವಿಷಯದ ಬಗ್ಗೆ ನನ್ನನ್ನು ಏನೂ ಕೇಳಲಿಲ್ಲ. ನನಗೆ ಆ ಬಗ್ಗೆ ಪ್ರಶ್ನೆ ಮಾಡಲೂ, ಕೇಳಲೂ ಭಯವಾಗುತ್ತೆ. ಇದು ಮೂಢನಂಬಿಕೆ ಅಥವಾ ಕಾಕತಾಳೀಯ ಅಂತ ನನ್ನ ಮನಸ್ಸು ಒಪ್ಪುತ್ತಾ ಇಲ್ಲ.

ಇನ್ನೊಂದು...

2. ನಾಗ ದೈವ

ಮಂಗಳೂರಿನಲ್ಲಿ ಸ್ವಂತ ಮನೆ ಕಟ್ಟಲು ಜಾಗ ನೋಡುತ್ತಾ ಇದ್ದೆವು. ಒಂದು ದಿನ ನನ್ನ ಯಜಮಾನರು ಹೇಳಿದರು, 'ನೋಡು ಒಂದು ಒಳ್ಳೆಯ ಜಾಗ ಇದೆ. ಆದರೆ ಅಲ್ಲಿ ನಾಗಬನ ಇದೆಯಂತೆ. ಮಡಿ–ಮೈಲಿಗೆ ಜಾಸ್ತಿ. ಸಸ್ಯಾಹಾರಿಗಳಿಗೆ ಆಗಬಹುದು ಅಂತ ಹೇಳ್ತಾ ಇದ್ದಾರೆ.'

"ಈ ಮಂಗಳೂರಿನವರು ಕಲ್ಲು, ಕಲ್ಲಿಗೂ ಪೂಜೆ ಮಾಡುತ್ತಾರೆ. ಅದನ್ನೆಲ್ಲಾ ನಂಬಿದ್ರೆ ಅಷ್ಟೇ" ಅಂತ ಹೇಳಿದೆ. ಆದರೆ ನನಗೆ ಅಷ್ಟೇ ಭಯ ಇತ್ತು. ಮನಸ್ಸಿನಲ್ಲಿ ಹೇಳಿಕೊಂಡೆ, 'ನಾಳೆ 11 ಘಂಟೆಯ ಹೊತ್ತಿಗೆ ನಾನು ನನ್ನ ಅಕ್ಕನೊಟ್ಟಿಗೆ ಆ ಜಾಗಕ್ಕೆ ಹೋಗುತ್ತೇನೆ. ಅಲ್ಲಿ ನಾಗರಹಾವು ಇದ್ದದ್ದೇ ಆದರೆ ಅದು ನಮಗೆ ಕಾಣಬೇಕು'.

ಮರುದಿನ ಹನ್ನೊಂದು ಘಂಟೆಗೆ ಸರಿಯಾಗಿ ಆ ಜಾಗಕ್ಕೆ ಹೋದೆ. ಅಕ್ಕನಿಗೆ ಆ ವಿಷಯ ಹೇಳಿರಲಿಲ್ಲ. ಅಲ್ಲಿ ಒಂದು ಬಂಗಾರದ ಬಣ್ಣದ ಮಿಡಿನಾಗ ತಲೆ ಆಡಿಸುತ್ತಾ ಇತ್ತು. ನಾನು ಗಡಗಡ ನಡುಗುತ್ತಾ ಇದ್ದೆ, ಬೆವರು ಇಳಿಯುತ್ತಾ ಇತ್ತು. ಅಕ್ಕ ಕೇಳಿದರು, 'ಏಕೆ ಹೆದರುತ್ತಿರುವೆ? ಅದು ನಮಗೆ ಏನೂ ಮಾಡುವದಿಲ್ಲ ಅಂತಾ ಹೇಳ್ತಾ ಇದೆ'. ವಿಷಯ ತಿಳಿಸಿದೆ. ಅವರು ನನ್ನನ್ನು ನೋಡಿ ನಕ್ಕರು. ನಾಗನಿಗೆ ನಡುಗುತ್ತಿರುವ ಕೈ ಮುಗಿದು ನನ್ನದು ತಪ್ಪಾಯಿತೆಂದು ಕೇಳಿಕೊಂಡೆ.

ವಿಷಯ ಬ್ಯಾಂಕಿನಲ್ಲಿ ಹೇಳಿದಾಗ, "ನೀವು ನಮ್ಮ ನಾಗನನ್ನು ಸಂಶಯ ಮಾಡುವದೋ?" ಅಂತ ಕೇಳಿದರು..

***

ಪುಷ್ಪ ನಮನ

– ಮನೋಹಂಸ

(ಈ ಪ್ರಕೃತಿಯಲ್ಲಿನ ಅದ್ಭುತ ಸೃಷ್ಟಿಗಳ ಪೈಕಿ ವಿಶೇಷವಾಗಿ ಮನ ಸೆಳೆಯುವುದು ವೈವಿಧ್ಯಮಯ, ವಿವಿಧ ಬಣ್ಣಗಳ ಪುಷ್ಪಗಳು. ಈ ಪುಷ್ಪಗಳಿಗೆಂದೇ ಒಂದು ಕಾವ್ಯನಮನ)

ಮಲ್ಲಿಗೆ

ಹಸಿರು ಗಿಡದ ಮೇಲೆ ಹರಡಿರುವ ಮಲ್ಲಿಗೆ
ಹಸಿರುಬಟ್ಟೆಯ ಮೇಲೆ ಮಂಜು ಬಿದ್ದ ಹಾಗೆ
ದುಂಡಾಗಿರುವ ನೀ ಸಲ್ಲುವೆ ದೇವರ ಪೂಜೆಗೂ
ಪೋಣಿಸಿ ಹೆಣೆದರೆ ಸಲ್ಲುವೆ ಹೆಣ್ಣಿನ ಮುಡಿಗೂ

ಸಂಪಿಗೆ

ನೀ ನೋಡಲು ಉದ್ದ ಸಣ್ಣ
ಹಳದಿ, ಕೆಂಡಕೆಂಪು ನಿನ್ನ ಬಣ್ಣ
ಕಾಣಿಸಿಕೊಳ್ಳುವೆ ದೊಡ್ಡ ಮರದಾಗೆ
ಹೆಣ್ಣಿನ ಮುಡಿಯಲಿ ಇದ್ದರೂ ಇಲ್ಲದ ಹಾಗೆ

ಕನಕಾಂಬರ

ನಿನ್ನ ಬಣ್ಣ ಉಷೆ ಮೂಡಿದ ಅಂಬರದಂತೆ
ಹೇಳುವರು ನೀನು ಮಲ್ಲಿಗೆಯ ಸವತಿಯಂತೆ
ಮಲ್ಲಿಗೆ ಮುಡಿಯೇರಲು ಬಿಂಕ ತೋರಿಸಿಹೆ
ನೀನೇರುವೆ ಮುಡಿಗೆ ಹೇಳುವೆ ನಾ ಇಲ್ಲಿಹೆ

ಸೇವಂತಿಗೆ

ಅರಿಶಿನ ಹಳದಿ ಬಿಳಿ ಬಣ್ಣದ ನಿನ್ನ ಎಸಳುಗಳು
ಹಾರವಾಗಿಯೇ ಸಲ್ಲುವೆ ನೀನು ಬಹುಪಾಲು
ಹಬ್ಬಹರಿದಿನಗಳಲ್ಲಿ ಹೆಚ್ಚಾಗಿ ಕಾಣಿಸುವೆ ನೀನು
ಮಂತ್ರಾಕ್ಷತೆಯ ಜೊತೆಯೂ ಸೇರಲು ಸೈ ನೀನು

ಗುಲಾಬಿ

ಬಣ್ಣಬಣ್ಣದ ರಂಗಿನಿಂದ ಶೋಭಿಸುವೆ ನೀನು
ಪ್ರೇಮಿಗಳಿಗೆ ಅಚ್ಚುಮೆಚ್ಚಿನ ಕುಸುಮ ನೀನು
ಸ್ವಾಗತ ಕೋರಲು, ಗೌರವದ ಸಂಕೇತ ನೀನು
ನಾಲಗೆಗೂ ಗುಲ್ಕಂದವಾಗಿ ಸಿಹಿಯಾಗುವೆ ನೀನು

ಕಮಲ

ಸದಾ ನೀರಿನಲ್ಲೇ ಇದ್ದು ಶೋಭಿಸುವೆ ನೀನು
ಕೆಸರಿನಲ್ಲಿದ್ದೂ ಅಂಟಿಸಿಕೊಳ್ಳದ ಜಾಣೆ ನೀನು
ಶ್ರೀ ಲಕ್ಷ್ಮಿಯ ಕರಗಳಲ್ಲೂ ರಾರಾಜಿಸುವೆ ನೀನು
ವದನ ನಯನ ಸೌಂದರ್ಯಕ್ಕೆ ಉಪಮೆ ನೀನು

***

ಸಣ್ಣ ಕತೆ

ತೆರೆದ ಬಾಗಿಲು

– ಪೋರ

ದೇವರಾಜು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ. ಯೂನಿಯನ್ ರೂಮಿನಲ್ಲಿ ಕುಳಿತು ಎದುರು ತೆರೆದಿದ್ದ ಬಾಗಿಲನ್ನೇ ನೋಡುತ್ತಾ ಇದ್ದಾನೆ.

ಇಂದು ಏಕೋ ಯಾವುದೂ ಸರಿಹೋಗಲೇ ಇಲ್ಲ. ಎಂ.ಡಿ. ಅವರು ಹೀಗೆ ಹೇಳಬಾರದಿತ್ತು. ಎಲ್ಲರ ಮುಂದೆ ಖಡಕ್ಕಾಗಿ ಹೇಳಿದ್ದರು– "ಹೊರಗೆ ಹೋಗುವವರಿಗೆ ಬಾಗಿಲು ತೆರೆದಿದೆ". ಅವನಿಗೆ ಮತ್ತೆ ಮಾತನಾಡಲು ಅವಕಾಶವೇ ಕೊಟ್ಟಿರಲಿಲ್ಲ. ಅವನ 20 ವರ್ಷಗಳ ಸೇವೆಯೆಲ್ಲ ವ್ಯರ್ಥ ಆಯಿತೇನೋ ಎನಿಸಿತ್ತು ಅವನಿಗೆ. ಮನಸ್ಸು ವ್ಯಗ್ರವಾಗಿತ್ತು.

ಮೂರು ವರ್ಷದ ವೇತನ ಪರಿಶೀಲನೆ ಬಾಕಿ ಇದೆ. ಕೋವಿಡ್ ಸಮಸ್ಯೆಯನ್ನು ಉಲ್ಲೇಖಿಸಿ, ಆಡಳಿತ ವರ್ಗ ಅದನ್ನು ಒಂದು ವರ್ಷ ಮುಂದೂಡಿತ್ತು. ಈಗ ಆ ಗಡುವೂ ಸಹ ಮೀರಿ ಮಾತುಕತೆ ಆರಂಭವಾಗಿ ಆರು ತಿಂಗಳು ಕಳೆದಿದೆ. ಸುಮ್ಮನೆ ಎಳೆದಾಡುತ್ತಿದ್ದಾರೆ. ಎಚ್ಆರ್ ಡಿಪಾರ್ಟ್‌ನೊಂದಿಗೆ 5–6 ಬಾರಿ ದೀರ್ಘ ಚರ್ಚೆಗಳು ನಡೆದಿವೆ. ಆದರೂ ಎಲ್ಲ ಬೇಡಿಕೆಗಳೂ ಇತ್ಯರ್ಥ ಆಗಿಲ್ಲ.

ಕಳೆದ ಸಭೆಯಲ್ಲಿ ಎಚ್ಆರ್ ಹೊಸದೊಂದು ಸರ್ಕುಲರ್ ಕಳುಹಿಸಿದೆ, “ಎಲ್ಲ ಕಾರ್ಮಿಕರು ಕಾರ್ಖಾನೆ ಹೊಸದಾಗಿ ಆರಂಭವಾಗಲಿರುವ ಸ್ಥಳಕ್ಕೆ ಬರಬೇಕು. ಇನ್ನು ಆರು ತಿಂಗಳಲ್ಲಿ ಕಾರ್ಖಾನೆ ಅಲ್ಲಿಗೆ ಸ್ಥಳಾಂತರ ಗೊಳ್ಳುತ್ತದೆ.” ಕಾರ್ಮಿಕರಿಗೆ ಇದು ಗಾಯದ ಮೇಲೆ ಬರೆ ಎಳೆದಂತೆ ಆಗಿತ್ತು. “ಎಲ್ಲ ಸೇವಾ ಷರತ್ತುಗಳನ್ನು ಉಳಿಸಿಕೊಳ್ಳುವ ಭರವಸೆ ಕೊಡಲಾಗುವುದು. ಇದು ಕೇವಲ 14 ಕಿಲೋಮೀಟರ್ ದೂರದಲ್ಲಿರುವುದರಿಂದ ಕಾರ್ಮಿಕರಿಗೆ ಪ್ರತ್ಯೇಕ ರಿಲೋಕೇಷನ್ ಅಲ್ಲೋವೆನ್ಸ್ ನೀಡಲಾಗುವುದಿಲ್ಲ. ಕಾರ್ಮಿಕರು ತಾವಾಗಿಯೇ ಪ್ರತಿನಿತ್ಯ ಹೊಸ ಸ್ಥಳವನ್ನು ತಲುಪಬೇಕು” ಇದು ಬಂದಿದ್ದ ಸುತ್ತೋಲೆಯ ಒಕ್ಕಣೆ.

ಕಾರ್ಖಾನೆಯು ಈಗಿರುವ ಸ್ಥಳದಲ್ಲಿ 20 ವರ್ಷಗಳಿಂದ ಚಾಲನೆಯಲ್ಲಿದೆ. ಕಾರ್ಮಿಕರು ಇಲ್ಲಿಗೆ ಹೊಂದಿ ಕೊಂಡಿದ್ದಾರೆ. ಅವರಲ್ಲಿ ಕೆಲವರು ಸಣ್ಣ ಪುಟ್ಟ ಮನೆಗಳನ್ನು ಕೊಂಡಿದ್ದಾರೆ. ಮಕ್ಕಳನ್ನು ಹತ್ತಿರದ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಕೆಲವು ಕಾರ್ಮಿಕರು ತಮ್ಮ ಆದಾಯಕ್ಕೆ ಪೂರಕವಾಗಿ ಕೆಲವು ಇತರೆ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದಾರೆ, ಈಗ ಅವರುಗಳಿಗೆ ಮನೆಗಳನ್ನು ಸ್ಥಳಾಂತರಿಸಲು ಕಷ್ಟವಾಗುತ್ತದೆ.

ಆಗಲೇ ಎಂ.ಡಿ.ಯವರನ್ನು ಕಾರ್ಮಿಕ ಸಂಘದ ಪದಾಧಿಕಾರಿಗಳು ಖುದ್ದು ಭೇಟಿಮಾಡಲು ಆಗ್ರಹ ಮಾಡಿದ್ದು. ಹಾಗೆ ಭೇಟಿಮಾಡಲು ಹೋದಾಗಲೇ ಈ ಮಾತುಕತೆ ನಡೆದದ್ದು.

"ವೇತನ ಹೆಚ್ಚಳ ಕೂಡ ನಿರೀಕ್ಷಿತ ಮಟ್ಟದಲ್ಲಿಲ್ಲ ಮತ್ತು ನೆರೆಹೊರೆಯ ಕಂಪನಿಗಳು ಹೆಚ್ಚು ವೇತನ ನೀಡಿವೆ, ಇತ್ಯಾದಿ, ಇತ್ಯಾದಿ..." ಎಂದು ಒತ್ತಿ ಹೇಳಿದ್ದ ದೇವರಾಜು. ಅವನು ಹೇಳಿದ ಯಾವ ಮಾತಲ್ಲೂ ತಪ್ಪಿರಲಿಲ್ಲ. ಅವನು ಹೇಳಿದ್ದ ರೀತಿ ಮಾತ್ರ ತಪ್ಪಾಗಿತ್ತು. ಅವನ ಇಂಗ್ಲಿಷ್ ಅಷ್ಟು ಚೆನ್ನಾಗಿಲ್ಲ, ಅವನು ತನ್ನ ಮಾತನ್ನು

ಇಂಗ್ಲಿಷ್‌ನಲ್ಲಿ ಪ್ರಾರಂಭಿಸಿಬಿಟ್ಟಿದ್ದ ಮತ್ತು ಅವನು ಹೇಳಬೇಕೆಂದಿದ್ದನ್ನೆಲ್ಲಾ ಒಂದೇ ಉಸಿರಿನಲ್ಲಿ ಹೇಳಿಬಿಟ್ಟಿದ್ದ. ಅವನಿಗೆ ಕನ್ನಡದಲ್ಲಿ ಮಾತನಾಡಲು ಎದುರು ಕುಳಿತಿದ್ದ ಪ್ರೊಡಕ್ಷನ್ ಮ್ಯಾನೇಜರ್ ಸುಳಿವು ನೀಡುತ್ತಿದ್ದರೂ, ಅದು ತುಂಬಾ ತಡವಾಗಿತ್ತು. ಎಂ.ಡಿ. ಅವರಿಗೆ ಕನ್ನಡ ಬರುವುದಿಲ್ಲ ಎನ್ನುವ ಕಾರಣಕ್ಕಾಗಿ ಇಂಗ್ಲೀಷಿನಲ್ಲಿ ಬಡಬಡಾಯಿಸಿದ್ದ. ಅವನು ತನ್ನ ಮಾತಿನಲ್ಲಿ 'ಪ್ಲೀಸ್' ಎನ್ನುವ ಪದ ಒಮ್ಮೆಯೂ ಬಳಸಲಿಲ್ಲ. ಮಾತುಕತೆ ಸಮಯ ಮುಖದಲ್ಲಿ ಒಮ್ಮೆಯೂ ನಗು ಕಾಣಲಿಲ್ಲ. ಉದ್ವಿಗ್ನನಾಗಿ ಕಾಣುತ್ತಿದ್ದ. ಇದೆಲ್ಲ ಅವನಿಗೆ ಅನಿಸಿದ್ದು ಮಾತೆಲ್ಲ ಮುಗಿದ ಮೇಲೆ. ಎಂ.ಡಿ. ಅವರಿಗೆ ಅವನು ಮಾತನಾಡಿದ ರೀತಿ ಸರಿಕಾಣಲಿಲ್ಲ. ಹಠ ಹಿಡಿದು ಡಿಮ್ಯಾಂಡ್ ಮಾಡುತ್ತಿದ್ದಾನೆ ಎನಿಸಿತ್ತು.

ಅವನ ಮಾತಿನ ನಂತರ ಎಂ.ಡಿ. ಅವರು ತಮ್ಮ ಅಭಿಪ್ರಾಯ ಪುನರುಚ್ಚರಿಸಿದ್ದರು, "ನೀವು ಉತ್ಪಾದನೆಯನ್ನು ಹೆಚ್ಚಿಸಲು ಒಪ್ಪಿಕೊಂಡಿರುವುದು ಬಹಳ ಅತ್ಯಲ್ಪ ಎಂದು ಕೇಳಿದ್ದೇನೆ. ನಾವು ಹೊಸ ಸ್ಥಳದಲ್ಲಿ ಹಣ ಹೂಡಿಕೆ ಮಾಡಿದ್ದೇವೆ. ದೊಡ್ಡ ಸ್ಥಳ. ಹೊಸ ಕಟ್ಟಡ. ಉತ್ತಮ ಸೌಕರ್ಯಗಳು. ನಾವು ಮಾರುಕಟ್ಟೆಯಲ್ಲಿ ಸ್ಪರ್ಧಿಸಬೇಕು. ಇದು ಸ್ಪರ್ಧಾ ಜಗತ್ತು. ಇಲ್ಲಿ ನೋಡಿದರೆ ನೀವು ನಮಗೇ ಷರತ್ತುಗಳನ್ನು ನೀಡುತ್ತಿದ್ದೀರಿ. ಕೆಲಸ ಹೆಚ್ಚಳ ಮಾಡುವ ಮಾತಿಲ್ಲ. ಹಣ ಏನು ಗಿಡದಲ್ಲಿ ಬೆಳೆಯುತ್ತದೆಯೇ?" ಅವರು ಮುಂದುವರೆದು, "ನಿಮಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಕಂಪನಿಯ ಬಾಗಿಲುಗಳು ಸದಾ ತೆರೆದಿವೆ. ದಯವಿಟ್ಟು ಬೇರೆಯ ಕಡೆ ಕೆಲಸ ಹುಡುಕಿಕೊಳ್ಳಿ" ಎಂದಿದ್ದರು.

ಮಾತುಕತೆಯ ನಂತರ ಯೂನಿಯನ್ ರೂಮಿನಲ್ಲಿ ಸೇರಿದ ಕೆಲವು ಪದಾಧಿಕಾರಿಗಳು ಮೊದಲೇ ತೀರ್ಮಾನ ಮಾಡಿಕೊಂಡಂತೆ ಮುಷ್ಕರ ಹೂಡಿ ಆಡಳಿತ ವರ್ಗಕ್ಕೆ ಪಾಠ ಕಲಿಸಬೇಕೆಂದು ತೀವ್ರವಾಗಿ ಒತ್ತಾಯಿಸಿದ್ದರು. ಜೋರು ಕೂಗಾಟವೂ ನಡೆಯಿತು. "ಡೌನ್ ಡೌನ್" ಕೂಡ ಹೇಳಿಯಾಯಿತು. ಇವನಿಗೆ ಪೂರ್ಣ ಸಮ್ಮತಿ ಇರಲಿಲ್ಲ. ಆದರೂ ಒತ್ತಾಯಕ್ಕೆ ಮಣಿದು ಅವರ ಕಾನೂನು ಸಲಹೆಗಾರರಿಗೆ ಮುಷ್ಕರದ ಸೂಚನೆ ತಯಾರು ಮಾಡಿ ಕಳುಹಿಸಲು ಹೇಳಿದ.

“ನಾಳೆ ತೀರ್ಮಾನ ಮಾಡುವ” ಎಂದು ಹೇಳಿ ಎಲ್ಲರನ್ನೂ ಕಳುಹಿಸಿದ ನಂತರ ದೇವರಾಜು ತನ್ನ ಮನೆಗೆ ಹೊರಟ. ಅವನ ತಲೆ ತುಂಬ ಯೋಚನೆಗಳು. "ವೇತನ ಹೆಚ್ಚಿಸಲು ಆಗುವುದಿಲ್ಲ" ಎಂ.ಡಿ. ಸ್ಪಷ್ಟವಾಗಿ ಕಣ್ಣಲ್ಲಿ ಕಣ್ಣಿಟ್ಟು ಹೇಳಿದ್ದರು. ಹಾಗೆಂದು ಸ್ಟ್ರೈಕ್ ನೋಟಿಸ್ ನೀಡುವುದು ಸುಲಭದ ಕೆಲಸವಲ್ಲ. ೩೦೦ ಕುಟುಂಬಗಳನ್ನು ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಬೇಕು.

ದೇವರಾಜು ಮನೆ ಕಾರ್ಖಾನೆಯಿಂದ ಏಳು ಕಿಲೋಮೀಟರ್ ದೂರದಲ್ಲಿತ್ತು. ಹೋಗಿ ಬರಲು ಅವನು ತನ್ನ ಹಳೆಯ ಮೋಟಾರು ಬೈಕನ್ನು ಬಳಸುತ್ತಾನೆ. ಹದಿನೆಂಟು ವರ್ಷಗಳಿಂದ ದುಡಿದ ಇವನು ಇತ್ತೀಚೆಗೆ ಪುಟ್ಟ ಮನೆ ಮಾಡಿಕೊಂಡಿದ್ದಾನೆ. ಅವನ ಅರ್ಧದಷ್ಟು ವೇತನ ಮನೆ ಸಾಲದ ಕಂತು ಕಟ್ಟಲು ಹೋಗುತ್ತದೆ. ಅವನ ಮಗ ಸೂರ್ಯ ಕಾಲೇಜಿನಲ್ಲಿ ಓದುತ್ತಿದ್ದಾನೆ. ಮಗನಿಗೆ ಅತಿಯಾದ ಫುಟ್‌ಬಾಲ್ ಹುಚ್ಚು. ಒಳ್ಳೆಯ ಆಟಗಾರ ಎಂದು ಅವನ ಸ್ನೇಹಿತರು ಹೇಳುತ್ತಾರೆ. ಓದಿನಲ್ಲಿ ಹೇಗೋ ಗೊತ್ತಿಲ್ಲ. ಮಗಳು ೨ನೇ ತರಗತಿ ಓದುತ್ತಿದ್ದಾಳೆ. ಅವನ ಹೆಂಡತಿ ಸರೋಜಾ ಹಾಗೂಹೀಗೂ ಮನೆ ನಿರ್ವಹಣೆ ಮಾಡುತ್ತಿದ್ದಾಳೆ. ಅವಳು ಮನೆಯಲ್ಲಿ ಸ್ವಲ್ಪ ಟೈಲರಿಂಗ್ ಮಾಡುತ್ತಾಳೆ.

ಅವನಿಗೆ ಎಂ.ಡಿ.ಯವರ ಬಗ್ಗೆ ಅಪಾರ ಗೌರವವಿತ್ತು. ಕಂಪನಿಯನ್ನು ಬೆಳೆಸಿದವರು ಅವರು. ಬುದ್ಧಿವಂತರು ಸಹ. ಕುತಂತ್ರದ ಎಚ್‌ಆರ್ ಮ್ಯಾನೇಜರ್ ನಮ್ಮ ಬಗ್ಗೆ ಬಹುಶಃ ಸರಿಯಾಗಿ ಮಾಹಿತಿ ನೀಡಿಲ್ಲ ಎನಿಸಿತು.

ದೇವರಾಜು ಮನೆಗೆ ಬರುವ ವೇಳೆಗೆ ೯ ಗಂಟೆಯಾಗಿತ್ತು. ಅವನ ಇಂದಿನ ಮನಸ್ಥಿತಿ ಮಾಮೂಲಿನಂತಿಲ್ಲ ಎಂಬುದು ಸರೋಜಾಳಿಗೆ ಅವನನ್ನು ನೋಡಿದ ಕೂಡಲೇ ಅರಿವಾಯಿತು. ಅವಳು ಏನೂ ಕೇಳದೆ ಊಟಕ್ಕೆ ಸಿದ್ಧ ಮಾಡಿದಳು. ದೇವರಾಜು ಊಟದ ವೇಳೆ ಒಂದು ಮಾತೂ ಆಡಲಿಲ್ಲ. ಊಟಮಾಡಿ ಮತ್ತೆ ತನ್ನ ಮೇಜಿನ ಬಳಿ ಫೋನು ಹಿಡಿದು ಕುಳಿತ. ಅವನ ಕೈಯಲ್ಲಿನ ಫೋನ್ ಹೊಡೆದುಕೊಳ್ಳುತ್ತಲೇ ಇತ್ತು. ಈ ಮಧ್ಯೆ ಕಾನೂನು ಸಲಹೆಗಾರರು ಮುಷ್ಕರ ಸೂಚನೆಯ ಪತ್ರವನ್ನು ಮನೆಗೇ ಕಳುಹಿಸಿದ್ದರು. ನಾಳೆ ಅದಕ್ಕೆ ಸಹಿ ಹಾಕಿ ಎಚ್‌ಆರ್‌ಗೆ ಕೊಡಬೇಕು.

ಇತ್ತ ಸಂಜೆಯಿಂದ ಮಗ ತಾಯಿಯೊಡನೆ ಜಗಳ ತೆಗೆದಿದ್ದ. ತಾಯಿ–ಮಗನ ನಡುವೆ ಇಡೀ ದಿನ ರಂಪವೇ ನಡೆದಿತ್ತು. ತನ್ನ ಮಗನನ್ನು ಸಂಭಾಳಿಸಿ ಸಾಕಾಗಿತ್ತು ಸರೋಜಾಳಿಗೆ. ದೇವರಾಜು ಬಂದದ್ದು ನೋಡಿ ತಾಯಿ–ಮಗ ತಮ್ಮ ಮಾತುಕತೆ ನಿಲ್ಲಿಸಿದ್ದರು. ಅವನನ್ನು ರೂಮಿಗೆ ಅಟ್ಟಿ ಕೂರಿಸಿದ್ದಳು. ಸರೋಜ ಎಷ್ಟೇ ಹೇಳಿದರೂ ಅವನು ಊಟ ಮಾಡಿರಲಿಲ್ಲ. ದೇವರಾಜು ಊಟ ಆದ ಮೇಲೆ ಮಗನನ್ನು ಮತ್ತೆ ಅಡುಗೆಮನೆಗೆ ಕರೆದು ಊಟ ಮಾಡೆಂದು ಓಲೈಸಲು ಶತಪ್ರಯತ್ನ ಮಾಡಿದ್ದಳು. ಪ್ರಯೋಜನವಾಗಿರಲಿಲ್ಲ.

ಮಗನ ವಾದ ಮುಂದುವರಿದೇ ಇತ್ತು, "ಚೆನ್ನೈನಲ್ಲಿ ಫುಟ್‌ಬಾಲ್ ತರಬೇತಿ ಶಿಬಿರ ಇದೆ. ಈ ತರಬೇತಿಯಿಂದ ನನ್ನ ಭವಿಷ್ಯ ಬದಲಾಗುತ್ತದೆ." ಎಂದು ಹೇಳಿದ. ಹೋಗಲು ಹಠ ಹಿಡಿದ್ದಿದ್ದಾನೆ. "ಸದಾ ಇಂತಹ ಅವಕಾಶಗಳು ಸಿಕ್ಕುವುದಿಲ್ಲ. ವಿಶ್ವವಿದ್ಯಾಲಯದಿಂದ ಆಯ್ಕೆಯಾಗಿರುವ ಆಟಗಾರರಲ್ಲಿ ನಾನು ವಯಸ್ಸಿನಲ್ಲಿ ಅತೀ ಕಿರಿಯ".

ಅವನಿಗೆ ಚೆನ್ನೈಗೆ ಹೋಗಲು ಹಣಬೇಕು. ಅಲ್ಲಿ ಉಳಿದುಕೊಳ್ಳಲು ಹಣಬೇಕು. ಹೊಸ ಜೆರ್ಸಿ ಟೀಶರ್ಟ್‌ಗಳು ಮತ್ತು ಕ್ರೀಡಾ ಶೂಗಳಿಗೆ ಹಣದ ಅಗತ್ಯವಿದೆ.

"ಇದು ಅತ್ಯಂತ ಪ್ರತಿಷ್ಠಿತ ತರಬೇತಿ ಕೇಂದ್ರ ಗೊತ್ತಾ? ಬೇರೆ ಬೇರೆ ರಾಜ್ಯಗಳಿಂದಲೂ ಆಟಗಾರರು ಬಂದಿರುತ್ತಾರೆ. ಒಳ್ಳೆಯ ಕೋಚುಗಳು ಇರುತ್ತಾರೆ". ಅವನು ಎಲ್ಲವನ್ನೂ ಹೇಳಿದ.

"ಅಪ್ಪ ಫುಟ್ಬಾಲ್ ಆಟದಲ್ಲಿ ನನ್ನ. ಟ್ಯಾಲೆಂಟನ್ನು ಎಂದಿಗೂ ಒಪ್ಪಿಗೊಂಡಿಲ್ಲ, ಬಂದು ನೋಡಿಯೂ ಇಲ್ಲ. ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಾಗ ಮಾತ್ರ ಅರಚುತ್ತಾನೆ. ಮಾತೆತ್ತಿದರೆ ಸರಿಯಾಗಿ ಇಂಗ್ಲೀಷ್ ಕಲಿತುಕೋ ಎನ್ನುತ್ತಾನೆ."

"ತಂದೆಯ ಬಳಿ ಹಣ ಕೇಳಬೇಡ. ಅವರ ಕಾರ್ಖಾನೆಯದೇ ತಲೆನೋವಾಗಿದೆ. ಸ್ವಲ್ಪ ತಾಳ್ಮೆ ಇರಲಿ. ಅವಕಾಶಗಳು ಮತ್ತೆ ಮತ್ತೆ ಬಂದೇ ಬರುತ್ತವೆ" ಎಂದಳು ಸರೋಜ.

ದೇವರಾಜು ಮನೆಗೆ ಬಂದ ಮೇಲೂ ಎಂ.ಡಿ. ಹೇಳಿದ್ದ ಮಾತು ಅವನ ಕಿವಿಯಲ್ಲಿ ಗುಂಯಿಗುಟ್ಟುತ್ತಿತ್ತು. ಅವರು ಸಂಧಾನದ ಎಲ್ಲ ಬಾಗಿಲುಗಳನ್ನೂ ಮುಚ್ಚಿದ್ದರು. ಪದಾಧಿಕಾರಿಗಳು ಮತ್ತೊಂದೆಡೆ ಮುಷ್ಕರ ಹೂಡಲು ಹಠ ಹಿಡಿದಿದ್ದಾರೆ. ಸ್ಟ್ರೈಕ್ ನೋಟಿಸ್ ಓದುತ್ತಾ ಕುಳಿತ.

ಅಡುಗೆ ಮನೆಯಲ್ಲಿನ ಶಬ್ದ ಅವನಿಗೆ ಕಿರಿಕಿರಿ ಮಾಡುತ್ತಿತ್ತು. ಸಮಾಧಾನದಿಂದ ಪರಿಹಾರ ಹುಡುಕುವ ಪ್ರಯತ್ನಕ್ಕೆ ಭಂಗ ಬರುತಿತ್ತು.

ಅವನ ಮಗ ತನ್ನ ತಾಯಿಯೊಂದಿಗೆ ಜಗಳವಾಡುತ್ತಿದ್ದಾನೆ ಎಂದು ತಿಳಿಯಿತು. ಅವನು ಏಕೋ ದಿನೇದಿನೇ ಹೆಚ್ಚು ಹಠಮಾರಿಯಾಗುತ್ತಿದ್ದಾನೆ. ಅವನು ತನ್ನ ಪರೀಕ್ಷೆಗಳಲ್ಲಿ ಉತ್ತೀರ್ಣನಾಗುತ್ತಾನೆ ಮತ್ತು ಒಳ್ಳೆಯ ಕೆಲಸವನ್ನು ಕಂಡುಕೊಳ್ಳುತ್ತಾನೆ ಎಂಬುದು ಖಾತರಿಯಿಲ್ಲ. ತನ್ನಂತೆ ಮತ್ತೊಬ್ಬ ನೌಕರ ಆಗುವುದು ಅವನಿಗೆ ಇಷ್ಟವಿಲ್ಲ. ತನ್ನ ಮಗ ಓದಿ ಅಧಿಕಾರಿಯಾಗಲಿ ಎಂಬುದು ಅವನ ಕನಸು. ತಾನು ಮಾಡುತ್ತಿರುವ ಸಮಾಜಸೇವೆಯೇ ಸಾಕು.

ಅವನ ಮಗನಿಗೆ ಇದೆಲ್ಲ ಅರ್ಥವಾಗುತ್ತಿಲ್ಲ. ಅವನ ಹುಡುಗಾಟಿಕೆ ದಿನೇದಿನೇ ಹೆಚ್ಚುತ್ತಿದೆ ಅವನು ತನ್ನ ಭವಿಷ್ಯ ಮತ್ತು ವೃತ್ತಿಜೀವನದ ಬಗ್ಗೆ ಚಿಂತಿಸುತ್ತಿಲ್ಲ. ಅಟಕ್ಕೆ ಎಂದು ಹಣ ಕೇಳುತ್ತಲೇ ಇರುತ್ತಾನೆ. ಇಲ್ಲವೇ ಫುಟ್ಬಾಲ್ ಆಟದಲ್ಲಿ ಸಮಯ ಕಳೆಯುತ್ತಾನೆ. ಹೊರಗಿನ ಜಗತ್ತು ಎಷ್ಟು ಕ್ರೂರವಾಗಿದೆ ಎಂದು ಸೂರ್ಯನಿಗೆ ತಿಳಿದಿಲ್ಲ. ನಾನು ಅವನೊಂದಿಗೆ ಕುಳಿತು ಒಮ್ಮೆ ಮಾತನಾಡಬೇಕು ಎಂದುಕೊಂಡ .

ನಾಳೆ ಮುಷ್ಕರ ಸೂಚನೆ ಕೊಡುವುದೇ ಬೇಡವೇ ಯೋಚಿಸುತ್ತಿದ್ದ. ಮತ್ತೆ ಅಡುಗೆ ಮನೆಯಲ್ಲಿ ಶಬ್ದ ಕೇಳುತ್ತಿದೆ. ಏನೋ ಕೆಳಗೆ ಬಿದ್ದ ಶಬ್ದ. ತಾನು ಇಲ್ಲಿ ನಾಳೆ ಏನು ಮಾಡಬೇಕೆಂಬ ನಿರ್ಧಾರ ತೆಗೆದುಕೊಳ್ಳಬೇಕು, ಕಾರ್ಮಿಕರು ಎಲ್ಲರು ಕಾಯುತ್ತಿರುತ್ತಾರೆ. ಅವರೆಲ್ಲರ ಭವಿಷ್ಯ ಇವನು ತೆಗೆದುಕೊಳ್ಳುವ ನಿರ್ಧಾರದ ಮೇಲೆ ನಿಂತಿದೆ. ಎಚ್ಚರದಿಂದ ಯೋಚಿಸಿ ತೆಗೆದುಕೊಳ್ಳಬೇಕಾದ ನಿರ್ಧಾರ. ಆದರೆ ಅವನಿಗೆ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಒಳಗಿಂದ ಮಾತುಕತೆಗಳು ಕೇಳುತ್ತಲೇ ಇವೆ. ಕಿರಿಕಿರಿ ಆಗುತ್ತದೆ.

ಕಾನೂನು ಸಲಹೆಗಾರರ ಫೋನು ಬಂತು, "ಸ್ಟ್ರೈಕ್ ನೋಟಿಸ್ ಓದಿದಿರಾ? ನಾಳೆ ಕೊಡಬಹುದಲ್ಲವೇ..." ಮುಂದೇನೋ ಹೇಳುವುದರಲ್ಲಿದ್ದರು. "ಕ್ಯಾವೀಯೆಟ್ ತೆಗೆದುಕೊಳ್ಳಬೇಕೇ?.." ಮತ್ತೆ ಒಳಗೆ ದಿಢೀರನೆ ಶಬ್ದ. ಅವನಿಗೆ ಸಹಿಸಲಾಗಲಿಲ್ಲ. ದೊಡ್ಡ ಸಮಸ್ಯೆಗೆ ಪರಿಹಾರ ಹುಡುಕಬೇಕಿದೆ. ನಾಳೆ ಯಾರುಯಾರನ್ನು ಭೇಟಿ ಆಗುವುದು ಎಂದು ಯೋಚಿಸಬೇಕು. ಒಬ್ಬನೇ ಕುಳಿತರೆ ಏನಾದರೂ ಹೊಳೆದೀತು ಎಂದು ಮನೆಗೆ ಬಂದರೆ ಇಲ್ಲಿ ಮತ್ತೆ ಅದೇ ರಂಪ.

ಅಡುಗೆ ಮನೆಯಲ್ಲಿ ಮಾತು ಮತ್ತೆ ಜೋರಾಯಿತು. ಲೋಟ ನೆಲಕ್ಕೆ ಬಿದ್ದ ಶಬ್ದ. ಇಲ್ಲ ಪಾತ್ರೆಯೇ? ಏನೋ ಅನಾಹುತ ಆಗಿದೆ. ಎದ್ದವನೇ ಅಡುಗೆಮನೆ ಕಡೆ ನಡೆದ. ಪಡಸಾಲೆ ದಾಟಿ ಓಣಿ ಹಿಡಿದು ಹೋದರೆ ಅಡುಗೆಮನೆ. ಅಡುಗೆಮನೆ ಬಾಗಿಲು ಮುಂದಕ್ಕೆ ದೂಡಿರುವುದು ಓಣಿಗೇ ಕಾಣುತ್ತದೆ. ಅವರ ಮಾತುಗಳು ಮಾತ್ರ ಸ್ಪಷ್ಟ ಕೇಳಿಸುತ್ತಿದ್ದವು. ಅವನು ಅಲ್ಲಿಯೇ ನಿಂತ.

"ದಯವಿಟ್ಟು ಊಟ ಮಾಡು. ಸಂಜೆಯಿಂದ ನಿನಗೆ ಹೇಳುತ್ತಿದ್ದೇನೆ. ನನ್ನ ಸಂಯಮ ಕಳೆಯಬೇಡ. ನಾನು ನಿನ್ನ ಅಪ್ಪನೊಂದಿಗೆ ಸಮಯ ನೋಡಿ ಮಾತನಾಡುತ್ತೇನೆ. ನಿನ್ನ ತಂದೆಯ ಕಾರ್ಖಾನೆಯಲ್ಲಿ ಸ್ಟ್ರೈಕು ಆಗುವ ಸಾಧ್ಯತೆ ಇದೆಯಂತೆ" ಸರೋಜ ಹೇಳುತ್ತಿದ್ದಳು.

"ಹೌದು, ಅವರು ಯಾವಾಗಲೂ ಊರಿನವರ ಕಷ್ಟಸುಖಗಳ ಬಗ್ಗೆ ಯೋಚಿಸುತ್ತಿರುತ್ತಾರೆ. ಮಗನ ಜೊತೆ ಒಂದು ಮಾತನಾಡಲೂ ಸಮಯವಿರುವುದಿಲ್ಲ" ಅದು ಸೂರ್ಯನ ಮಾತು.

"ನಾನು ಸ್ನೇಹಿತರಿಂದ ಹಣ ಎರವಲು ಪಡೆದಿದ್ದೇನೆ. ನಾನೇ ಮುಂದೆ ತೀರಿಸುತ್ತೇನೆ. ಬೇರೆಡೆ ಪಾರ್ಟ್ ಟೈಂ ಕೆಲಸ ಮಾಡುತ್ತೇನೆ. ನೀವಿಬ್ಬರೂ ನನಗೆ ಸಹಾಯ ಮಾಡುವುದಿಲ್ಲ ಎಂದು ನನಗೆ ಚನ್ನಾಗಿ ಗೊತ್ತು. ನನ್ನ ಬ್ಯಾಕ್‌ಪ್ಯಾಕ್ ಸಿದ್ಧಮಾಡಿಕೊಂಡಿದ್ದೇನೆ. ನೀವು ಹಣ ಕೊಡದೆಹೋದರೂ ಇಂದೇ ರಾತ್ರಿ ಹೊರಡುತ್ತೇನೆ. ಸ್ನೇಹಿತನ ಬೈಕ್ ತಂದಿದ್ದೇನೆ. ನೀವೇ ನಿರ್ಧಾರಮಾಡಿ."

ಮತ್ತೆ ಅಮ್ಮನನ್ನು ಕಾಡಹತ್ತಿದ್ದಾನೆ ಪುಂಡ ಎಂದುಕೊಂಡು ಒಳಹೋಗಿ ನೋಡುವುದೇ ಸರಿ ಎಂದುಕೊಂಡ. ಬಾಗಿಲು ಸರಿಸಿದ. ಊಟದ ತಟ್ಟೆ ಬೋರಲು ಬಿದ್ದಿತ್ತು. ಅದರಲ್ಲಿ ಬಡಿಸಿದ್ದ ಅನ್ನ ಎಲ್ಲ ನೆಲದ ಮೇಲೆ ಚೆಲ್ಲಿತ್ತು. ಆ ಬದಿಯಲ್ಲಿ ಸರೋಜ ಬಾಗಿ ಎತ್ತುವ ಕೆಲಸ ಮಾಡುತ್ತಿದ್ದಾಳೆ. ಈ ಬದಿ ಮಗರಾಯ ನಿಂತು ಬುಸುಗುಟ್ಟುತ್ತಿದ್ದ. ಬಹುಶಃ ತಟ್ಟೆ ಒದ್ದಿರಬಹುದು. ಫುಟ್ಬಾಲ್ ಪ್ರವೀಣ ತಾನೇ. ತಟ್ಟೆ ಲೋಟ ಎರಡೂ ಸರೋಜಳ ಕಾಲಬಳ ರೆಡ್ ಆಕ್ಸೈಡ್ ನೆಲದ ಮೇಲೆ ಬಿದ್ದಿರುವುದು ಕಾಣುತ್ತಿದೆ. ದೇವರಾಜು ಸಿಟ್ಟು ಚೆಲ್ಲಿದ ಅನ್ನ ಕಂಡು ಕ್ಷಣಕಾಲ ನೆತ್ತಿಗೇರಿತು.

ಇವನು ಒಳ ಬಂದದ್ದು ನೋಡಿ ಸರೋಜ ಗಾಬರಿಗೊಂಡಳು. ಅನಾಹುತ ಕಾದಿದೆ ಎಂದೆನಿಸಿತು ಅವಳಿಗೆ. ಮಗ ತಲೆ ಎತ್ತಿ ನೋಡಲಿಲ್ಲ.

ಮಗನಿಗೆ ಕಣ್ಣಲ್ಲಿ ಕಣ್ಣಿಟ್ಟು ಸಮಾಧಾನದಿಂದ ಹೇಳಿದ, "ನಿನಗೆ ನಾವು ಸಾಧ್ಯವಾದಷ್ಟು ಮಾಡಿದ್ದೇವೆ. ನಿನಗೆ ಇದು ಸಾಲದು ಎನಿಸಿದರೆ, ನಿನ್ನ ದಾರಿ ಹುಡುಕಿಕೊ. ಬಾಗಿಲು ಸದಾ ತೆರೆದಿದೆ" ತನ್ನ ಕೈಯನ್ನು ಬಾಗಿಲ ಕಡೆ ತೋರಿಸುತ್ತಾ ಹೇಳಿದ. ಅವನ ಧ್ವನಿಯಲ್ಲಿ ಉದ್ವೇಗವಿರಲಿಲ್ಲ. ಸ್ಪಷ್ಟವಾದ ಮಾತುಗಳು. ಮೊದಲೇ ಅಭ್ಯಾಸ ಮಾಡಿಕೊಂಡು ಆಡಿದಂತಹ ಮಾತುಗಳು. ಅವನಾಡಿದ ಮಾತುಗಳಿಂದ ಅವನಿಗೇ ಆಶ್ಚರ್ಯವಾಯಿತು.

ಸೂರ್ಯ ಸರಕ್ಕನೆ ತಿರುಗಿ ಹೊರಗೆ ಹೊರಟ. ಅವನು ಮಹಡಿಯ ಮೇಲಿನ ರೂಮಿಗೆ ಹೋಗಿ ತನ್ನ ಬ್ಯಾಕ್‌ಪ್ಯಾಕ್ ಎತ್ತಿಕೊಂಡಿದ್ದು ಕಂಡಿತು. ಸರೋಜ ತನ್ನ ಕೆಲಸ ಅಲ್ಲಿಗೆ ಬಿಟ್ಟು, ಓಡಿಹೋಗಿ ಮಗನ ಕೈ ಹಿಡಿದುಕೊಂಡಳು, "ದಮ್ಮಯ್ಯ ಎನ್ನುತ್ತೇನೆ ಒಳಗೆ ಹೋಗು. ಅವರು ಕೋಪದಿಂದ ಹೇಳಿದ್ದಾರೆ. ನಿನಗೆ ಬೇಕಾದ್ದೆಲ್ಲ ಆಮೇಲೆ ನೋಡೋಣ. ಈಗ ಸುಮ್ಮನೆ ಒಳಗೆ ಹೋಗಿ ಮಲಗಿಕೋ." ಅವನನ್ನು ಅವನ ರೂಮಿಗೆ ಅಟ್ಟಿದಳು.

ಕೆಳಗೆ ಬಂದು ರೂಮಿನಲ್ಲಿ ಓದುತ್ತಿದ್ದ ಮಗಳಿಗೆ, "ಹೋಗೇ, ಅಡುಗೆಮನೆ ಕ್ಲೀನ್ ಮಾಡು." ಎಂದವಳು, ದೇವರಾಜು ಮುಂದೆ ನಿಂತು, "ಈಗ ಮಾತು ಮುಂದುವರೆಸುವುದು ಬೇಡ, ಕೆಟ್ಟ ಗಳಿಗೆ" ಎಂದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿತ್ತು, ಕೈಗಳು ಜೋಡಿಸಿದ್ದವು. ದೇವರಾಜು ಮಾತನಾಡಲಿಲ್ಲ. ಅವನು ವಿಚಲಿತನಾದ.

ಮಗಳ ಜೊತೆ ಕೈ ಜೋಡಿಸಲು ಅಡುಗೆ ಮನೆಗೆ ಹೊರಟಳು. ಕೆಲಸವೆಲ್ಲ ಮುಗಿದ ಮೇಲೆ ಏಕೋ ಯಾವುದೂ ಬೇಡವೆನಿಸಿತು. ನಿದ್ದೆ ಬಾರದಿದ್ದರೂ ದೀಪ ಆರಿಸಿ ಪಡಸಾಲೆಯ ದಿವಾನದ ಮೇಲೆಯೇ ಉರುಳಿಕೊಂಡಳು.

ಇಡೀ ದಿನ ದಿಂಬಿಗೆ ತಲೆ ಆನಿಸಿರಲಿಲ್ಲ. ದೇಹ ದಣಿದಿತ್ತು. ದೇವರಾಜು ಯಥಾಪ್ರಕಾರ ತನ್ನ ಕೆಲಸದಲ್ಲಿ ಮಗ್ನನಾದ.

ಸರೋಜಾಳಿಗೆ ತೂಕಡಿಕೆ ಬಂದಿತ್ತು. ಈ ಮಧ್ಯೆ ಸೂರ್ಯ ತನ್ನ ಬ್ಯಾಗು ಹಿಡಿದು ಹೊರಗೆ ಹೊರಟನೆ? ಕೇಳಿದ್ದು ಮೋಟಾರ್‌ಬೈಕ್ ಶಬ್ದವೆ? ರಾತ್ರಿಯೆಲ್ಲ ಸರೋಜಾಳಿಗೆ ನಿದ್ದೆ ಇಲ್ಲ. ಯಾರೋ ಮಹಡಿಯ ಮೇಲೆ ಹತ್ತಿ ಹೋದಂತೆ, ಮತ್ತೆ ಇಳಿದಂತೆ..., ಹೆಜ್ಜೆ ಸಪ್ಪಳ, ಮೋಟಾರ್‌ಬೈಕ್ ಸ್ಟಾರ್ಟ್ ಮಾಡಿದ ಶಬ್ದ, ಯಾರದೋ ಫೋನು ಕರೆ ಬಂದಂತೆ.., ಮಂಪರು ಮಂಪರು, ಸೂರ್ಯ ಹಸಿದುಕೊಂಡು ಎದುರು ಕೂತಿದ್ದಂತೆ..., ಅಳುತ್ತಿದ್ದಂತೆ. ಕನಸೇ, ನಿದ್ದೆ ಹತ್ತದೆ ಹೊರಳಾಟ. ಮಗಳು ಹೊದಿಸಿರಬೇಕು, ಹೊದಿಕೆ ಮೇಲೆಳೆದುಕೊಂಡು ಮಲಗಿದಳು.

ಬೆಳಕಾಗಿದೆ.. ಎಂದಿನಂತೆ ಎದ್ದು ಮನೆ ಬಾಗಿಲು ತೆರೆದು ಗೇಟಿಗೆ ಸಿಕ್ಕಿಸಿದ್ದ ದಿನಪತ್ರಿಕೆ ಕೈಗೆತ್ತಿಕೊಂಡಿದ್ದಾಳೆ. ಎಂದೂ ಓದದವಳು ಇಂದೇಕೋ ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದಾಳೆ. ಮಧ್ಯದ ಪುಟದಲ್ಲಿ ದಪ್ಪ ಅಕ್ಷರಗಳಲ್ಲಿ ಅಚ್ಚಾಗಿದ್ದ ವರದಿ, 'ಬಸ್ಸನ್ನು ಮೋಟಾರ್ ಬೈಕ್‌ನಲ್ಲಿ ಹಿಂದಿಕ್ಕಲು ಹೋದ ಯುವಕನ ದುರ್ಮರಣ'.

"ಸೂರ್ಯಾ" ಎಂದು ಒಮ್ಮೆಲೆ ಚೀರಿದಳು ಸರೋಜ. ರಾತ್ರಿ ಯಾವಾಗ ನಿದ್ದೆ ಬಂದಿತ್ತೋ ಅವಳಿಗೆ ತಿಳಿಯದು. ಪಡಸಾಲೆಯಲ್ಲೇ ಮಲಗಿದ್ದಾಳೆ. ಕೆಟ್ಟ ಕನಸು, ದಡದಡನೆ ಎದ್ದು ಮಹಡಿ ಕಡೆ ನೋಡಿದಳು. ಬಾಗಿಲು ತೆರೆದಿದೆ

ಅವಳು ಚೀರಿದ ರೀತಿಗೆ ಮನೆಯ ಎಲ್ಲರಿಗೂ ಎಚ್ಚರವಾಯಿತು. ಮಗಳು ತಾಯಿಯನ್ನು ಮೆಲ್ಲನೆ ಕೇಳಿದಳು, "ಅಮ್ಮ ಕನಸು ಬಿತ್ತೆ?"

"ಅಣ್ಣ ರಾತ್ರಿಯೇ ಬೈಕು ಹಿಂದಿರುಗಿಸಿ ಬಂದು ಮಲಗಿದ್ದಾನೆ. ಅಪ್ಪ ಸಮಾಧಾನ ಮಾಡಿದ್ದಾರೆ. ನಾಳೆ ಬಸ್ಸಿನಲ್ಲಿ ಚೆನ್ನೈಗೆ ಕಳುಹಿಸುವ ವ್ಯವಸ್ಥೆ ಅವರೇ ಮಾಡಿದ್ದಾರೆ" ಎಂದಳು.

ದೇವರಾಜು ತನ್ನ ಚೇರಿನಲ್ಲೇ ಕುಳಿತು ನಿದ್ರಿಸಿದ್ದಾನೆ. ಹರಿದು ಹಾಕಿದ್ದ ಸ್ಟ್ರೈಕು ನೋಟೀಸಿನ ಚೂರುಗಳು ಟೇಬಲ್ ಮೇಲೆ ಬಿದ್ದಿವೆ.

***

ಲಲಿತ ಪ್ರಬಂಧ

ಆ ಘಟನೆಯ ಸುತ್ತ

–ಶೀಲಾ ಅರಕಲಗೂಡು

ಅಬ್ಬಬ್ಬಾ! ದಿನನಿತ್ಯ ಪ್ರತಿಯೊಬ್ಬರ ಬದುಕಿನಲ್ಲೂ, ಪ್ರತಿ ಘಳಿಗೆಯಲ್ಲೂ, ಏನೇನೋ ಘಟನೆಗಳು ಘಟಿಸುತ್ತಲೇ ಇರುತ್ತವೆ. ನಾವು ಆ ಘಟನೆಗಳ ಅಂತರಾಳಕ್ಕಿಳಿಯುವುದೇ ಇಲ್ಲವಲ್ಲ! ಅತ್ಯಂತ ಸಾಧಾರಣ ಎನಿಸುವಂತಹ ಘಟನೆ ಕೂಡಾ, ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ, ಅದಕ್ಕೆ ಸಂಬಂಧಿಸಿದಂತೆ ಇರುವ ಅನೇಕ ಅದ್ಭುತವೆನಿಸುವ ವಿಚಾರಗಳು, ಹೊಸ ಹೊಳಹುಗಳು, ವೈಚಿತ್ರ್ಯಗಳು ಇತ್ಯಾದಿಗಳೆಲ್ಲ ಗೋಚರವಾಗ ಬಹುದೇನೋ ಎನಿಸುತ್ತದೆ. ಅನುಭವಗಳು ಅರಿವಿನ ಪಥದ ದೀಪಗಳಾಗುತ್ತವೆ. ಆದರೆ ನಾನು ಆ ರೀತಿಯಾಗಿ ಆಲೋಚಿಸುವ ರೂಢಿಯನ್ನೇ ಮಾಡಿಕೊಂಡಿರಲಿಲ್ಲ. ನಮ್ಮ ದೃಷ್ಟಿಕೋನವನ್ನು ವಿಸ್ತರಿಸಿಕೊಳ್ಳುವ, ಅವಶ್ಯವಿದ್ದಲ್ಲಿ ಬದಲಿಸಿಕೊಳ್ಳುವ ಸ್ವಭಾವ ನಮ್ಮದಾದರೆ, ತಡಕಿ–ಹುಡುಕಿ ಅರಿವಿನ ಆನಂದದ ಕ್ಷಣಗಳನ್ನು ನಮ್ಮದಾಗಿಸಿ ಕೊಳ್ಳಬಹುದಲ್ವಾ? ಎನ್ನುವ ನನ್ನ ಮಟ್ಟಿಗಿನ ಹೊಸ ಆಲೋಚನೆ.

'ಸರಿ, ಇಷ್ಟೆಲ್ಲಾ ಪುರಾಣ ಬರೀತಿದ್ದೀಯಲ್ಲಾ, ನೀನ್ಯಾವ ಅನುಭವದಿಂದ ಅದಾವ ಆನಂದ ಪಡೆದೆ? ಏನು ಹೆಚ್ಚಿನದನ್ನು ಅರಿತೆ?' ಎಂದೆಲ್ಲ ಕೇಳುವಿರೇನೋ ಅಲ್ವಾ? ನಂಗೂ ಹಾಗೆಲ್ಲಾ ಚೆಂದವಾಗಿ ಆಲೋಚನೆ ಮಾಡೋಕೇ ಬರೋಲ್ಲ. ನಿಮ್ಮೊಂದಿಗೆ ವಿಚಾರ ಹಂಚಿಕೊಳ್ಳುತ್ತಾ ನಾನೂ ಕಲಿಯುವ ಪ್ರಯತ್ನ ಮಾಡಬೇಕು ಅಂದ್ಕೋತಿದ್ದೀನಿ.

ಕೆಲವು ದಿನಗಳ ಹಿಂದೆ ನಡೆದ ಒಂದು ಸಣ್ಣ ಘಟನೆಯ ಬಗ್ಗೆ ಹೀಗೆ ಆಲೋಚನೆ ಮಾಡುತ್ತಾ ಹೋದಾಗ ಅನೇಕ ವಿಚಾರಗಳು ನನಗೆ ಖಂಡಿತ ಹೊಳೆದವು. ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿದ್ದರಿಂದ ಈ ಲೇಖನ ಬರೆಯುತ್ತಿದ್ದೇನೆ. ಓದ್ತೀರಾ ಅಲ್ವಾ?

ಅದೊಂದು ಪುಸ್ತಕ ಬಿಡುಗಡೆ ಸಮಾರಂಭ! ನನ್ನ ಆತ್ಮೀಯ ಗೆಳತಿಯೊಬ್ಬರ ಪುಸ್ತಕ ಬಿಡುಗಡೆ ಸಮಾರಂಭವಾದ್ದರಿಂದ, ಜೊತೆಗೆ ಮನೆಯ ಹತ್ತಿರವೇ ಒಂದು ಸಭಾಂಗಣದಲ್ಲಿ ನಡೆಯುತ್ತಿದ್ದುದರಿಂದ, ಸಂಭ್ರಮದಿಂದಲೇ ಹೊರಟೆ. ನಡೆದು ಹೋಗಬಹುದಾದಷ್ಟು ಹತ್ತಿರವಿದ್ದುದರಿಂದ ನಡೆದೇ ಹೊರಟೆ. 'ಯಾವ್ಯಾವ ಪರಿಚಿತರು, ಆತ್ಮೀಯರು ಬರಬಹುದು? ಈಗಾಗಲೇ ಯಾರಾದರೂ ಬಂದಿರಬಹುದೇ?' ಎಂದೆಲ್ಲ ಆಲೋಚಿಸುತ್ತಾ ನಡೆಯುವಷ್ಟರಲ್ಲಿ ಸಭಾಂಗಣ ತಲುಪಿಯೇಬಿಟ್ಟಿದ್ದೆ.

ಮುಖ್ಯ ದ್ವಾರದಲ್ಲೇ ಪರಿಚಿತರೊಬ್ಬರನ್ನು ಕಂಡು ತುಂಬಾ ಸಂತೋಷವಾಯ್ತು. ಅವರೊಂದಿಗೆ ಲಿಫ್ಟ್ ಏರಿ ಮುಖ್ಯ ಸಭಾಂಗಣ ತಲುಪಿದೆ. ಒಳಗೆ ಕಾಲಿಡುವ ಮೊದಲೇ ತೆರೆದ ಬಾಗಿಲ ಮೂಲಕ ಕೆಲ ಪರಿಚಿತರ ಮುಖಗಳನ್ನು ಕಂಡು ಸಂತೋಷದಿಂದ ಒಳಹೊಕ್ಕೆ. ಎಲ್ಲರೊಂದಿಗೆ ಮಾತನಾಡುತ್ತಾ ಅಲ್ಲೇ ಸ್ವಲ್ಪ ಹೊತ್ತು ಕಳೆದೆ. ಒಂದಿಬ್ಬರು ನಾನು ಬರೆದು ವೈರಲ್ ಆದ ಕ ಕಾರ ಕವನಕ್ಕಾಗಿ ನನ್ನನ್ನು ಅಭಿನಂದಿಸಿದರು. ಸಂತೋಷ ಆಗದಿರುತ್ತದೆಯೇ? 'ಆಹಾ!... ನನ್ನನ್ನೂ ಗುರುತಿಸಿದರಲ್ಲಾ' ಎನ್ನುವ ಹೆಮ್ಮೆಯ ಭಾವದೊಂದಿಗೆ ಕುರ್ಚಿಗಳ ಸಾಲಿನಲ್ಲಿ ಕುಳಿತಿದ್ದ ನನ್ನ ಮತ್ತೊಬ್ಬ ಆತ್ಮೀಯ ಗೆಳತಿಯ ಪಕ್ಕ ಹೋಗಿ ಕುಳಿತೆ. ಆಕೆಯೋ ತುಂಬಾ ಒಳ್ಳೆಯ

ಕವಯಿತ್ರಿ ಹಾಗೂ ಲೇಖಕಿ. ಅದ್ಭುತ ಭಾವಪೂರಿತ ಕವನಗಳನ್ನು ಬರೆಯುವುದರಲ್ಲಿ ಆಕೆಯದು ಎತ್ತಿದ ಕೈ! ಆಕೆಯ ಪಕ್ಕ ಕುಳಿತಾಗ ನನ್ನ ಹೆಮ್ಮೆಯ ಭಾವ ಅಲ್ಲೇ ಹೆಡೆ ಮುದುರಿಕೊಂಡ ಹಾವಿನಂತೆ ತೆಪ್ಪಗಾಯಿತು.

ಗೆಳತಿಯೊಂದಿಗೆ ಮಾತನಾಡುತ್ತಾ, ಹಾಗೇ ಎಲ್ಲಾ ಕಡೆ ಕಣ್ಣು ಹಾಯಿಸಿದೆ. ಪುಸ್ತಕ ಬಿಡುಗಡೆ ಸಮಾರಂಭವಾದ್ದರಿಂದ ಸಾಕಷ್ಟು ಸಾಹಿತಿಗಳು ಅಲ್ಲಿ ಸೇರಿದ್ದರು. ಆಗ ನನ್ನ ಬಳಿ ಒಬ್ಬ ಹಿರಿಯರು ಬಂದು, 'ಸ್ವಲ್ಪ ಈ ಕಡೆ ಬರ್ತೀರಾ?' ಎಂದು ಕೇಳಿದರು. ಅವರ ಮುಖ ನೋಡಿದೆ, ಪರಿಚಯದವರಾಗಿರಲಿಲ್ಲ. ಸರಳವಾದ ಬಟ್ಟೆ ತೊಟ್ಟಿದ್ದರು. ಒಂದೇ ಕ್ಷಣದಲ್ಲಿ ಹಲವಾರು ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಮೂಡಿದವು. ಮುದುಡಿ ಕುಳಿತಿದ್ದ ಅಹಂಕಾರ ಮೆಲ್ಲನೆ ಹೆಡೆಯೆತ್ತಲು ಯತ್ನಿಸಿತು. 'ನನ್ನ 'ಕ' ಕಾರ ಕವನ ಕೇಳಿದ್ದು, ಈಗ ನನ್ನ ಪರಿಚಯ ಮಾಡಿಕೊಳ್ಳಲು ಬಯಸುತ್ತಿರಬಹುದೇ?' ಎನ್ನುವ ಅನುಮಾನ ಬಂತು. ಪಕ್ಕದಲ್ಲಿ ಕುಳಿತಿದ್ದ ಗೆಳತಿಯೂ ಪ್ರಶ್ನಾರ್ಥಕವಾಗಿ ನೋಡುತ್ತಿದ್ದಳು. ಅಷ್ಟರಲ್ಲೇ ಅವರು ಮತ್ತೊಮ್ಮೆ, 'ಒಂದ್ನಿಮಿಷ ಈ ಕಡೆ ಬರ್ತೀರಾ?' ಎಂದು ಕೇಳಿದರು. ಸರಿ, ನಾನೆದ್ದು, 'ಅದೇನು ಕೇಳಬಹುದು?' ಎನ್ನುವ ಕುತೂಹಲದೊಂದಿಗೆ, ಅವರೊಂದಿಗೆ ಬಾಗಿಲ ಕಡೆ ನಡೆದೆ.

ಬಾಗಿಲ ಬಳಿ ಒಂದೆಡೆ ನಿಂತು, ಅವರು ನನ್ನ ಬಳಿ ಬಾಗಿ, 'ದಯವಿಟ್ಟು ನಿಮ್ಮ ಚಪ್ಪಲಿಗಳನ್ನು ಬಾಗಿಲ ಹೊರ ಬದಿಯಲ್ಲಿ ಬಿಡ್ತೀರಾ?' ಎಂದರು. ನನಗೆ ಅಲ್ಲೇ ಕುಸಿದು ಹೋಗುವಂತಾಯ್ತು. ಅದೇನು ಕೇಳ್ತಾರೋ ಅಂದ್ಕೊಂಡಿದ್ದ ನನಗೆ, ಅನಿರೀಕ್ಷಿತ ಪ್ರಶ್ನೆಯಿಂದ ಭ್ರಮೆಯಲ್ಲಿದ್ದ ನಾನು ವಾಸ್ತವವನ್ನು ಅರಿಯುವಂತಾಯ್ತು. ನನ್ನ ತಪ್ಪಿನ ಅರಿವಾಗಿ, 'ಕ್ಷಮಿಸಿ, ತಿಳಿಯದೆ ಚಪ್ಪಲಿ ಹಾಕಿಕೊಂಡೇ ಒಳಗೆ ಬಂದುಬಿಟ್ಟೆ' ಎಂದು ಹೇಳಿ, ಚಪ್ಪಲಿಗಳನ್ನು ಹೊರಗೆ ಬಿಟ್ಟು ಒಳಗೆ ಬಂದು ಮತ್ತೆ ಗೆಳತಿಯ ಪಕ್ಕದಲ್ಲಿ ಕುಳಿತೆ. ಪ್ರಶ್ನಾರ್ಥಕ ಮುಖಭಾವದಿಂದ ನೋಡಿದ ಗೆಳತಿಗೆ ವಿಷಯ ತಿಳಿಸಿದೆ. ನನ್ನ ಅಹಂಕಾರದ ಆಲೋಚನೆಯನ್ನೂ, ವಾಸ್ತವವಾಗಿ ನಡೆದದ್ದನ್ನೂ ಆಕೆಗೆ ತಿಳಿಸಿದೆ. ಇಬ್ಬರೂ ಮನಸಾರೆ ನಕ್ಕೆವು.

ನಂತರ ಗಮನಿಸಿದಾಗ, ಆ ವ್ಯಕ್ತಿ ಎಲ್ಲರ ಕಾಲುಗಳನ್ನು ಗಮನಿಸುತ್ತಿದ್ದು, ಚಪ್ಪಲಿ ಹಾಕಿದ್ದವರ ಬಳಿ ಹೋಗಿ ಮೆಲುಮಾತಿನಿಂದ ಈಚೆಗೆ ಕರೆದು, ಚಪ್ಪಲಿಗಳನ್ನು ಹೊರಗೆ ಬಿಡಲು ಹೇಳುತ್ತಿದ್ದುದನ್ನು ಗಮನಿಸಿದೆ. ಆಗ ನಾನು ಹಾಗೂ ನನ್ನ ಗೆಳತಿ ಇಬ್ಬರೂ ಮಾತನಾಡಿಕೊಂಡೆವು, 'ಬಹುಶಃ ಈ ಮನುಷ್ಯ ಈ ಸಭಾಂಗಣವನ್ನು ನೋಡಿಕೊಳ್ಳುವವರಿರಬೇಕು. ಹಾಗಾಗಿ ಎಲ್ಲರನ್ನೂ ಗಮನಿಸುತ್ತಿದ್ದಾರೆ' ಎಂದು. ಸ್ವಲ್ಪ ಹೊತ್ತಿನ ಬಳಿಕ ನೋಡಿದರೆ ಸಭೆಗೆ ಬಂದಿದ್ದ ಎಷ್ಟೋ ಜನಗಳು ಇವರನ್ನು ಮಾತನಾಡಿಸುತ್ತಿದ್ದುದನ್ನು ನೋಡಿ, 'ಇವರು ಯಾರಿರಬಹುದು?' ಎಂಬ ಕುತೂಹಲ ಕೂಡಾ ಉಂಟಾಯ್ತು.

ಅಷ್ಟರಲ್ಲಿ ಅಂದಿನ ಕೇಂದ್ರಬಿಂದುವಾಗಿದ್ದು, ಸಮಾರಂಭ ಏರ್ಪಡಿಸಿದ್ದ ನನ್ನ ಗೆಳತಿ ಅಲ್ಲಿಗೆ ಬಂದು, ಅವರನ್ನು ನನಗೆ ಪರಿಚಯಿಸುತ್ತಾ ಹೇಳಿದಳು, 'ಇವರು ರಿಟೈರ್ಡ್ ಪೋಸ್ಟ್ ಮಾಸ್ಟರ್, ತುಂಬಾ ಒಳ್ಳೆಯ ಸಾಹಿತಿ. ಸಾಕಷ್ಟು ಸಾಹಿತ್ಯ ಕೃಷಿ ಮಾಡಿದ್ದಾರೆ. ಇವತ್ತು ನನ್ನ ಪುಸ್ತಕ ಹೊರಬರಲು ಇವರು ತುಂಬಾ ಸಹಾಯ ಹಸ್ತ ನೀಡಿದ್ದಾರೆ. ಅದಕ್ಕೆ ಇವರನ್ನೇ ಇಂದಿನ ಸಭೆಯ ಅಧ್ಯಕ್ಷತೆ ವಹಿಸಲು ಕೇಳಿಕೊಂಡಿದ್ದೇನೆ' ಎಂದು. ಇದನ್ನು ಕೇಳಿದ ನಾನು ದಂಗು ಬಡಿದುಹೋದೆ. ಅವರ ಸರಳತೆಗೆ ಮಾರುಹೋದೆ.

ಮತ್ತೆ ನನ್ನ ಸ್ಥಾನಕ್ಕೆ ಬಂದು ಕುಳಿತ ನನ್ನ ಮನಸ್ಸು ಚಿಂತನೆಯಲ್ಲಿ ತೊಡಗಿತು. ಸಾಮಾನ್ಯವಾಗಿ, ಸಮಾರಂಭದ ಅಧ್ಯಕ್ಷತೆ ವಹಿಸಿದವರು ಸಮಯಕ್ಕೆ ಮುಂಚೆಯೇ ಬಂದಿದ್ದಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿರುತ್ತಾರೆ. ಇವರಾದರೋ, ಸಾಮಾಜಿಕ ಕಳಕಳಿ ತೋರಿಸುತ್ತಾ ಎಲ್ಲೆಡೆ ಓಡಾಡುತ್ತಿದ್ದಾರೆ. ಚಪ್ಪಲಿ ಧರಿಸಿ ಕುಳಿತವರನ್ನು ಗಮನಿಸಿ, ಅವರಿಗೆ ಕಸಿವಿಸಿಯಾಗದಂತೆ ಮೆಲುವಾಗಿ ಆಚೆಗೆ ಕರೆದು ತಿಳಿಸುತ್ತಿದ್ದಾರೆ. ಇದನ್ನು ಗಮನಿಸಿ ಆತನ ಬಗ್ಗೆ ನನಗೆ ತುಂಬಾ ಗೌರವದ ಭಾವನೆ ಮೂಡಿತು. ಯಾವುದೇ ಕಾರ್ಯ ಮಾಡುವಾಗ ಏನು ಮಾಡುತ್ತಾರೆ ಅನ್ನುವುದಕ್ಕಿಂತ ಹೇಗೆ ಮಾಡುತ್ತಾರೆ ಎನ್ನುವುದು ಮುಖ್ಯವಾಗುತ್ತದೆ ಅಲ್ಲವೇ?


ಮಾನ್ಯ ಡಿವಿಜಿಯವರು ತಮ್ಮ ಸಂಸ್ಕೃತಿ ಎನ್ನುವ ಪುಸ್ತಕದಲ್ಲಿ 'ಸ್ವಸ್ಥಾನ ಪರಿಜ್ಞಾನ' ಎಂಬ ವಿಷಯದ ಬಗ್ಗೆ ಬರೆದದ್ದು ನೆನಪಿಗೆ ಬಂತು. 'ಎಷ್ಟೊಂದು ಜನರು ಈಗಾಗಲೇ ಬಾಗಿಲ ಹೊರಗೆ ಚಪ್ಪಲಿ ಕಳಚಿ ಇಟ್ಟಿದ್ದು ಗಮನಿಸದೆ, ಹಾಗೆಯೇ ಒಳಬಂದದ್ದು ನನ್ನ ತಪ್ಪಲ್ಲವೇ?' ಎನ್ನಿಸಿತು. ಎಷ್ಟೋ ಬಾರಿ ನಾವು ನಮ್ಮದೇ ಆಲೋಚನೆಗಳಲ್ಲಿ ಮುಳುಗಿ ವಸ್ತು, ವ್ಯಕ್ತಿ, ವಿಷಯಗಳ ಸ್ಥಾನ ಪರಿಜ್ಞಾನವನ್ನೇ ಮಾಡಿರುವುದಿಲ್ಲ. ಇಂದು ನಾನು ಮಾಡಿದ್ದೂ ಅದನ್ನೇ!!!

ಈ ಘಟನೆ ಇನ್ನೂ ಅನೇಕ ಆಲೋಚನೆಗಳನ್ನು ನನ್ನ ಮನಸ್ಸಿನಲ್ಲಿ ಮೂಡಿಸಿತು. ಅವನ್ನೆಲ್ಲ ಬರೆಯುತ್ತ ಹೋದರೆ ಲೇಖನ ಸಿಕ್ಕಾಪಟ್ಟೆ ಉದ್ದ ಆದೀತು ಅಂತ ಕೊರೆಯುವುದನ್ನು, ನಿಮ್ಮ ತಲೆ ತಿನ್ನುವುದನ್ನು ಇಲ್ಲಿಗೇ ನಿಲ್ಲಿಸುತ್ತಿದ್ದೇನೆ. ಮತ್ತೆ ಬರುವೆ. 'ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷೀಲಿ' ಎನ್ನುವ ಹಾಗೆ!!!

***

ಕೋಟೆ ಹೇಳಿದ ಕಥೆ

– ರೇಣುಕಾ ದೇಸಾಯಿ



"ಮಗಳೇ, ಐತಿಹಾಸಿಕ ಮತ್ತು ಪೌರಾಣಿಕ ಹಿನ್ನಲೆಯುಳ್ಳ ಸೌದತ್ತಿ, ಬೆಳಗಾವಿ ಜಿಲ್ಲೆಯ ಒಂದು ಪ್ರಮುಖ ಪಟ್ಟಣ. ಕೃತ ಯುಗದಲ್ಲಿ ಇದಕ್ಕೆ ಸೌಗಂಧಿಪುರ, ಸುಗಂಧಿವರ್ತಿ ಎಂಬ ಸುಂದರ ಹೆಸರು ಇತ್ತು, ಎಲ್ಲ ಕಡೆ ಪುಷ್ಪಗಳ ಸುಗಂಧ ಹರಡಿರುತ್ತಿತ್ತು ಎನ್ನುವ ಪ್ರತೀತಿ".

"ಯಾಕೆ ಅಮ್ಮ, ಎಷ್ಟೋ ಊರುಗಳ ಹೆಸರು ಹೀಗೆ ಅನರ್ಥವಾಗುವದು?" ಬೇಸರದ ಪ್ರಶ್ನೆ ಮಗಳದು.

"ಪರಕೀಯರ ಆಳ್ವಿಕೆ ಈ ದುಸ್ಥಿತಿ ತಂದಿದೆ, ಪರರಿಗೆ ನಮ್ಮಂತೆ ನಮ್ಮ ನಾಡು, ದೇಶ, ಅದರ ಹೆಸರು ಎನ್ನುವ ಹೆಮ್ಮೆ ಕಕ್ಕುಲತೆ ಎಲ್ಲಿ ಬರಬೇಕು? ಇದಕ್ಕೆಲ್ಲಾ ಅಭಿಮಾನ ಇಲ್ಲದಿರುವದೆ ಕಾರಣವಾ? ಮನಸ್ಸಿಗೆ ಬಂದಂತೆ ಹೊರ ದೇಶದ ಇತಿಹಾಸಕಾರರು ಬರೆದಿರುವ ದಾಖಲೆಗಳೇ? ಆ ದಾಖಲೆಗಳೇ ನಮ್ಮ ಪಠ್ಯ ಪುಸ್ತಕಗಳಿಗೆ, ದಿನನಿತ್ಯದ ತಿಳುವಳಿಕೆಗೆ ಆಧಾರ ಆಗಿದ್ದೇ? ಒಟ್ಟಿನಲ್ಲಿ ಅಭಿಮಾನ ಶೂನ್ಯರು ಮಾಡಿದ ಕುತಂತ್ರ ಅನ್ನಬೇಕಷ್ಟೆ" ನಿಟ್ಟುಸಿರಿಟ್ಟಳು ಅಮ್ಮ.. ಸುಂದರವಾದ ಸೌಗಂಧಿಪುರ ಕೋಟೆ ವೀಕ್ಷಣೆ ಮಾಡುತ್ತಿರುವ ಅಮ್ಮ,, ಮಗಳು ಇಬ್ಬರೂ ಬೆಳಗು ಸಂಜೆಗೆ ಸರಿಯುತ್ತಿದ್ದರೂ ಬೇಸರವಿಲ್ಲದೆ ಹೊಟ್ಟೆ ಹಸಿದಿದ್ದರ ಪರಿವೆ ಇಲ್ಲದೆ ಸುತ್ತುತ್ತಿದ್ದಾರೆ!!

"ಅಮ್ಮಾ... ಅಮ್ಮಾ..", ಮಗಳು ಚಿನ್ಮಯಿ ಆತಂಕದಿಂದ ಕೂಗುತ್ತಿದ್ದರೆ, ಅಮ್ಮನಿಗೆ ಒಂದು ತರಹ ಗಾಬರಿ.

"ಯಾಕಮ್ಮಾ? ಏನಾಯ್ತು? ಇಂತಹ ಮಧ್ಯಾಹ್ನದ ಹೊತ್ತಿನಲ್ಲಿ ಭಯವೇನು?"

"ಅಮ್ಮಾ., ಇಲ್ಲಿ ಯಾರೋ ಮತನಾಡುತ್ತಿದ್ದಾರೆ, ಆದರೆ ಕಣ್ಣಿಗೆ ಕಾಣುತ್ತಿಲ್ಲ". ಚಿನ್ಮಯಿಯಿಂದ ಸ್ವಲ್ಪವೇ ದೂರದಲ್ಲಿ ಕೋಟೆಯ ಇನ್ನೊಂದು ಬದಿ ವೀಕ್ಷಿಸುತ್ತಿದ್ದ ಅಮ್ಮ ಓಡಿಬಂದರು ಮಗಳ ಬಳಿ.

"ಏನಿಲ್ಲಾ ಮಗಳೇ, ಈ ಮಗು ಬೆಳಗಿನಿಂದ ಬಹಳ ಅಕ್ಕರೆಯಿಂದ, ಆಸಕ್ತಿಯಿಂದ ನನ್ನ ಬಗೆಗೆ ಕೇಳಿ ತಿಳಿದು ಕೊಳ್ಳುತ್ತಿದ್ದಾಳೆ, ಅದಕ್ಕೆ ಸಂತೋಷವಾಗಿ ಅವಳನ್ನು ಮಾತನಾಡಿಸಿದೆ. ಎಳೆಯರು ಆಸಕ್ತಿ ತೋರಿದರೆ ನನ್ನ ಒಳಿತಾಗುತ್ತದೆ ಎನ್ನುವ ಸ್ವಾರ್ಥ".

ಹೌದು, ಕರ್ನಾಟಕದ ಅನರ್ಘ್ಯರತ್ನದಂತಿರುವ, ಯಾರಿಂದಲೂ ಅನ್ವೇಷಣೆಗೊಳಪಡದ ಸುಂದರವಾದ ಸೌದತ್ತಿ ಕೋಟೆ ಮಾತನಾಡುತ್ತಿದೆ ಮತ್ತು ತನ್ನ ಕಥೆ ಹೇಳಲು ಉತ್ಸುಕವಾಗಿದೆ.




"ಈ ಪ್ರಾಂತ್ಯದ ಅತ್ಯಂತ ಬಲಿಷ್ಠವಾದ ಕೋಟೆ ನಾನು, ನನ್ನದು ಸುಂದರ ಆಕೃತಿ, ಅಕ್ಕಪಕ್ಕದ ಗುಡ್ಡದಲ್ಲಿ ಸಿಗುವ ವಿಶೇಷವಾದ ನಸುಗೆಂಪಿನ ಬಿಳಿ ಕಲ್ಲಿನಲ್ಲಿ ಕಟ್ಟಿರುವರು. ಈ ಭವ್ಯ ಕೋಟೆಯ ನಿರ್ಮಾತೃ ಇಮ್ಮಡಿ ಜಾಯಪ್ಪ ದೇಸಾಯಿ. ನವಲಗುಂದ-ಶಿರಸಂಗಿ ಸಂಸ್ಥಾನ ಕರ್ನಾಟಕದ ಪ್ರಮುಖ ಸಂಸ್ಥಾನಗಳಲ್ಲಿ ಒಂದು. ಈ ಸಂಸ್ಥಾನವನ್ನು ಆಳಿದ ದೊರೆಗಳಲ್ಲಿ ಎದ್ದುಕಾಣುವ ಹೆಸರು ಇಮ್ಮಡಿ ಜಾಯಪ್ಪ ದೇಸಾಯಿಯವರದು. ಇವರ ಆಳ್ವಿಕೆಯನ್ನು ಸುವರ್ಣಯುಗ ಎಂದು ವರ್ಣಿಸಲಾಗಿದೆ" ಎಂದು ಹೆಮ್ಮೆಯಿಂದ ಹೇಳುತ್ತಿದೆ ಕೋಟೆ.

"ಹೌದು, ನೀನು ಬಹಳ ಆಕರ್ಷಣೀಯವಾಗಿರುವಿ, ಹಾಗಾಗಿ ನಮ್ಮ ಹಿರಿಯರು ಕಟ್ಟಿದ ಈ ಆಕರ್ಷಕ ಕೋಟೆಯ ವಿನ್ಯಾಸ, ಅದರಲ್ಲಿರುವ ತಾಂತ್ರಿಕತೆ ನಮ್ಮ ಮನಸೆಳೆದಿದೆ". ಮಗಳಿಂದ ಜಾಯಪ್ಪ ದೇಸಾಯಿ ಅವರಿಗೆ ನಮನಗಳು ಸಲ್ಲಿಕೆಯಾಗುತ್ತಿದ್ದರೆ, ಕೋಟೆಗೆ ಎಲ್ಲಿಲ್ಲದ ದುಃಖ. "1884ರ ಬಾಂಬೆ ಪ್ರೆಸಿಡೆನ್ಸಿ ಹೊರಡಿಸಿದ ಗೇಜೆಟಿಯರ್‌ನಲ್ಲಿ ಅದ್ಯಾರೋ ಕೆಂಪುಮೂತಿ ಇತಿಹಾಸಕಾರ ಅದೊಂದು ಸಣ್ಣ ಕೋಟೆ, ಬರೀ ಪಾಳುಬಿದ್ದು, ಗಣನೆಗೆ ತೆಗೆದುಕೊಳ್ಳಬೇಕಾದದ್ದು ಅಲ್ಲಿ ಏನೂ ಇಲ್ಲ, ಹೀಗೆ ಬರೆದರೆ ನನ್ನ ಘನತೆ ಏನಾಗಬೇಡ?"

"ಹೋಗಲಿ ಬಿಡು, ಅವನು ಸುಳ್ಳಿಗ, ಅವನು ಇತಿಹಾಸ ಬರೆದು 150 ವರ್ಷವಾದ ಮೇಲೆ ಬಂದು ನೋಡುತ್ತಿರುವ ನಮಗೆ ನಮ್ಮ ದೇಸಾಯಿಯವರ ಬಗೆಗೆ ಹೆಮ್ಮೆಮೂಡುತ್ತಿದೆ. ನೀನು ನಮ್ಮ ಹೆಮ್ಮೆಯ ಪ್ರತೀಕ ಅನ್ನಿಸುತ್ತಿದೆ. ಅವರು ಪರಕೀಯರು, ಅವರಿಗೆಲ್ಲಿಂದ ಬರಬೇಕು ನಿನ್ನ ಮೇಲೆ ಪ್ರೀತಿ?" ಅಮ್ಮನ ಸಮಜಾಯಿಷಿ.

ಕೋಟೆ ತನ್ನ ಬಗೆಗೆ ಹೇಳುವದನ್ನು ಮುಂದುವರಿಸಿತು, "1735-1758ರವರೆಗೆ ಆಳಿದ ಇಮ್ಮಡಿ ಜಾಯಪ್ಪ ದೇಸಾಯಿ ಅವರದು ಬಹುಮುಖ ವ್ಯಕ್ತಿತ್ವ, ಪ್ರತಿಭಾವಂತ, ಮಹಾಮುತ್ಸದ್ಧಿ, ಚತುರ ಆಡಳಿತಗಾರ, ನಯವಿನಯಶೀಲ, ಜನಾನುರಾಗಿ, ಧರ್ಮನಿಷ್ಠ ದಾನಿ ಹಾಗೂ ಅಭಿಮಾನಿ. ಬಹುಭಾಷಾ ಬಲದಿ 'ಭಾನುವತ್ತರ ರಸಮಂಜರಿ' ಎಂಬ ಸಂಸ್ಕೃತ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿದ ಮೇಧಾವಿ. ಸಂಸ್ಥಾನದ ರಕ್ಷಣೆಗೆ ಆದ್ಯತೆ ನೀಡಿದ ಜಾಯಪ್ಪ ದೇಸಾಯಿಯವರು ಆಯಕಟ್ಟಿನ ಪ್ರದೇಶಗಳಲ್ಲಿ ಕೋಟೆಗಳನ್ನು ಕಟ್ಟಲು ಯೋಚಿಸಿದರು. ನನ್ನ ಜೊತೆಗೆ, ಕುಸುಗಲ್ಲಿನಲ್ಲೂ, ಶಿರಸಂಗಿಯಲ್ಲೂ ಒಟ್ಟು ಮೂರು ಕೋಟೆ ಕಟ್ಟಲು ಯೋಜನೆಯ ನಕ್ಷೆ ತಯಾರಿಸಿದರು. 18ನೇ ಶತಮಾನದಲ್ಲೇ ನಮ್ಮ ಮೂವರಿಗಾಗಿ 8.50 ಲಕ್ಷ ಹಣದ ಅಂದಾಜು ವೆಚ್ಚ ಹಾಕಿಕೊಂಡ ಶ್ರೀಮಂತ ಸಂಸ್ಥಾನ. ಆಳುವ ದೊರೆಯದು ಅಷ್ಟೇ ದೊಡ್ಡದಾದ ಯೋಚನೆ!!"



"ಓ!! ಆಗಿನ ಕಾಲದಲ್ಲಿ ಇಷ್ಟೊಂದು ದೊಡ್ಡ ಮೊತ್ತದ ಯೋಜನೆ, ಅದೂ ಒಂದು ಸಂಸ್ಥಾನದಿಂದ!! ನಾಡು ಸುಭಿಕ್ಷೆಯಲ್ಲಿತ್ತು ಎನ್ನುವದನ್ನು ತಿಳಿಯಲು ಇದೊಂದು ಯೋಜನೆ ಸಾಕು. ಈಗಿನ ಕಾಲಮಾನಕ್ಕೆ ತಾಳೆ ಹಾಕಿದರೆ ನೂರಾರು ಕೋಟಿಯ ಯೋಜನೆ!!" ಚಿನ್ಮಯಿ ಅರಿಯದೆಯೇ ಉದ್ಗರಿಸಿದಳು.

"ಹೌದು ಪುಟ್ಟು, ಈ ನಾಡಿನ ಬಗೆಗೆ 1884ರಲ್ಲಿ ಬಾಂಬೆ ಪ್ರೆಸಿಡೆನ್ಸಿ ಹೊರಡಿಸಿದ ಗೇಜೆಟಿಯರ್‌ನಲ್ಲಿ ಕಾಲಕಾಲಕ್ಕೆ ಮಾಡಿದ ಅನೇಕ ಸಮೀಕ್ಷೆಗಳು ದೊರೆಯುತ್ತವೆ, ಸೌಗಂಧವರ್ತಿ ಎನ್ನುವ ಈ ನಾಡಿನಲ್ಲಿ ನೀರಿನ ಸೌಕರ್ಯ ಅಷ್ಟಾಗಿರಲಿಲ್ಲ, ಒಂದೆರಡು ಬಾವಿ, ಹೊಂಡಗಳೇ ನೀರಿನ ಆಕರವಾಗಿದ್ದವು, ಅನತಿ ದೂರದಲ್ಲಿ ಮಲಹರಿ ಎನ್ನುವ ನದಿ ಇತ್ತು ಎನ್ನುವ ಉಲ್ಲೇಖ ಬರುತ್ತದೆ. ಬಹುಶಃ ಈಗಿನ ಮಲಪ್ರಭೆ ಇರಬೇಕು, ಈ ಪ್ರದೇಶ ರಾಷ್ಟ್ರಕೂಟರ ಆಳ್ವಿಕೆಗೆ ಬರುತ್ತಿತ್ತು, ರಟ್ಟಾ ಮನೆತನದವರು ಈ ಪ್ರದೇಶವನ್ನು ರಾಜಧಾನಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದರು. 1210ರಲ್ಲಿ ರಟ್ಟರು ತಮ್ಮ ರಾಜಧಾನಿಯನ್ನು ಬೆಳಗಾವಿಗೆ ವರ್ಗಾಯಿಸಿಕೊಂಡರು" ಎಂದು ಮಗಳು ಚಿನ್ಮಯಿ ತನ್ನ ಜಾಲತಾಣದ ಓದನ್ನು ಹೇಳುತ್ತಿದ್ದರೆ ಅಮ್ಮ ಕೇಳಿಸಿಕೊಳ್ಳುತ್ತಿದ್ದರು.

"ನನಗಿದೆಲ್ಲ ಗೊತ್ತಿಲ್ಲಪ್ಪಾ, ನಾನು 18ನೇ ಶತಮಾನದಲ್ಲಿ ಅವತರಿಸಿದವನು, ನನ್ನ ಕಾಲದ ಬಗೆಗೆ ಅಲ್ಲಿ ಏನೂ ಹೇಳಲಿಲ್ಲವೇ?" ಕೇಳಿತು ಕೋಟೆ.

"ಯಾಕಿಲ್ಲ? ನಿನ್ನ ಬಗೆಗೂ ತುಂಬಾ ವಿವರ ಇದೆ ಅಲ್ಲಿ, ಪಟ್ಟಣದ ಪಶ್ಚಿಮದ ದಿಕ್ಕಿನಲ್ಲಿ ಇರುವ ಒಂದು ಸಣ್ಣ ಬೆಟ್ಟದ ಮೇಲೆ ಕೋಟೆ ಇದೆ, ಬೆಟ್ಟದ ಬಹುಭಾಗ ಕೋಟೆಯ ಆವರಣದ ಒಳಗಡೆ ಇದೆ, ಸುತ್ತಲೂ 60 ಅಡಿ ಎತ್ತರದ ಭದ್ರ ಗೋಡೆ ಇದೆ, ಇದರ ಕಟ್ಟಡ ಕೆಲಸ ಕುಸರಿ ಕೆಲಸದಂತೆ ಕಾಣುತ್ತದೆ, ಕೆಂಪು ಮಿಶ್ರಿತ ಹಾಲು ಬಿಳುಪಿನ ದೊಡ್ಡ ದೊಡ್ಡ ಕಲ್ಲುಗಳಿಂದ ಮಟ್ಟಸವಾಗಿ ಕಟ್ಟಿದ್ದಾರೆ, ಉತ್ತರದಿಂದ ದಕ್ಷಿಣಕ್ಕೆ 325 ಅಡಿ, ಪೂರ್ವದಿಂದ ಪಶ್ಚಿಮಕ್ಕೆ 450 ಅಡಿ ಹರಡಿರುವ ಪುಟ್ಟ ಸುಂದರ ಕೋಟೆ." ಚಿನ್ಮಯಿ ವಿವರಣೆ ಹೇಳುತ್ತಿದ್ದರೆ, ಕೋಟೆ ತನ್ನ ಸೌಂದರ್ಯದ ಬಗೆಗೆ ಹೆಮ್ಮೆ ತೋರಿತು, ಜೊತೆಗೆ ಸ್ವಲ್ಪ ನಾಚಿಕೊಂಡಂತೆ ಕಂಡಿತು.

"1827ರಲ್ಲಿ ಒಂದು ಸಮಿತಿ ನಿನ್ನನ್ನು ವೀಕ್ಷಣೆ ಮಾಡಿ ಒಂದು ವರದಿ ಕೊಟ್ಟಿದೆ, ಅದರ ಪ್ರಕಾರ, ಕೋಟೆಯ ಹೊರಭಾಗದಲ್ಲಿ ಸುತ್ತಲೂ ಸೀಬೆ, ಸೀತಾಫಲಗಳ ಮರಗಳಿಂದ ಕಂಗೊಳಿಸುತ್ತಿದೆ, ಕೋಟೆಯ ದ್ವಾರ ಪೂರ್ವ ದಿಕ್ಕಿಗೆ ಇದೆ, ದಕ್ಷಿಣದಲ್ಲೊಂದು, ಉತ್ತರದಲ್ಲೊಂದು ಪುಟ್ಟ ಪುಟ್ಟ ದ್ವಾರಗಳಿವೆ, ಅವು ಸುಂದರವಾದ ಆಕೃತಿಯಲ್ಲಿವೆ. ಕೋಟೆ ನವಭುಜಾಕೃತಿಯದಾಗಿದೆ, ಸೌಂಗಂಧಿಪುರದ ಪಶ್ಚಿಮಕ್ಕೆ 38 ಮೈಲಿ ದೂರದಲ್ಲಿರುವ

ಎಲ್ಲೂರುಗಡ ಕೋಟೆಯೊಂದಿಗೆ ಸಂಜ್ಞೆಗಳಲ್ಲಿ ಸಂವಹನ ಮಾಡುವ ವ್ಯವಸ್ಥೆ ಇತ್ತು, ಆತಂಕಗಳು ಬಂದೊದಗಿದ ಸಮಯದಲ್ಲಿ ಒಂದಕ್ಕೊಂದು ಸಂಜ್ಞೆ ಕೊಡುತ್ತಿದ್ದವು ಎನ್ನುವ ವರದಿ ಇದ್ದರೆ, 1842ರಲ್ಲಿ ಮತ್ತೊಂದು ವೀಕ್ಷಣಾ ಸಮಿತಿಯ ವರದಿ ಸಣ್ಣ ಬೆಟ್ಟದ ಮೇಲೊಂದು ಸುಂದರ ಸದೃಢ ಅಷ್ಟಭುಜಾಕೃತಿಯ ಕೋಟೆ, ಇಮ್ಮಡಿ ಜಾಯಪ್ಪ ದೇಸಾಯಿಯವರು ಕ್ರಿಸ್ತ ಶಕ 1743ರಲ್ಲಿ ಕೋಟೆಯ ಕಟ್ಟಡ ಆರಂಭಿಸಿ, 1751ರಲ್ಲಿ ಪೂರ್ಣಗೊಳಿಸಿದರು, ನಿರ್ಮಾಣ ವೆಚ್ಚ 2 ಲಕ್ಷ ರೂಪಾಯಿ. ಹತ್ತು ಎಕರೆ ವಿಶಾಲ ನಿವೇಶನದಲ್ಲಿ 325 x 450 ಅಡಿ ವ್ಯಾಸವುಳ್ಳ, ಅಷ್ಟಭುಜಾಕೃತಿಯ, 60 ಅಡಿ ಎತ್ತರದ ಗೋಡೆಗಳು, ಕಲ್ಲಿನ ಬಾಗಿಲುಗಳು ಕಿಂಡಕಿ, ವೀಕ್ಷಣಾ ಕಿಂಡಿಗಳು ಆಕರ್ಷಕವಾಗಿದ್ದು, ಕೋಟೆಯ ಬಾಹ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಕೋಟೆಯಲ್ಲಿ ಬೃಹತ್ ಹೊಂಡವಿದ್ದು, ಅದರ ಗೋಡೆಗಳು, ಮೆಟ್ಟಿಲುಗಳು ಇಂದಿಗೂ ಸುಸ್ಥಿತಿಯಲ್ಲಿದ್ದು ಸದಾ ನೀರಿನಿಂದ ತುಂಬಿರುತ್ತದೆ. ಬಾವಿಯ ವಿನ್ಯಾಸ ಕೂಡಾ ಸುಂದರವಾಗಿದೆ. 1635-38 ಅವಧಿಯಲ್ಲಿ ಅಂದರೆ ಕೋಟೆ ಕಟ್ಟುವ ಮೊದಲೇ ಈ ಬೆಟ್ಟದ ಮೇಲೆ ಕಲ್ಲಪ್ಪ ಎನ್ನುವ ಸೌಂದತ್ತಿ ರೈತ ಕಾಡಸಿದ್ದೇಶ್ವರ ದೇವಸ್ಥಾನ ಕಟ್ಟಿಸಿದ್ದರು, ಕಾಡಸಿದ್ದೇಶ್ವರ, ಸಿರಸಂಗಿ ಸಂಸ್ಥಾನದ ಮನೆದೇವರು ಆಗಿದ್ದರಿಂದ ಕೋಟೆ ಕಟ್ಟುವಾಗ ಇಮ್ಮಡಿ ಜಾಯಪ್ಪ ದೇಸಾಯಿ ಅವರು ಸಂಸ್ಥಾನದ ಘನತೆಗೆ ತಕ್ಕಂತೆ ದೇವಸ್ಥಾನಕ್ಕೆ ನೂತನ ಸ್ವರೂಪ ನೀಡಿದರು, ದೇವಸ್ಥಾನದ ಸುತ್ತಳತೆ 470 ಅಡಿ, ದೇವಸ್ಥಾನ ತಲುಪಲು 59 ಮೆಟ್ಟಿಲುಗಳಿವೆ, 9 ಅಂಕಣಗಳಷ್ಟು ಪೌಳಿ ಇದೆ, ಪ್ರಶಸ್ತ ನವರಂಗವಿದೆ, ಕಪ್ಪು ಕಲ್ಲಿನಲ್ಲಿ ಕಲಾತ್ಮಕವಾಗಿ ಕೆತ್ತಿದ ಕಾಡಸಿದ್ದೇಶ್ವರ ಮೂರ್ತಿ ಇದೆ, ನಿತ್ಯ ಪೂಜೆ ಸಲ್ಲುತ್ತದೆ, ಶ್ರಾವಣ ಮಾಸದ ಸೋಮವಾರದಂದು ಜಾತ್ರಿ ನಡೆಯುತ್ತದೆ. ಇಷ್ಟು ನಿನ್ನ ಬಗೆಗೆ ಇರುವ ವಿವರ." ಮಾತು ಮುಗಿಸಿದಳು ಚಿನ್ಮಯಿ.

ಸಂತೋಷದಿಂದ ಚಪ್ಪಾಳೆ ತಟ್ಟಿತು ಕೋಟೆ, ಮರುಕ್ಷಣ ದೀರ್ಘ ನಿಟುಸಿರಿಟ್ಟಿತು, "ಕ್ರಿಸ್ತ ಶಕ 1777ರಿಂದ 1782ರ ಅವಧಿಯಲ್ಲಿ ಈ ಕೋಟೆ ಹೈದರಾಲಿಯ ದಾಳಿಗೆ ಒಳಪಟ್ಟಿತು ಮತ್ತು ಅವನ ಕೈವಶವಾಯ್ತು. ಹೈದರಾಲಿಯು ದೇಸಾಯಿಯವರಿಂದ ಕಪ್ಪ ಕಾಣಿಕೆ ಪಡೆದನಲ್ಲದೆ, ಹೇರಳವಾದ ಹಣ, ದ್ರವ್ಯ ದೋಚಿದ ಬಗೆಗೆ ದಾಖಲೆ ಇವೆ. ದಾಳಿಗೊಳಗಾದ ಸಂದರ್ಭದಲ್ಲಿ ಉಂಟಾದ ತೋಪಿನ ಗುರುತುಗಳನ್ನು ಮಹಾದ್ವಾರದ ಹತ್ತಿರ ಈಗಲೂ ಕಾಣಬಹುದು." ಕಥೆ ಹೇಳುತ್ತಾ ಕಣ್ಣೀರಾಯ್ತು ಕೋಟೆ.

ಮತ್ತೆ ಸಾವರಿಸಿಕೊಂಡ ಕೋಟೆ, "ಇದೇ ಆವರಣದಲ್ಲಿ ಇಮ್ಮಡಿ ಜಾಯಪ್ಪನವರು ಸುಂದರ ಅರಮನೆ ಕಟ್ಟಿದ್ದರು, 60 ಅಡಿ ಉದ್ದ, 40 ಅಡಿ ವಿಸ್ತಾರದ ಸಭಾಂಗಣ (ದರ್ಬಾರ್ ಹಾಲ್), ತೇಗಿನ ಮರದಲ್ಲಿ ಕೆತ್ತಿದ ಬಾಗಿಲು, ಕಿಟಕಿ, ಕಂಬಗಳು ತುಂಬಾ ಕಲಾತ್ಮಕವಾಗಿದ್ದವು. ಕ್ರಿಸ್ತಶಕ 1942ರಲ್ಲಿ ರಾಷ್ಟ್ರವ್ಯಾಪಿ ಚಲೇಜಾವೋ ಚಳುವಳಿಯ ಸಂದರ್ಭದಲ್ಲಿ ಅರಮನೆ ಅಗ್ನಿಗಾಹುತಿಯಾಯಿತು. ಗತವೈಭವದ ಪ್ರತೀಕವಾಗಿದ್ದ ಅರಮನೆಯ ಭಗ್ನಾವಶೇಷ ಗಳು ಮಾತ್ರ ಉಳಿದಿವೆ. ನನ್ನೊಳಗೆ ಮತ್ತು ನನ್ನ ಸುತ್ತಮುತ್ತ ಇನ್ನೂ ಅನೇಕ ವಿಶೇಷತೆಗಳಿವೆ," ಮೂರು ಶತಮಾನದಿಂದ ಬಂಡೆಯಂತೆ ನಿಂತು ಎಲ್ಲಾ ಆರೋಹಣ, ಅವರೋಹಣಕ್ಕೆ ಸಾಕ್ಷಿಯಾದ ಕೋಟೆ ಕಣ್ಣೀರು ಹಾಕುತ್ತಿತ್ತು.

"ಅಮ್ಮಾ., ನಮ್ಮದೇ ದೇಶ, ಸ್ವಾತಂತ್ರ್ಯ ಬಂದು 75 ವರ್ಷವಾಗಿದೆ, ನಾವೇಕೆ ಇಂತಹ ಭವ್ಯ ಸ್ಮಾರಕಗಳ ಬಗೆಗೆ ದಿವ್ಯ ನಿರ್ಲಕ್ಷ ಮಾಡುತ್ತಿದ್ದೇವೆ? ಇಂತಹ ಸುಂದರ ಕೋಟೆಯ ಒಳಗೆ ಎಲ್ಲೆಂದರಲ್ಲಿ ಖಾಲಿ ಪ್ಲಾಸ್ಟಿಕ್ ಬಾಟಲ್,

ಅಂತಹ ಸುಂದರ ಬಾವಿಯಲ್ಲಿ ಹಸಿರಾದ ಮಲೆತ ನೀರು, ಅದರ ಮೇಲೆ ಹರಿದ ಚಪ್ಪಲಿ, ಖಾಲಿ ಬಾಟಲು, ಡಬ್ಬಿ ತೇಲುತ್ತಿದ್ದರೆ ಬೇಜಾರು. ಅಂತಹ ಸದೃಢವಾಗಿ ಕಟ್ಟಿದ ಬಾವಿಯ ಒಂದು ಮಗ್ಗುಲಲ್ಲಿ ಶಿಥಿಲಗೊಳ್ಳುತ್ತಿರುವ ಗೋಡೆ, ಅದೇನಾದರೂ ಹಾಳಾದರೆ ಮತ್ತೆ ಅಂತಹ ಭದ್ರ ಕಟ್ಟಡ ನಮ್ಮ ಕೈಯಿಂದ ಕಟ್ಟಲು ಆಗುವದೇ ಇಲ್ಲ, ಕೋಟೆಯ ಆವರಣದ ಎಲ್ಲಾ ಗೋಡೆಯ ಬಿರುಕುಗಳಲ್ಲಿ ಯಾವುಯಾವುದೋ ಮರ ಗಿಡ ಬೆಳೆದು ಬೇರು ಬಿಟ್ಟು ಕಟ್ಟಡಕ್ಕೆ ಬಲವಾದ ಹಾನಿ ತರುವಂತೆ ಕಾಣುತ್ತದೆ, ಹಾಗಾಗುವ ಮೊದಲೇ ಕಲ್ಲಿನ ಸಂದಿಗಳಲ್ಲಿ ಬೆಳೆದ ಗಿಡಗಳನ್ನು ಕಿತ್ತು ಕೋಟೆಯ ಕಟ್ಟಡದ ಭದ್ರತೆ ಕಾಪಾಡುವದು, ಇವೆಲ್ಲಾ ಸಣ್ಣ ಸಣ್ಣ ಕೆಲಸ ಆದರೂ ಇಂತಹ ಸ್ಮಾರಕಗಳ ಬಗೆಗೆ ಜಿಲ್ಲಾಡಳಿತಕ್ಕೆ ಅದೇಕೆ ದಿವ್ಯ ನಿರ್ಲಕ್ಷ? ಸುಂದರ ಕೋಟೆಯ ಇನ್ನೊಂದು ಪಾರ್ಶ್ವದಲ್ಲಿ ಕೋಟೆಯ ಗೋಡೆಗೆ ಹತ್ತಿಸಿ ಕಟ್ಟಿಸಿದ ಕಾಲೇಜು ಗೋಡೆ!! ಮೇಲಿಂದ ನೋಡಿದರೆ ಕೋಟೆಯ ಸೌಂದರ್ಯ ಹಾಳು ಮಾಡಿದೆ, ಅರಮನೆ ಇದ್ದಕಡೆ, ಅದನ್ನೇ ಜೈಲು ಮಾಡುವುದು ಎಂತಹ ಆಭಾಸ!! ಬ್ರಿಟಿಷ್ ಸರಕಾರಕ್ಕೆ ಅದೇ ಬೇಕು. ನಮ್ಮ ರಾಜರನ್ನು ಆಳುಗಳನ್ನಾಗಿ ಮಾಡುವದು, ದೇಶದ ಸಂಪತ್ತು ಲೂಟಿ ಮಾಡಿ ಭಾರತ ಬಡ ರಾಷ್ಟ್ರ ಎಂದು ಬಿಂಬಿಸುವದು, ಅಲ್ಲದೆ ಅವರ ದೇಶದಲ್ಲಿ ಇರುವ ಬಹುಪಾಲು ಸಂಪತ್ತು ನಮ್ಮ ದೇಶದ್ದೇ ಎನ್ನುವದು ಸತ್ಯ. ನಮ್ಮವರನ್ನು ಅಪರಾಧಿಗಳನ್ನಾಗಿ ಮಾಡಿ, ಜೈಲು ಸೇರಿಸಿ ಅಯೋಗ್ಯರನ್ನಾಗಿ ಮಾಡಿ ದೇಶವನ್ನು ಅಧೋಗತಿಗೆ ತರುವದು. ಪಾಪ ಕೋಟೆಗೂ ದುಃಖ ಆಗುವದು ಸಹಜ, ಕೋಟೆ ನಮ್ಮ ದೇಶದ ಘನತೆಯ ಪ್ರತೀಕ, ವೀರ ಶೂರ ಸೇನಾನಿ ಇದ್ದಂತೆ, ಅದು ಸದಾ ಇಂತಹ ಅಪರಾಧಿಗಳ ಮುಖ ನೋಡಬೇಕೇ? ಇದನ್ನೆಲ್ಲಾ ವಿವರವಾಗಿ ಬರೆದು, ಬೆಳಗಾವಿ ಜಿಲ್ಲಾಧಿಕಾರಿಯವರ ಗಮನಕ್ಕೆ ತರುತ್ತೇನೆ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಕೊನೇಪಕ್ಷ ಯುನೆಸ್ಕೋನಂತಹ ಸಂಸ್ಥೆಗಳ ಗಮನಕ್ಕೆ ತರುವ ಪ್ರಯತ್ನ ಮಾಡುವೆ, ಅವರಾದರೂ ಇದನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ನೋಡಿಕೊಳ್ಳುವಂತೆ ವ್ಯವಸ್ಥೆ ಆದರೆ ಒಳ್ಳೆಯದು." ಮಗಳ ವಿರಾವೇಶದ ಮಾತು ಕೇಳಿ ಕೋಟೆ ಚಪ್ಪಾಳೆ ತಟ್ಟಿತು.

"ಅದಕ್ಕೆ ಮಗು, ನಿನ್ನೊಂದಿಗೆ ಮನಬಿಚ್ಚಿ ಮಾತನಾಡಿದ್ದು, ಯುವಕರು ಮನಸ್ಸು ಮಾಡಿದರೆ ಎಲ್ಲಾ ಸಾಧ್ಯ."

***

ಹಾಸ್ಯ ಲೇಖನ

ಅತ್ತೆಗೊಂದು ಕಾಲ, ಕತ್ತೆಗೊಂದು ಕಾಲ

– ನಾಗರತ್ನ ಚಂದ್ರಶೇಖರ

"ಮೀನಾಕ್ಷಿ, ಬಾ ಇಲ್ಲಿ. ನಿನ್ನ ಮಗನ ಪರಾಕ್ರಮ ನೋಡುವಂತೆ". ಪತಿರಾಯರ ಗರ್ಜನೆಯಂತಿದ್ದ ಮಾತು ಕೇಳಿ ಗಡಿಬಿಡಿಯಿಂದ, ಅಡಿಗೆ ಮನೆಯಿಂದ ಸೆರಗಿಗೆ ಕೈ ಒರೆಸುತ್ತಾ ಬಂದ ಮೀನಾಕ್ಷಿಗೆ ಗಂಡನ ಕೈಲಿದ್ದ ಮಾರ್ಕ್ಸ್ ಕಾರ್ಡ್, ಎದುರಿನಲ್ಲಿ ಪಿಳಿಪಿಳಿ ಕಣ್ಣು ಬಿಡುತ್ತಾ, ಕೈಕಟ್ಟಿ ನಿಂತ ಮಗ ಮುದ್ದೇಶನನ್ನು ಕಂಡು ಪರಿಸ್ಥಿತಿ ಅರ್ಥವಾಗಿತ್ತು "ಈ ಕತ್ತೆಭಡವನಿಗೆ ಮನೆಪಾಠಕ್ಕೆ ಕಳಿಸಿದರೂನು ಜಸ್ಟ್ ಪಾಸಾಗಿದ್ದಾನೆ ಇನ್ನು ಯಾವ ಕಾಲೇಜಿನಲ್ಲಿ ಸೀಟು ಸಿಗುತ್ತೆ. ಕತ್ತೆ ಕಾಯಕ್ಕೆ ಲಾಯಕ್ಕು!"

ಗಂಡನ ಮಾತು ಕೇಳಿ ಮೀನಾಕ್ಷಿಗೆ ಸ್ವಲ್ಪ ನಗೂನೆ ಬಂತು. ಮೊನ್ನೆ ಮೊನ್ನೆ ಟಿವಿಯಲ್ಲಿ ನೋಡಿದ ಆ ಕಾರ್ಯಕ್ರಮದ ನೆನಪಾಗಿ. "ಏನ್ ಮುಸಿಮುಸಿ ನಗ್ತಾ ಇದ್ಯಲ್ಲ, ನಾನಿಷ್ಟು ಸೀರಿಯಸ್ ಆಗಿ ಮಾತಾಡ್ತಾ ಇದ್ರು. ನಿನ್ ಮುದ್ದು ಜಾಸ್ತಿಯಾಗಿ, ಅವನು ಕೆಟ್ಟು ಹೋಗಿರೋದು. ನನಗೆ ಅವನ ಭವಿಷ್ಯದ ಚಿಂತೆ, ಆದರೆ ನಿನಗೆ ತಮಾಷೆಯಾಗಿ ಕಾಣ್ತಾ ಇದ್ಯಾ ನನ್ ಮಾತು."

"ಅಯ್ಯೋ, ಅವ್ನ ಹಣೆಬರಹದಲ್ಲಿ ಏನ್ ಬರೆದಿದ್ಯೋ ಅದೇ ಆಗುತ್ತೆ ಬಿಡ್ರಿ, ಒಂದು ಐದು ಕತ್ತೆನೇ ತೆಗೆಸಿಕೊಟ್ಟುಬಿಡಿ. ಮುಂದೆ ವ್ಯಾಪಾರ ಮಾಡಿ ಅದರಲ್ಲೇ ಹಣ ಮಾಡಬಹುದು."

ಅಪ್ಪ, ಅಮ್ಮನ ಮಾತು ಕೇಳ್ತಾ ಕೇಳ್ತಾ ಮುದ್ದೇಶನ ಕೆನ್ನೆಯಿಂದ ನೀರು ಇಳಿತಾ ಇತ್ತು. ಇನ್ನು ನಾನು ಕತ್ತೆ ಕಾಯಕ್ಕೆ ಲಾಯಕ್ಕು ಅಂತ ಅನ್ಕೊಂಡು ಅವನಿಗೆ ಹೆದರಿಕೆನೂ ಆಗಿರಬಹುದೋ ಏನೋ. ಮೆಲ್ಲಗೆ ಅವನು ಅಲ್ಲಿಂದ ಕಳಚಿಕೊಂಡ. ಮೀನಾಕ್ಷಿಯ ಮಾತು ಕೇಳಿ ರಾಜಣ್ಣನಿಗೂ ವಿಚಿತ್ರ ಅನಿಸಿತು.

"ರೀ.. ಈಗ ಕತ್ತೆಗೂ ಸುವರ್ಣ ಕಾಲ ಅಂತ ಟಿವಿನಲ್ಲಿ ಹೇಳ್ತಿದ್ರಲ್ಲ. ಕತ್ತೆ ಹಾಲು ಲೀಟರ್‌ಗೆ ಹತ್ತು ಸಾವಿರ ರೂಪಾಯಿ ಆಗಿದೆಯಂತೆ. ಕತ್ತೆ, ಕತ್ತೆ ಅಂತ ನೀವು ಯಾವಾಗಲೂ ಅವನ್ನ ಬೈತಾ ಇದ್ರೆ ಕತ್ತೆಗೇ ಅವಮಾನ ಮಾಡಿದಂಗೆ" ಮೀನಾಕ್ಷಿ ದಬಾಯಿಸಿ ಗಂಡನ ಬಾಯಿ ಮುಚ್ಚಿಸಿದ್ದಳು ಆಗ.

ಮೀನಾಕ್ಷಿಗೆ ಮಗನ ವಿದ್ಯಾಭ್ಯಾಸದ ಬಗ್ಗೆ ಚಿಂತೆ ಇರಲಿಲ್ಲ ಅಂತ ಅಲ್ಲ. ಪಾಪ ಮುದ್ದೇಶನ ವಿದ್ಯಾರೇಖೆ ಅಂಗೈಯಿಂದ ಮುಂದೆ ಹೋಗದೆ ಇದ್ದಾಗ ಪರ್ಯಾಯ ಮಾರ್ಗ ಹುಡುಕಲೇಬೇಕಲ್ಲವೇ. ನಿಜ, ಕತ್ತೆ ಭಾರ ಹೊತ್ತು ಹೊತ್ತು ಕೋಪ, ಅಸಹಾಯಕತೆಯಿಂದ ಎಷ್ಟೇ ಅರಚಿದರೂ ಯಾರಿಗೂ ಕರುಣೆ ಬರಲ್ಲ. ಅತ್ತೆ ಮನೆ ಸೊಸೆಯಂತೆ ಹಣೆಬರಹ ಅನ್ಕೊಂಡು ಸುಮ್ಮನೆ ಆಗುತ್ತೆ. ಆದರೆ ಈಗ ಕಾಲ ಬದಲಾಗಿದೆ. ಅತ್ತೆಗೆ ಸೊಸೆಯನ್ನು ಕೆಣಕುವ ಕೆರಳಿಸುವ ಚಿತ್ರ ಮಾಯವಾಗಿ, ಸೊಸೆಯಂದಿರ ಕೈ ಮೇಲಾಗಿದೆ. ಕಾಲನಿಯಮ ಅಂದುಕೊಂಡರೆ ಕುದುರೆ ಕೂಡ ಈಗ ನಾನು ಕತ್ತೆಯಾಗಿದ್ದರೆ ಚೆನ್ನಾಗಿತ್ತು, ರಾಜೋಪಚಾರ ಸಿಗುತ್ತಿತ್ತು ಅನ್ನುವ ಕಾಲ ಬಂದಾಗಿದೆ.

ಕ್ಲಿಯೋಪಾತ್ರ ಕತ್ತೆ ಹಾಲಿನಲ್ಲಿ ಸ್ನಾನ ಮಾಡುತ್ತಿದ್ದ ವಿಷಯ ಎಲ್ಲರಿಗೂ ಗೊತ್ತು. ಕತ್ತೆ ಹಾಲು ಶ್ರೇಷ್ಠ ಎಂದು ಹುಟ್ಟಿದ ಮಗುವಿಗೆ ಒಳ್ಳೆಯ ಕತ್ತೆ ಹಾಲು ಕುಡಿಸಿದರೆ ಅದರ ಬುದ್ಧಿ ದೇಹ ಎರಡೂ ಗಟ್ಟಿಯಾಗಿರುತ್ತದೆ ಎಂದು

ನಂಬಿದವರಿಗೆ ಈಗ ಬಂದ ಸುದ್ದಿಯಿಂದ ಕತ್ತೆ ಹಾಲು ಎಲ್ಲಿ ಸಿಗುತ್ತದೆ ಎಂದು ಹುಡುಕಾಟ ಆರಂಭಿಸುವಂತೆ ಆಗಿದೆ. ಡೈರಿಯಲ್ಲಿ ಎಮ್ಮೆ ಹಾಲು, ಹಸುವಿನ ಹಾಲು ಸಿಗುವಂತೆ ಕತ್ತೆ ಹಾಲು ಕೂಡ ಸಿಗುವ ದಿನ ದೂರವಿಲ್ಲ ಎಂಬ ನಂಬಿಕೆ ಬಂದಿದೆಯಂತೆ. ಕತ್ತೆ ಮಾಂಸಕ್ಕೂ ಡಿಮ್ಯಾಂಡ್‌ಪ್ಪೋ ಡಿಮ್ಯಾಂಡು. ಈಗ ಕತ್ತೆ ಸಾಕಿರುವವರಿಗೂ, ಸಾಕಬೇಕೆಂದಿರುವವರಿಗೂ ಕೋಟ್ಯಾಧಿಪತಿಗಳಾಗುವ ಕನಸು.

ಇನ್ನು ಮುಂದೆ ಕತ್ತೆಭಡವ, ಕತ್ತೆಯಂತೆ ಅರಚುತ್ತಾನೆ, ಕತ್ತೆ ಮೇಯ್ಸು, ಕತ್ತೆ ಜನ್ಮಕ್ಕಿಷ್ಟು..., ಇತ್ಯಾದಿ ಇತ್ಯಾದಿ ವಿಶ್ಲೇಷಣಗಳನ್ನು ಉಪಯೋಗಿಸುವವರು ಜೋಪಾನ. ಪಾಪದ ಕತ್ತೆಗೀಗ ಪುಣ್ಯದ ಕಾಲವೇ ಸರಿ. ಕತ್ತೆ ಒದ್ದಂಗೆ ಓದಿತೀನಿ ಅಂತ ಹೇಳೋರಿಗೆಲ್ಲ ಇನ್ನುಮುಂದೆ ಕತ್ತೆಯ ಕಾಲು ಹಿಡಿದರೆ ಬದುಕು ಬಂಗಾರ! ಕುದುರೆಗೊಂದು ಲಾಯ ಕಟ್ಟಿದವರು, ಕತ್ತೆಯು ಬೀದಿಯಲ್ಲಿದ್ದರೂ ಲಕ್ಷ ಹರಿಸದಿದ್ದವರು, ಈಗ ಕತ್ತೆಗಳನ್ನು ವಿಶೇಷ ಆಸಕ್ತಿಯಿಂದ ರಾಜೋಪಚಾರ ಮಾಡಿ ಸಾಕಲೇಬೇಕು. ನಾಗಾಲೋಟದಲ್ಲಿ ಓಡುವ ಕುದುರೆಗಳ ಮೇಲೆ ಬೆಟ್ ಕಟ್ಟಿ ಕುದುರೆ ರೇಸಿನಲ್ಲಿ ಸಾಲು ನಿಂತವರು, ಈಗ ಕತ್ತೆಯನ್ನು ಹುಡುಕುತ್ತಾ ಕತ್ತೆ ಇಲ್ಲದಿದ್ದರೆ ನಾ ಕೆಟ್ಟೆ ಎನ್ನುವ ಹಾಡು ಹೇಳಬೇಕಿದೆ.

ಪುಟ್ಟ ಮಕ್ಕಳು ಆಟ ಆಡುತ್ತಾ,
ಇಂಕಿ ಪಿಂಕಿ ಪಾಂಕಿ
ಫಾದರ್ ಹ್ಯಾಡೆ ಡಾಂಕಿ
ಡಾಂಕಿ ಡೈಡ್
ಫಾದರ್ ಕ್ರೈಡ್

ಎಂದು ಚಪ್ಪಾಳೆ ತಟ್ಟುತ್ತಾ ಹಾಡಿ ಕುಣಿಯುತ್ತಾರಲ್ಲವೇ? ಇನ್ನು ಮಳೆರಾಯನ ಕರುಣೆಗೂ ಕತ್ತೆ ಬೇಕು. ಆಗ ಕತ್ತೆಗೆ ಮದುವೆ ಯೋಗ. ಗಂಡು ಹೆಣ್ಣು ಕತ್ತೆಗಳ ಕತ್ತಿಗೆ ಹಾರ ಹಾಕಿ ಮೆರವಣಿಗೆಯನ್ನೂ ಮಾಡುತ್ತಾರೆ. ಕತ್ತೆ ವಯಸ್ಸಾಯಿತು ಎಂದು ಅಪ್ಪ ಸಿಟ್ಟಿನಿಂದ ಮಗನಿಗೆ ಬೈದರೆ ಅವನಿಗೂ ಮದುವೆ ಆಲೋಚನೆ ಬಂದೀತು. ಆಗ ಕಾರ್ಯವಾಸಿ ಕತ್ತೆ ಕಾಲು ಕಟ್ಟು ಎನ್ನುವಂತೆ ಕನ್ಯಾಪಿತೃಗಳು ಇವನ ಕಾಲು ತೊಳೆದು ಹೆಣ್ಣು ಕೊಡುತ್ತಾರಲ್ಲವೇ. ರಟ್ಟು, ಕಾಗದ ತಿನ್ನುವ ಕತ್ತೆಗೆ ಲಾಡು, ಚಿರೋಟಿ ಊಟವು ಸಿಗುವ ಕಾಲ ಹತ್ತಿರವಾಗಿದೆ. ಮನುಷ್ಯನಿಗೆ ಪ್ರಿಯವಾದ ಸಾಕುಪ್ರಾಣಿಗಳ ಪಟ್ಟಿಯಲ್ಲಿ ನಾಯಿ, ಬೆಕ್ಕು, ಹಸು, ಕುದುರೆಗಳು ಇರುವಂತೆ ಇನ್ನುಮುಂದೆ ಅಗಸನಿಗಷ್ಟೇ ಅಲ್ಲ, ವಿದ್ಯೆ ನೈವೇದ್ಯವಾದ ಬುದ್ಧಿವಂತರ ಪರ್ಯಾಯ ಕಉದ್ಯೋಗಕ್ಕೆ ಅತ್ಯಗತ್ಯ ಸಾಧು ಪ್ರಾಣಿಯಾಗಲಿದೆ ಕತ್ತೆ. ಹೆಂಗೆ ಚಿತ್ರಗಾರರ ವಕ್ರದೃಷ್ಟಿಗೆ ಸದಾ ಬೀಳುತ್ತಿದ್ದ ಕಥೆಯ ಅದೃಷ್ಟ ಅಂತು ಈಗ ಬದಲಾಗಿದೆ.

ಕತ್ತೆಯ ಸ್ವಗತ... ಕುದುರೆಗಳ ಮಧ್ಯೆ ಕತ್ತೆಯಾಗಿ ನಾನಿದ್ದೆ. ಅವುಗಳ ಓಟ, ನೋಟ, ಊಟಗಳ ಜಗತ್ತಿನಲ್ಲಿ, ಹೇಷಾರವದ ಗಮ್ಮತ್ತಿನಲ್ಲಿ ಕೆಟ್ಟದಾದ ನನ್ನ ಅರಚಾಟ ಯಾರಿಗೂ ಕೇಳುತ್ತಿರಲಿಲ್ಲ. ಕತ್ತೆಯಾದರೇನು ಕುದುರೆಗಳ ಒಡನಾಟವಿತ್ತಲ್ಲ. ಉಜ್ಜುಜ್ಜಿ ಮೈ ತೊಳೆದರೂ ಬದಲಾಗದ ಈ ಹ್ಯಾಪುಮೋರೆ, ಅತ್ತೆಗೊಂದು ಕಾಲ, ಕತ್ತೆಗೊಂದು ಕಾಲ ಬಂದೇ ಬರುವುದೆಂಬ ನಂಬಿಕೆ ಸತ್ಯವಾಯಿತಲ್ಲ. ಅಷ್ಟು ಸಾಕು ಬಿಡಿ.

"ಕತ್ತೆಯಾದರೇನು ಶಿವ
ನಾ ಕೆಟ್ಟೆ ಎಂದುಕೊಳ್ಳದಿರುವೆ
ಮುತ್ತಿನಂತೆ ಬೆಲೆ ಕಟ್ಟಿದ ನನ್ನ
ಹಾಲು ಬತ್ತದಂತೆ ಮಾಡು ಶಿವ"

ಎಂದು ಈಗ ತನ್ನ ಬಾಚಿ ಹಲ್ಲುಗಳನ್ನು ತೋರಿಸುತ್ತಾ ನಗುನಗುತ ಗಾರ್ದಭ ಗಾನ ಮಾಡತೊಡಗಿದ ಕತ್ತೆ ಯಾವುದೇ ಬೀದಿಯಲ್ಲಿ ಆದರೂ ಪ್ರತ್ಯಕ್ಷವಾಗಬಹುದು. ನಾಲ್ಕೈದು ಕತ್ತೆಗಳೊಂದಿಗೆ 'ಕತ್ತೆ ಹಾಲು ಬೇಕಾಮ್ಮ, ಕತ್ತೆ ಹಾಲು ಬೇಕೇ' ಅಂತ ತಿರುಗಾಡುತ್ತಿದ್ದ ವ್ಯಕ್ತಿಯ ಫೋಟೋ ಕೂಡ ಹಿಂದೊಮ್ಮೆ ನಾನು ಕ್ಲಿಕ್ಕಿಸಿದ್ದೆ. ಕತ್ತೆ ಹಾಲಿನ ಟೀ.., ಕತ್ತೆ ಹಾಲಿನ ಕಾಫಿ ಕುಡಿಯುವ ದಿನ ದೂರವಿಲ್ಲ, ಕಾಯುತ್ತಿರಿ. ನಮಸ್ಕಾರ

***

ಅಸ್ಥಿ – ಆಸ್ತಿ

– ಸುಜಾತಾ ರವೀಶ್

ಅಸ್ಥಿ, ಆಸ್ತಿ ಎಂಬೀಪದಗಳ ನಡುವೆ
ಬರೀ ಒತ್ತಕ್ಷರ ಮಾತ್ರ ವ್ಯತ್ಯಾಸವಿಲ್ಲ
ದೀರ್ಘ ಹ್ರಸ್ವಗಳದಷ್ಟೇ ಅಂತರವಲ್ಲ
ಅಡಗಿದೆ ಸುಧೀರ್ಘ ಜೀವನದ ಕತೆ!

ಕೊನೆಗುಳಿವುದು ಎಲುಬು ತುಂಡು
ಎಂಬ ಪರಮ ಸತ್ಯವ ಮನಗಂಡು
ನಶ್ವರ ಬದುಕಿಗೆ ಬರಿ ನೀನು ಭಾಷ್ಯ
ಇಲ್ಲದಿರೆ ಉಳಿಯದೆಂದೂ ಭವಿಷ್ಯ

ಕಾಯವಿದು ಮೂಳೆಮಾಂಸದ ತಡಿಕೆ
ತಿಳಿಯದೆಯೇ ಬಡಿದಾಡಿ ಸಾಯ್ವರು
ನಾಲ್ಕು ದಿನದ ಬಾಳಿನಲಿ ಹೊಂದಿಕೆ
ತೋರಿಸದಲೇ ವಿರಸದಲಿ ಕಳೆವರು

ಹೊಡೆದಾಡಿ ಶ್ರಮದೆ ಗಳಿಸಿದಾ ಆಸ್ತಿ
ಕೊಂಡೊಯ್ವುದು ಏನು? ಬರೀ ಶೂನ್ಯ
ವಿಸರ್ಜಿಸಿರೆ ಪಾವನ ಜಲದಲಿ ಅಸ್ತಿ
ಲೋಕದ ನಂಟು ಆಗುವುದು ಸೊನ್ನೆ

ಅಸ್ಥಿಯು ಛಾಯೆ ಆಸ್ತಿಯು ಮಾಯೆ
ಇಹದ ಈ ಐಬೋಗಗಳೇ ಪರಿಛಾಯೆ
ಸನ್ಮಾರ್ಗದಲಿ ನಡೆಯುತಿರಲು ನೀನು
ಅಲ್ಲೇ ಕಾಣ್ವುದು ಸಾಫಲ್ಯ ತಾನೇ ತಾನು

***

ತಪ್ಪು...

– ಮಾಧುರಿ ಕೃಷ್ಣ

ಮೊನ್ನೆ ಅಂದ್ರೆ, ಇದೀಗ ಕಳೆದ ನವೆಂಬರಿನಲ್ಲಿ ಊರಿಗೆ ಹೋಗಿದ್ದೆ. ತಲುಪಿದ ಕೂಡಲೇ ಮಾಡಿದ ಮೊದಲ ಕೆಲಸವೆಂದರೆ ಒಂದು ಫೋನ್ ಕಾಲ್. 50 ವರ್ಷಗಳ ಹಿಂದೆ ಪದವಿ ಮುಗಿಸಿ ಕೊನೇಬಾರಿಗೆ ಬೀಳ್ಕೊಟ್ಟು ಚೆದುರಿಹೋದ ಸಹಪಾಠಿಯರಲ್ಲೊಬ್ಬನಿಗೆ ಫೋನ್ ಮಾಡಿ, ನಾನು ಊರಿಗೆ ಬಂದಿದ್ದೇನೆ, ನಿನ್ನಲ್ಲಿಗೆ ಬರುತ್ತೇನೆ, ವಿಳಾಸ ಕೊಡು ಎಂದೆ.

ಇತ್ತೀಚೆಗಷ್ಟೇ ನನಗೆ ಇನ್ಯಾರಿಂದಲೋ ತಿಳಿದು ಬಂದಿತ್ತು, ಈ ಘಟ್ಟದ ತಪ್ಪಲಿನ ಸಹಪಾಠಿ ತನ್ನ ನಿವೃತ್ತಿಯ ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ನಮ್ಮೂರಲ್ಲಿ ಜಾಗ ಖರೀದಿಸಿ, ಮನೆ ಕಟ್ಟಿ ವಾಸಮಾಡುತ್ತಿದ್ದಾನೆ ಎಂದು. ಉತ್ತರದ ಭಾಗಗಳಲ್ಲೇ ತನ್ನ ಬ್ಯಾಂಕಿನ ಸೇವಾವಧಿ ಮುಗಿಸಿ, ಕರಾವಳಿ ತೀರಕ್ಕೆ ಬಂದು ಆಗಲೇ ಹಲವಾರು ವರ್ಷಗಳೂ ಕಳೆದು, ಈಗ ಮೂರ್ನಾಲ್ಕು ವರ್ಷಗಳಿಂದ ಆರೋಗ್ಯ ಕೆಟ್ಟು ವ್ಹೀಲ್ ಚೇರ್‌ಗೇ ಅಂಟಿಕೊಡು ಬಿಟ್ಟಿದ್ದಾನೆಂದು ತಿಳಿಯುವುದರ ಜತೆಗೆ ಮೊಬೈಲಿನಲ್ಲಿ ಮಾತಾಡಿ ಊರಿಗೆ ಬಂದಾಗ ಭೇಟಿಮಾಡುವೆನೆಂದೂ ಹೇಳಿದ್ದೆ.

ನನ್ನ ಕರೆ ಸ್ವೀಕರಿಸಿದ ಕ್ಲಾಸ್‌ಮೇಟ್ ಹೇಳಿದ, 'ಇಂದು ಬೇಡ, ನಾಳೆ ಬೆಳಗ್ಗೆ ಮಣಿಪಾಲ್ ಆಸ್ಪತ್ರೆಗೆ ಹೋಗಲಿದೆ, ಒಂದು ವಾರ ಅಡ್ಮಿಟ್ ಆಗಬೇಕು, ವಾಪಾಸು ಬಂದ ಮೇಲೆ ಬಾ'.

ನನಗೆ ತುಂಬ ನಿರಾಸೆಯೂ, ಬೇಸರವೂ ಆಯ್ತು. 'ಸರಿ, ನೀನು ವಾಪಾಸು ಬಂದ ಮೇಲೆ ತಿಳಿಸು' ಎಂದು ಫೋನಿಟ್ಟೆ. ಇದಕ್ಕಿಂತ ಹೆಚ್ಚಿಗೆ ಏನನ್ನೂ ಪ್ರಶ್ನಿಸುವ ವಯಸ್ಸೇ ನಮ್ಮದಲ್ಲವಲ್ಲ! ಒಳಗಿಂದಲೇ ಕುಟುಕಿಕೊಳ್ಳುತ್ತ ವಾರವಲ್ಲ, ಹತ್ತು ದಿನಗಳೇ ಕಳೆದುವು, ಇನ್ನು ಕರೆ ಬರಲಿಕ್ಕಿಲ್ಲ ಎಂದಂದುಕೊಳ್ಳುವಾಗಲೇ ಆತನ ಕರೆ ಬಂತು. 'ಸದ್ಯ, ಊರಲ್ಲಿ ಇದ್ದೀ ತಾನೆ? ಇವತ್ತು ಸಾಯಂಕಾಲ, ಇಲ್ಲಾ ನಾಳೆ ಬರ್ತೀಯಾ' ಎಂದು ಕೇಳಿದ. ಮರುದಿನಕ್ಕೆ ಮುಂದುವರಿಸುವ ಮನಸ್ಸಿಲ್ಲದೇ, 'ಇವತ್ತೇ ಬರ್ತೇನೆ, ಮನೆ ವಿಳಾಸ ಕೊಡು'.

'ವಿಳಾಸ ಬೇಕಿಲ್ಲ, ಆ ಬೊಬ್ಬರ್ಯನ ಕಟ್ಟೆಯಲ್ಲಿ ಎಡಕ್ಕೆ ತಗೋ, ಮುಂದೆ ಮೊದಲ ರೈಟ್‌ನಲ್ಲೇ ಮನೆ ಕಾಣಿಸುತ್ತದೆ' ಎಂದ.

ಸರಿ, ಮಗನೂ ನಾನೂ ಹೊರೆಟೆವು. ಬಲಭಾಗಕ್ಕೆ ತಿರುಗಿದಾಗ, ಫೋನ್ ಮಾಡಿದೆ. 'ಎಲ್ಲಿ ಮಾರಾಯ, ನಿನ್ ಮನೆ?' ಆಗಲೇ ಮಹಿಳೆಯೊಬ್ಬರು ಬೇಗಬೇಗ ಬರೋದು ಕಾಣಿಸಿತು. ನಾನು ಕಾರಿನಿಂದಿಳಿದೆ, ಆಕೆ ರಸ್ತೆಯಿಂದ ತುಸು ಒಳಗಿದ್ದ ಮನೆ ತೋರಿದಳು. ಮಗ ಎರಡು ಗಂಟೆ ಬಿಟ್ಟು ಬರುತ್ತೇನೆಂದು ಹೊರಟುಹೋದ. ಸುಮಾರು 45ರ ಮಹಿಳೆ ಬನ್ನಿ' ಎಂದಳು.

ಮುಂದಿನ ಖಾಲಿ ಜಾಗವನ್ನು ದಾಟಿ ಮನೆ ಬಾಗಿಲಿಗೆ ಆ ಮಹಿಳೆ ಕರೆದೊಯ್ದಳು. ಬಾಗಿಲಿಗೆ ಸರಿ ಎದುರಾಗಿ ನನ್ನ 50 ವರ್ಷದ ಹಿಂದಿನ ಸಹಪಾಠಿ ಮರದ ಕುರ್ಚಿಯಲ್ಲಿ ಒಳಗಿಂದ ಕುಳಿತಿದ್ದ. ನನ್ನನ್ನು ಕಂಡೊಡನೆ ಮುಖ ಅರಳಿಸಿಕೊಂಡು, 'ಬಾ, ಬಾ' ಎಂದ. ಮುಂಚಿನಂತೇ ಬಿಳೀ ತುಂಬು ತೋಳಿನ ಷರ್ಟ್, ಕಪ್ಪು ಕ್ರಾಪಿನ ದಟ್ಟ

ಕೂದಲು, ಅದೇ 50 ವರ್ಷ ಹಿಂದಿನ ಗೌರವರ್ಣ, ಕುಚಿಯಲ್ಲಿ ಕುಳಿತೇ ಇದ್ದರೂ ಆರಡಿಯಾಗಿಯೇ ಕಾಣಿಸುತ್ತಿದ್ದ. ಒಂದೇ ಲೋಪವೆಂದರೆ ನನ್ನನ್ನು ಎದ್ದು ನಿಂತು ಸ್ವಾಗತಿಸಲಿಲ್ಲ.

'ಕೂತ್ಕೋ' ಎಂದು ಸಿಂಗಲ್ ಸೋಫಾ ತೋರಿಸಿದ. ಕುಳಿತುಕೊಳ್ಳುತ್ತ ನೋಡಿದೆ, ಸಮೀಪದ ದಿವಾನ್‌ನಲ್ಲಿ ದಢೂತಿ, ತಲೆ ಪೂರಾ ಬಿಳುಪಾಗಿದ್ದ ಮುದುಕಿ, ಬಾಯನ್ನು ಊರಗಲ ತೆರೆದು ನಗುತ್ತಿದ್ದಳು. ನಾನು ಕೂರುತ್ತಿದ್ದಂತೆ ನನ್ನ ಕರೆತಂದವಳಲ್ಲದೆ 40ರಲ್ಲಿದ್ದ ಇನ್ನೊಬ್ಬ ಮಹಿಳೆಯೂ ಬಂದು ಪಕ್ಕದಲ್ಲಿ ಕುಳಿತಳು. ಒಂಭತ್ತರ ಸುಂದರ ಹುಡುಗನೊಬ್ಬ ಚೂಟಿಯಾಗಿ ಓಡಾಡುತ್ತ ನನಗೆ ಎಳನೀರು ಮತ್ತು ಪಚ್ಚೆ ಬಾಳೆಹಣ್ಣು ತಂದಿತ್ತ. ಅಷ್ಟರಲ್ಲೇ ನಾವಿಬ್ಬರೂ ಮಾತುಕತೆ ಶುರುಮಾಡಾಗಿತ್ತು. ನಿಜ ಹೇಳಬೇಕೆಂದರೆ ಕಾಲೇಜಿನ ಕಾಲಮಾನದಲ್ಲಿ ನಾವು ವಿದ್ಯಾರ್ಥಿನಿಯರು, ಸಹಪಾಠಿ ಹುಡುಗರೊಂದಿಗೆ ಎಂದೂ ಮಾತಾಡಿದ್ದಿರಲಿಲ್ಲ. ಅಷ್ಟು ಅಗತ್ಯಬಿದ್ದರೆ ಎತ್ತಲೋ ನೋಡುತ್ತ, ಒಂದೋ ಎರಡೋ ಶಬ್ದಗಳಲ್ಲಿ ಮುಗಿಸಿಬಿಡುತ್ತಿದ್ದೆವು. ಇಂದು ಕಾಲ ಬದಲಾಗಿದೆ, ನಮಗೆ ವಯಸ್ಸಾಗಿದೆ. ತಂದೆತಾಯಿಯರ ಭಯವಿಲ್ಲ!

ಒಂದೇ ಸವನೆ ಮಾತಾಡುತ್ತ, ಆಗಿನ ಸಂಗತಿಗಳನ್ನು ನೆನೆಯುತ್ತ, ಎಲ್ಲ ಕ್ಲಾಸ್‌ಮೇಟ್ಸ್ ವಿವರ ಕೆದಕುತ್ತ, ಬದುಕಿ ಉಳಿದವರ ಲೆಕ್ಕ ಹಾಕುತ್ತ ಕುಳಿತಿದ್ದೆವು. ಆಗಲೇ ಮಗನ ಮೆಸೇಜ್ ಬಂತು.

ಓಹ್! ಎಂದುಕೊಂಡು ಏಳುವ ಸನ್ನಾಹ ಮಾಡುತ್ತ ನಾನು ಹೇಳಿದೆ. ಬಾಯಿಂದ ಮಾತು ಹೊರಬಿದ್ದ ಮೇಲೆ ಅದೇ ನಾನು ಮಾಡಿದ ದೊಡ್ಡ ತಪ್ಪು ಆಗಿಬಿಟ್ಟಿತು. ನಾನು ಹೇಳಿದ್ದಿಷ್ಟೇ "ಅಂತೂ ನಿನ್ನ ಮಿಸೆಸ್ ಬರಲೇ ಇಲ್ಲ! ಅವರನ್ನು ನೋಡದೆಯೇ ನಾನು ಹೋಗಬೇಕಾಯಿತು, ವೆರಿ ಸಾರಿ!!"

ಆ ತನಕ ಜೋರುಜೋರಾದ ನಮ್ಮ ಹರಟೆ, ನಗು, ಮಾತುಕತೆಗಳಿಂದ ಗಲಗಲಿಸುತ್ತಿದ್ದ ಆ ಪಡಸಾಲೆ ಇದ್ದಕ್ಕಿದ್ದಂತೆ ಸ್ಥಬ್ಧವಾಗಿ ಹೋಯಿತು. ಸಣ್ಣ ಸೂಜಿ ಬಿದ್ದರೂ ದೊಡ್ಡ ಗುಂಡಿನ ಸಪ್ಪಳ ಕೇಳಿದರಾಗುವಂತಹ ಮೌನ ಹಠಾತ್ತನೆ ಅಲ್ಲಿ ಆವರಿಸಿ ಬಂತು. ದಿವಾನ್ ಮೇಲೆ ಎರಡೂ ಕಾಲು ಚಾಚಿ ಕುಳಿತ ಮುದುಕಿಯ ಬಾಯಿ, ತೆರೆದದ್ದು, ತೆರೆದಂತೇ ಸ್ಥಗಿತಗೊಂಡಿತು. ನಲವತ್ತರ ಇಬ್ಬರು ಮಹಿಳೆಯರಲ್ಲಿ ಒಬ್ಬರಿಂದಲೂ ಸದ್ದೇ ಇಲ್ಲ!

'ಇದೇನಪ್ಪ? ಏನಾಯ್ತು ಇಲ್ಲಿ? ಎಂದು ಅರೆ ನಿಂತ ಸ್ಥಿತಿಯಲ್ಲಿ ನಾನು ಯೋಚಿಸಿದೆ. ನಮ್ಮ ಪದವಿ ಮುಗಿಯುವ ಕೊನೇ ದಿನಗಳಲ್ಲಿ ಈ ನಮ್ಮ ಸಹಪಾಠಿಗೆ ಮದುವೆಯಾಗಿತ್ತು. ನಾವ್ಯಾರೂ ವಿದ್ಯಾರ್ಥಿನಿಯರು ಹೋಗಿರಲೇ ಇಲ್ಲ, ಆತ ಕರೆದೂ ಇಲ್ಲ. ಆದರೆ ಉಳಿದ ಕ್ಲಾಸಿಗೆ ಬಂದ ಆತನಲ್ಲಿ ಟ್ರೀಟ್ ಮಾತ್ರ ಬಿಡದೆ ಕೇಳಿದ್ದೆವು. ಆತ ಕೊಟ್ಟಿದ್ದ. ಅದೂ ನಮ್ಮ ಡಿಮಾಂಡಿನಂತೆ ಡಬ್ಬಲ್ ಫ್ರುಟ್ಸ್ ಸಾಲಡ್! ಈಗ ನಾನಾಡಿದ ಮಾತಿನಲ್ಲಿ ಏನು ತಪ್ಪಾಯಿತು ಎಂದು ಅರೆ ನಿಂತ ಸ್ಥಿತಿಯಲ್ಲೇ ಆತನ ಮುಖ ನೋಡುವ ಪ್ರಯತ್ನ ಮಾಡುವುದರೊಳಗೇ ಆ ತನಕ ಗಂಭೀರವಾಗಿ ಕುಳಿತಿದ್ದ ಇಬ್ಬರೂ ಹೆಂಗಳೆಯರು ಒಟ್ಟಿಗೇ 'ಘೊಳ್ಳೆಂದು' ನಗತೊಡಗಿದರು. ನನ್ನ ಕ್ಲಾಸ್‌ಮೇಟ್ ಕೂಡಾ ಕುಳಿತಿದ್ದ ಮರದ ಕುರ್ಚಿಯೂ ಅಲುಗಾಡುವಂತೆ ಗಹಗಹಿಸಿ ನಗತೊಡಗಿದ. 'ಅರೇ, ಇದೇನೀಗ ' ಎಂದು ಗೊಂದಲಕ್ಕೊಳಗಾಗಿ ಬೆಪ್ಪುತಕ್ಕಡಿಯಂತೆ ನಾ ನೋಡುತ್ತಿರುವಾಗಲೇ, "ಆಂಟೀ, ಅವರೇ ನಮ್ಮಮ್ಮ.. ನಾವಿಬ್ಬರೂ ನಿಮ್ಮ ಕ್ಲಾಸ್‌ಮೇಟಿನ ಮಗಳಂದಿರು" ಎಂದು ಒಟ್ಟಿಗೇ ಹೇಳುತ್ತ ಮತ್ತೂ ಮತ್ತೂ

ನಕ್ಕರಾ ಲಲನೆಯರು. ಒಂದೇಸಮನೆ ನಕ್ಕಿದ್ದರಿಂದ ಬೆನ್ನಿಗಾಗಿದ್ದ ಹಿಂಸೆ ಸ್ಪಷ್ಟವಾಗಿ ಕಾಣುತ್ತಿದ್ದರೂ ನನ್ನ ಸಹಪಾಠಿಯ ಮುಖದಲ್ಲಿ ನಗು ಇನ್ನೂ ನಿಂತಿರಲಿಲ್ಲ.

'ಇದೇನನ್ನು ಮಾಡಿದೆ ನಾನು! ಮನೆಯಿಂದ ಹೊರಡುವ ಮುಂಚೆ ಕನ್ನಡಿಯಲ್ಲೊಮ್ಮೆ ಮುಖ ನೋಡಿ ಕೊಳ್ಳಬಾರದಿತ್ತೇ ಈ ನನ್ನ ಸಹಪಾಠಿಯಷ್ಟೇ ವಯಸ್ಸಾದವಳು ನಾನು. ಪೂರಾ 50 ವರ್ಷಗಳನ್ನು ಕಾಲ ಯಾನದಲ್ಲಿ ಕಳೆದು ಬಂದಿದ್ದೇನೆ. ಆತನನ್ನು ಕಂಡ ತಕ್ಷಣ ಎಲ್ಲ ವಿವೇಚನೆಯನ್ನು ಮರೆತು ಆ ಹಿಂದಿನ ದಿನಗಳಿಗೆ ತಿರುಗಿ ಹೋಗಿ, ನೀನು ತಾನೆಂದು ಮಾತನಾಡುತ್ತ, ನನ್ನ ದೈಹಿಕ ನೋವು, ಅನಾರೋಗ್ಯವನ್ನೂ ಮರೆತು, ವರ್ತಮಾನವನ್ನು ಮಾತ್ರ ಗಣಿಸುತ್ತ ಒಂದೇಸಮನೆ ಮಾತನಾಡತೊಡಗಿದೆಯಲ್ಲ' ಎಂದು ನನ್ನನ್ನು ನಾನೇ ಹಳಿದುಕೊಳ್ಳುತ್ತ, ಸಹಪಾಠಿ ಮಿತ್ರನನ್ನು ಕೇಳಿದೆ, "ಅಲ್ಲ, ನಾನು ಬಂದ ಕೂಡಲೇ ಇದು ನನ್ನ ಹೆಂಡತಿ, ಇವರಿಬ್ಬರು ನನ್ನ ಹೆಣ್ಣುಮಕ್ಕಳು ಎಂದು ಯಾಕೆ ಇಂಟ್ರಡ್ಯೂಸ್ ಮಾಡಲಿಲ್ಲ?" ಎಂದು ಅವನನ್ನೇ ಘಟ್ಟಿಸಿ ಕೇಳಿದೆ.

ದಿವಾನದಲ್ಲಿ ಎರಡೂ ಕಾಲು ಚಾಚಿ ಕುಳಿತ ಆತನ ಪತ್ನಿಯ ಎರಡೂ ಕೈಗಳನ್ನು ಹಿಡಿದು ಕ್ಷಮೆ ಬೇಡಿದೆ. ಅಷ್ಟರಲ್ಲಿ ನನ್ನ ಮುಖ ಮರ್ಯಾದೆ ಉಳಿಸಲೋ ಎಂಬಂತೆ ಮಗ ಬಂದು ಕಾರು ನಿಲ್ಲಿಸಿದ.

ಬೆಂಗಳೂರಿಗೆ ವಾಪಾಸು ಸೇರಿಕೊಂಡ ಮೇಲೂ ನನ್ನ ಮನಸ್ಸಿನ ಕಳವಳ ಕಡಿಮೆಯಾಗಿರಲಿಲ್ಲ. ನಿನ್ನೆ ಆ ಸಹಪಾಠಿ ಮಿತ್ರನ ಕರೆ ಬಂತು. "ನೀನು ಇನ್ನೊಮ್ಮೆ ಯಾವಾಗ ಬರುತ್ತೀ, ನನ್ನ ಮಿಸೆಸ್ ಮತ್ತು ಮಕ್ಕಳು ಕೂಡ ನಿನ್ನನ್ನೇ ಕೇಳುತ್ತಿದ್ದಾರೆ. ನನ್ನನ್ನು ವಿಸಿಟ್ ಮಾಡಲೆಂದೇ ಬಾ, ಬರುತ್ತೀಯಲ್ಲವೇ?"

ಆತನ ಆ ಫೋನಿನ ಕರೆಯಿಂದಾಗಿಯೇ ಇಂದಿನ ಲೇಖನ.

***

ಸಣ್ಣ ಕತೆ

ವಿಪ್ರಲಂಭ

– ಗಿರಿಜಾ ರಾಜ್ ಎಲ್.

ಯಾರ ಮನೆಗೆ ಹೊರಟಿರಿ ನೀವು? ಆ.., ಏನಂದಿರಿ ಅಲೋಕ ನಂದಿನಿ ನಿಕೇತನವೇ. ಹಾ, ನನ್ನ ಅನುಮಾನ ಸರಿಯಾಯಿತು, ಹಾಗಾದರೆ ದಯಮಾಡಿ ತಾವು ಸ್ವಲ್ಪ ಹೊತ್ತು ತಡೆದು ಹೋಗುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಆ ಮನೆಯಲ್ಲಿ ಈಗ ಮೂರನೆಯ ಮಹಾಯುದ್ಧ ನಡೆಯುತ್ತಿದೆ ಸ್ವಾಮಿ! ಯಾರ್ಯಾರಿಗೆ ಎಂದಿರಾ? ಇನ್ಯಾರಿಗೆ, ಇರೋದೇ ಇಬ್ಬರು. ಗಂಡ ಹೆಂಡತಿ, ಅಲೋಕ, ನಂದಿನಿ. ಒಳ್ಳೆ ಎಳೆಯ ಮಕ್ಕಳ ಹಾಗೆ ಕಚ್ಚಾಡ್ತಾರೆ. ಜಗಳ ಆಡುವಾಗ ಬಾಯಿ ಮಾತಿನಲ್ಲಿ ಎಷ್ಟು ಸಾರಿ ಡೈವೋರ್ಸ್ ಮಾಡಿಕೊಂಡಿದ್ದಾರೆಯೋ ಆ ದೇವರೇ ಬಲ್ಲ! ಜಗಳವಾಡಲು ಪ್ರಾರಂಭಿಸಿದ ಐದೇ ನಿಮಿಷಕ್ಕೆ ಇಬ್ಬರ ಬಾಯಲ್ಲೂ ಡೈವೋರ್ಸ್ ಮತ್ತು ಅದಕ್ಕೆ ಸಂಬಂಧಿಸಿದ ಪದಗಳು ನಿರರ್ಗಳವಾಗಿ ಲೀಲಾಜಾಲವಾಗಿ ಹರಿದು ಬರುತ್ತಿರುತ್ತವೆ, ಏನೆಂದಿರಿ? ನಿಮಗೂ ಆಸೆಯಾಗಿದೆಯೇ ನಿಮ್ಮ ಹೆಂಡತಿಯನ್ನು ಡೈವೋರ್ಸ್ ಮಾಡಲು? ತಪ್ಪಾಯ್ತು ಸ್ವಾಮಿ, ತಮಾಷೆಗೆ ಹಾಗಂದೆ, ಹೊಡೆಯೋದಕ್ಕೇ ಬರಬೇಡಿ. ಅಲೋಕ ನಂದಿನಿಯ ಜಗಳ ನೋಡಬೇಕೆಂಬ ಆಸೆ ಇದ್ದರೆ ಇಲ್ಲ ಬನ್ನಿ. ಹೀಗೆ ಈ ಮರೆಯಲ್ಲಿ ನಿಲ್ಲೋಣ. ಇನ್ನೂ ಹತ್ರ ಬನ್ನಿ. ನೋಡಿ, ಕೇಳ್ತಾ ಇದೆ ಕದನ ಕುತೂಹಲ ರಾಗ, ಗಂಡ ಹೆಂಡತಿಯ ಜಗಳದಲ್ಲಿ ಮನೆಯ ವಸ್ತುಗಳು ಚೆಲ್ಲಾಪಿಲ್ಲಿಯಾಗಿವೆ, ಸದ್ಯ! ಮಗುವೊಂದು ಇನ್ನೂ ಹುಟ್ಟಿಲ್ಲ, ಇದ್ರೆ ಮನೆಯ ಸಾಮಾನಿನಂತೆ ಅದನ್ನೂ ಚೆಂಡೆಂದು ಎಸೆದಾಡುತ್ತಿದ್ದರೇನೋ! ಇಬ್ಬರ ಜಗಳದಲ್ಲಿ ಆ ಕೂಸು ಬಡವಾಗುತ್ತಿತ್ತು! ಇಲ್ಲದಿದ್ದುದೆ ಒಳ್ಳೆಯದಾಯಿತು ಬಿಡಿ.

ದಿಂಬೊಂದು ರೊಯ್ಯನೆ ಬಂದು ತನ್ನ ಬೆನ್ನಿಗೆ ಬಡಿದಾಗ ಅಲೋಕನ ಕೋಪ ಮುಗಿಲಗೇರಿತು. ಕಾಳಿಯಂತೆ ತಲೆಕೆದರಿ ನಿಂತಿದ್ದ ಮನದನ್ನೆಯ ಕಡೆ ತಿರುಗಿದ. "ಅಬ್ಬ! ಭದ್ರಕಾಳಿ, ಆ ದಿನ ತ್ರಿಲೋಕ ಸುಂದರಿಯಂತೆ ಕಂಡಿದ್ದು ಈ ಕಾಳಿನೇನಾ? "ಏನಂದಿ, ಹೆಣ್ಣಾದ ನಿನಗೇ ಇಷ್ಟು ಕೋಪವಿರಬೇಕಾದರೆ ಗಂಡಸಾದ ನನಗೆಷ್ಟಿರಬೇಕು" ಎಂದು ಕೈಯಲ್ಲಿ ಹಿಡಿದಿದ್ದ ಪುಸ್ತಕವನ್ನು ರೊಯ್ಯನೆ ಹೆಂಡತಿಯ ಮೇಲೆ ಬೀಸಿದ.

ನಂದಿನಿ ಮತ್ತಷ್ಟು ವ್ಯಗ್ರಳಾಗಿ, "ಕೋಪಕ್ಕೆ ಗಂಡೇನು, ಹೆಣ್ಣೇನು? ಗಂಡಸರೇನು ಕೋಪದ ಗುತ್ತಿಗೆ ಹಿಡಿದಿದ್ದಾರೆಯೇ?"

ತೆರೆಯ ಮರೆಯಿಂದ... "ನಗಬೇಡ್ರಿ.., ಅಲೋಕ ನಂದಿನಿಗೆ ಕೇಳಿಸಿದರೆ ನಿಮ್ಮ ಹಲ್ಲು ಮುರಿಯುತ್ತಾರೆ, ಅಗೋ ನೋಡಿ, ನೆರೆಮನೆಯ ಶಂಕರ ಭಟ್ರು ಕೋಪದಿಂದ ಇವರ ಮನೆಯ ಕಡೆಗೇ ಬರುತ್ತಿದ್ದಾರೆ, ಹಿಂದುಗಡೆ ಮನೆ ಸರೋಜಮ್ಮ ಬಂದ್ರು ನೋಡಿ, ಎದುರುಗಡೆ ಮನೆ ಕಿಟಕಿ ಕಾಮಾಕ್ಷಮ್ಮ ಕಿಟಕಿಯಿಂದ ಇಣಿಕಿ ನೋಡ್ತಾ ಇದ್ದಾರೆ. ನೆರೆಹೊರೆಯವರಿಗೆಲ್ಲ ಇವರ ಜಗಳ ಕೇಳಿ ಕೇಳಿ ಸಾಕಾಗಿ ಬಿಟ್ಟಿದೆ! ಇನ್ನೊಂದು ಸ್ವಲ್ಪ ದಿನ ಹೀಗೇ ಆದರೆ ಹಿಂದುಗಡೆ ಮುಂದುಗಡೆ ಅಕ್ಕಪಕ್ಕದ ಮನೆಯವರನ್ನೆಲ್ಲಾ ಹುಚ್ಚಾಸ್ಪತ್ರೆಗೆ ಸೇರಿಸಬೇಕಾಗುತ್ತದೆ. ಶಂಕರ ಭಟ್ರು ಮೂಗಿಗೆ ನಶ್ಯ ಏರಿಸುತ್ತಾ ಹೇಳಿದರು, "ಏನಯ್ಯ ಅಲೋಕ, ಬೆಳಗ್ಗೆ ಎದ್ದ ಕೂಡಲೇ ತೆಗೆದುಬಿಟ್ರಾ ಸಾವೇರಿ ರಾಗ! ಒಳ್ಳೇ ಲಕ್ಷ್ಮಿನಾರಾಯಣರ ಹಾಗಿದ್ದೀರಿ, ದಿವಿನಾದ ಜೋಡಿ. ನೂರು ವರ್ಷ ಬಾಳಿ ಅಂತ ನಾವೆಲ್ಲ ಹರಸಿದೆವಲ್ಲಯ್ಯ ಮದುವೆಯಲ್ಲಿ. ನಿಮ್ಮ ಜಗಳ ನೋಡಿ ನೋಡಿ ಯಾಕೋ ನಮಗೆ ಆಯಸ್ಸು ಕಮ್ಮಿ ಆಗ್ತಾ ಇರೋಹಾಗಿದೆ",

ಅಲೋಕ, "ನೋಡಿ ಭಟ್ಟರೆ, ಅವಳೇ ಕಾಲು ಕೆರೆದುಕೊಂಡು ಮೊದ್ಲು ಜಗಳಕ್ಕೆ ಬರ್ತಾಳೆ". ನಂದಿನಿ ಸೊಂಟಕ್ಕೆ ಸೆರಗು ಸಿಕ್ಕಿಸಿ ನಡುವಿನ ಮೇಲೆ ಕೈ ಇಟ್ಟು ಕಣ್ಣುಗಳಲ್ಲಿ ಕಿಡಿಕಾರುತ್ತಾ, "ಏನೆಂದ್ರಿ, ನಾನು ಕಾಲು ಕೆರೆದುಕೊಂಡು ಜಗಳಕ್ಕೆ ಬರ್ತೀನಾ? ನಮ್ಮಪ್ಪನ ಸುದ್ದಿ ಯಾಕ್ರೀ ಬೇಕು ಬೆಳಗ್ಗೆ ಎದ್ದ ತಕ್ಷಣ ನಿಮಗೆ?" ಸರೋಜಮ್ಮ ನಂದಿನಿಯನ್ನು ಸಮಾಧಾನ ಮಾಡುತ್ತಾ, "ಇಂಥದು ಹತ್ತು ಮಾತು ಬರುತ್ತೆ ಹೋಗುತ್ತೆ. ಬಿಡು ನಂದಿನಿ, ಬೆಳಗ್ಗೆ ಎದ್ದು ಯಾಕೆ ಕಾದಾಡುತ್ತೀರಿ, ನಿಮಗೇನು ಕಡಿಮೆಯಾಗಿದೆ? ಹಾಯಾಗಿ ಸಂಸಾರ ಮಾಡ್ಕೊಂಡು ಇರೋದು ಬಿಟ್ಟು... ಒಂದು ಮಗು ಆಗೋವರೆಗೂ ಹೀಗೆ ಎಳೆಮಕ್ಕಳ ಹಾಗೆ ಕಿತ್ತಾಡ್ತೀರಾ ಆಮೇಲೆ ಎಲ್ಲ ಸರಿಹೋಗುತ್ತೆ" ಎಂದು ನಕ್ಕರು. ಶಾಮರಾಯರು ಗಂಭೀರವಾಗಿ ಹೇಳಿದರು, "ಇದು ಹೀಗೆ ಮುಂದುವರೆದರೆ ಚೆನ್ನಾಗಿರಲ್ಲ! ನಮಗೂ ಇಷ್ಟು ದಿನ ನೋಡಿ ನೋಡಿ ಸಾಕಾಯ್ತು! ಅಲೋಕ ನಿಮ್ಮ ತಂದೆಗೆ ನಾನು ಕಾಗದ ಬರೀತೀನಿ, ಅವರೆಲ್ಲ ಬಂದು ಏನಾದರೂ ಒಂದು ತೀರ್ಮಾನ ಮಾಡ್ಲಿ" ಎಂದರು. ಶಂಕರ ಭಟ್ಟರು, "ಹೋಗ್ಲಿ, ಜಗಳ ಕಾಯೋದ್ ಕಾಯ್ತಾರೆ.. ಕಿಟಕಿ ಬಾಗಿಲುಗಳೆಲ್ಲ ಭದ್ರವಾಗಿ ಮುಚ್ಕೊಂಡಾದ್ರು ಕಾಯಲ್ಲ" ಎಂದು ಗೊಣಗಿದರು. ಏನೋ ಹೊಳೆದವರಂತೆ "ತಡೀರಿ, ತಡೀರಿ... ಒಂದು ನಿಮಿಷ" ಎಂದು ಅಲೋಕ ನಂದಿನಿಯರ ಬೆಡ್‌ರೂಮಿಗೆ ನುಗ್ಗಿದರು. ಎರಡು ಮೂರು ನಿಮಿಷಗಳಲ್ಲಿ ಹಿಂತಿರುಗಿದ ಭಟ್ಟರು, "ಶಾಮರಾಯರೇ, ನೀವು ಹೇಳಿದ್ದು ಸರಿ, ಆಲೋಕನ ತಂದೆಗೆ ಇವತ್ತೇ ಫೋನ್ ಮಾಡಿ ವಿಷಯ ತಿಳಿಸಿರಿ" ಎಂದರು. ಶ್ಯಾಮರಾಯರು ಮತ್ತು ಸರೋಜಮ್ಮ ಒಳಗೆ ಹೋಗಿ ಎರಡೇ ನಿಮಿಷದಲ್ಲಿ ಅದೇನು ಕಂಡುಹಿಡಿದಿರಿ ಭಟ್ಟರೆ ಎಂದರು. ಕಣ್ಣಿಗೇ ಕಾಣುತ್ತಿದೆ, ಒಂದು ಮಂಚ ಈ ಮೂಲೆಯಲ್ಲಿ, ಒಂದು ಮಂಚ ಆ ಮೂಲೆಯಲ್ಲಿ... 'ಶಾಮರಾಯರೇ ಇದು ಸಾಮಾನ್ಯ ಜೋಡಿಯಲ್ಲ, ಗಂಡ ಹೆಂಡತಿಯರ ಜಗಳ ಉಂಡು ಮಲಗುವವರೆಗೆ ಅನ್ನುವ ಗಾದೆ ಸುಳ್ಳು ಮಾಡಿಬಿಟ್ರು...' ಎಲ್ಲರೂ ಜೋರಾಗಿ ನಕ್ಕರು, ಆ ಜಗಳಗಂಟರಿಬ್ಬರನ್ನೂ ಬಿಟ್ಟು.

ಅಲೋಕ ನಂದಿನಿಯನ್ನು ಇಷ್ಟಕ್ಕೆಲ್ಲಾ ನೀನೇ ಕಾರಣ ಎನ್ನುವಂತೆ ದುರುಗುಟ್ಟಿ ನೋಡಿದ. ನಂದಿನಿ ಅವನನ್ನು ಕಣ್ಣಲ್ಲೇ ಸುಡುವಂತೆ ನೋಡಿದಳು. ಅಲೋಕನ ತಂದೆಗೆ ಶಾಮರಾಯರು ಫೋನ್ ಮಾಡಿ ವಿಷಯವನ್ನು ವಿವರವಾಗಿ ತಿಳಿಸಿದರು. ಸರೋಜಮ್ಮ ನಂದಿನಿಯ ತಾಯಿಯ ಜೊತೆಯಲ್ಲಿ ಫೋನಿನಲ್ಲಿ ಮಾತಾಡಿ ವಿಷಯ ತಿಳಿಸಿದರು. ಎರಡು ದಿನಗಳ ನಂತರ ಇಬ್ಬರ ತಂದೆತಾಯಿಯರು ಬಂದಿಳಿದರು. ನಂದಿನಿ ಅಲೋಕರನ್ನು ಕೂಡಿಸಿಕೊಂಡು ಗಂಟೆಗಟ್ಟಲೆ ಬುದ್ಧಿ ಹೇಳಿದರು. ನಂದಿನಿ ಒಂದೇ ಮಾತಿನಲ್ಲಿ ಹೇಳಿಬಿಟ್ಟಳು, "ಇವರೊಂದಿಗೆ ಸಂಸಾರ ಮಾಡಲು ರಾಕ್ಷಸಿಯೇ ಬರಬೇಕು, ನನ್ನ ಕೈಯಲ್ಲಿ ಸಾಧ್ಯವಿಲ್ಲ".

ಅಲೋಕ, "ಏಯ್ ಇಂಡೈರೆಕ್ಟ್ ಆಗಿ ಹೇಳ್ತಾ ಇದೀಯಾ ನಾನು ರಾಕ್ಷಸ ಅಂತ. ರಾಕ್ಷಸಿ ಜೊತೆಯಲ್ಲಾದರೂ ಸಂಸಾರ ಮಾಡಬಹುದು, ನಿನ್ನೊಂದಿಗೆ ಸಾಧ್ಯವಿಲ್ಲ! ಇವತ್ತೇ ಡೈವೋರ್ಸಿಗೆ ಅಪ್ಲೈ ಮಾಡ್ತೀನಿ". ನಂದಿನಿ ಕೋಪದಿಂದ "ನೋಡಿ ನೋಡಿ, ಮಾತಿಗೆ ಮುಂಚೆ ಹೇಗೆ ಹೆದರಿಸುತ್ತಾರೆ, ಮಾಡ್ಕೋಹೋಗ್ರಿ, ನಾನು ದುಡಿದು ನನ್ನ ಹೊಟ್ಟೆ ತುಂಬಿಸ್ಕೋತೀನಿ, ಸ್ವತಂತ್ರವಾಗಿ ಬಾಳ್ತೀನಿ" ಎಂದಳು. ಎಲ್ಲರೂ ಸೇರಿ ಕೊನೆಗೆ ಹೀಗೆ ತೀರ್ಮಾನಿಸಿದರು. ಆರು ತಿಂಗಳು ಇವರು ಪರಸ್ಪರ ಭೇಟಿಯಾಗುವುದು ಬೇಡ, ಸ್ವಲ್ಪವಾದರೂ ಮೃದುವಾಗಿರುತ್ತಾರೆ, ನಂತರ ಏನನ್ನೂ ನಿರ್ಧರಿಸುವುದು ಒಳ್ಳೆಯದು.

ನಂದಿನಿ ಇಲ್ಲದ ಮನೆಗೆ ಆಫೀಸಿನಿಂದ ಮೊದಲ ಸಂಜೆ ಕಾಲಿಡುತ್ತಿದ್ದಂತೆಯೇ ಅಲೋಕ, ಅಬ್ಬ ಪೀಡೆ ತೊಲಗಿತು! ಎಂದು ಖುಷಿಯಿಂದ ಮನೆ ತುಂಬಾ ಓಡಾಡಿದ, ಕುಣಿದು ಕುಪ್ಪಳಿಸಿದ. ಹೋರಾಟ ನಡೆಸಿ ಸ್ವಾತಂತ್ರ್ಯ ಸಿಕ್ಕಿದವನಂತೆ ಹೆಮ್ಮೆಪಟ್ಟ. ಶಿಳ್ಳೆ ಹಾಕಿದ, ಹಾಡಿದ, ಕೂಗಿದ. "ಆಹಾ... ಎಲ್ಲೆಲ್ಲೂ ನಾನೇ, ನನ್ನದೇ

ಸಾಮ್ರಾಜ್ಯ!" ಎಂದು ಹಿಗ್ಗಿದ. ಎಲ್ಲಾ ಸಂಭ್ರಮ, ಹಾರಾಟ ಹೆಚ್ಚೆಂದರೂ ಒಂದೇ ಗಂಟೆಯಲ್ಲೇ ಮಗಿದು ಹೋಯಿತು. ಎದುರು ಮನೆ ಕಿಟಕಿ ಕಾಮಾಕ್ಷಮ್ಮ ಕಿಟಕಿಯಲ್ಲಿ, 'ಹೆಣ್ತೀನ ಊರಿಗೆ ಕಳಿಸಿ ಒಂದೇ ಖುಷಿಪಡ್ತಾ ಇದೆ ಮುಂಡೇದು!' ಎಂದು ಅಂದುಕೊಂಡು ಕಿಟಕಿ ಬಾಗಿಲನ್ನು ದಬಾರನೆ ಮುಚ್ಚಿದಳು. ಈಗ ಅಡಿಗೆ ಮಾಡುವ ಸಂಭ್ರಮವು ನನ್ನ ಪಾಲಿಗೆ! ನನಗಿಷ್ಟ ಬಂದ ಸಾಮಾನುಗಳನ್ನು ಹಾಕಿ ನಾನು ಇಚ್ಛಿಸಿದಂತೆ ಅಡಿಗೆ ಮಾಡಬಹುದು. ಯಾರೀಗ ನನ್ನ ತಡೆಯುವವರು? ಮೊದಲು ಕಾಫಿ ಮಾಡಿಕೊಳ್ಳುತ್ತೇನೆ ಸರಿ, ಆದರೆ ಕಾಫಿ ಹೇಗೆ ಮಾಡುವುದು? ಇವಳು ಎಲ್ಲವನ್ನು ಒಂದು ಕಡೆ ಬರೆದಾದರೂ ಇಟ್ಟಿದ್ದರೆ ಎಷ್ಟು ಚೆನ್ನಾಗಿತ್ತು. ಸಂಜೆ ನಾನು ಬಂದ ತಕ್ಷಣ ಅವಳ ಮುಖದ ಮೇಲೆ ಸಿಟ್ಟೋ ನಗುವೋ ಏನೇ ಇರಲಿ ಕಾಫಿ ಮಾತ್ರ ತಪ್ಪದೆ ಕೈಗೆಡುತ್ತಿದ್ದಳು. ಬಂದ ತಕ್ಷಣ ಅದಿಲ್ಲದಿದ್ದರೆ ನನಗಂತೂ ಹುಚ್ಚೇ ಹಿಡಿಯುತ್ತಿತ್ತು. ಒಂದು ಕಾಫಿಗೋಸ್ಕರ ಅವಳನ್ನೇನು ಮಹಾ ನೆನೆಸಿಕೊಳ್ಳುವುದು. ನಾನೇ ಮಾಡುತ್ತೇನೆ, affter all a cup of Coffee...

ಮೊದಲು ನೀರು ಇಡುತ್ತೇನೆ, ಇಷ್ಟು ಸಾಕು, ನೀರು ಕುದಿಯುತ್ತಿದೆ, ಇಲ್ಲಿ ಕಾಫಿ ಪೌಡರ್ ಎಲ್ಲಿದೆ? ಥೂ, ಈ ನಂದಿ ಅದೆಲ್ಲಿ ಇಟ್ಟು ಬಿಟ್ಟಿದ್ದಾಳೋ? ಅಯ್ಯೋ ಸಿಗಲೇ ಇಲ್ಲ, ಪಾತ್ರೆ ಕೆಳಗೆ ಇಳಿಸಿಬಿಡುತ್ತೇನೆ. ಕಾಫಿಪುಡಿ ಸಿಕ್ಕಲಿ ಮುಂಚೆ. ನೀರೆಲ್ಲಾ ಕುದ್ದು ಆವಿಯಾಗಿ ಬಿಟ್ಟಿದೆಯಲ್ಲಾ! ಪಾತ್ರೆ ಚೆನ್ನಾಗಿ ಕಾದುಬಿಟ್ಟಿದೆ. ಅಯ್ಯೋ ಕೈ ಸುಟ್ಟಿತು, ಸಾಕಪ್ಪ ಈ ಕಾಫಿಯೂ ಬೇಡ, ಈ ಬವಣೆಯೂ ಬೇಡ! ಎಷ್ಟೊಂದು ಊದಿತು ಚರ್ಮ! ಮೊದಲ ಬಾರಿಗೆ ದಿಕ್ಕುಗೆಟ್ಟಂತವನಾದ ಅಲೋಕ. ಔಷಧಿ ಎಲ್ಲಿದೆಯೋ? ಎಲ್ಲಾ ನಂದಿನಿ ತಕ್ಷಣ ತಂದು ಕೊಡುತ್ತಿದ್ದಳು. ಅಯ್ಯೋ, ಉರಿಯುತ್ತಿದೆ ಏನು ಮಾಡಲಿ?

ಅಲೋಕ ಹುಚ್ಚನಂತೆ ಬಡಬಡಿಸುತ್ತ ಆರಾಮ ಕುರ್ಚಿಯಲ್ಲಿ ಸೋತವನಂತೆ ಕಣ್ಣು ಮುಚ್ಚಿದ. "ಇಂದಿನಿಂದ ನಾನೇ ರಾಜ" ಎಂದು ಅರ್ಧ ಗಂಟೆಯ ಹಿಂದೆ ಮನೆ ತುಂಬಾ ಮೆರೆದಾಡಿದನಲ್ಲ, ಅದೆಷ್ಟು ಸುಳ್ಳು! ಛೇ ನಾನೇಕೆ ಹೀಗೆ ಸೋಲೊಪ್ಪಿಕೊಳ್ಳುತ್ತಿದ್ದೇನೆ. ಹೋಟೆಲ್‌ಗೆ ಹೋಗಿ ಕುಡಿದು ಬಂದರಾಯಿತು, ಅದೂ ಅಲ್ಲದೆ ಇದು ಮೊದಲ ಪ್ರಯೋಗ, ಹಾಗಾಯಿತು. ಈ ಸಣ್ಣ ಗಾಯಕ್ಕೆ ಹೆದರುವುದೇ? ಇನ್ನೊಂದು ಸಾರಿ ಎಚ್ಚರಿಕೆ ಯಿಂದ ಮಾಡಿದರಾಯ್ತು. ನಾನು ಇಲ್ಲಿ ಇಷ್ಟು ಒದ್ದಾಡುತ್ತಿದ್ದೇನೆ, ಅವಳು ತವರಿನಲ್ಲಿ ಮಜವಾಗಿದ್ದಾಳೆಂದು ಕಾಣುತ್ತದೆ, ನಾನೇಕೆ ಇಷ್ಟು ಬೇಗ ಸೋಲುತ್ತಿದ್ದೇನೆ? ತನಗೆ ಬೇಕಾದರೆ ಬರಲಿ, ಎಂದು ಮೊಂಡವಾದ ಹಿಡಿಯಿತು ಮನಸು. ಹೇಗೇ ತನ್ನ ವರ್ತನೆಯನ್ನು ಸಮರ್ಥಿಸಿಕೊಂಡರೂ ಎಲ್ಲೋ ಎದೆಯ ಅಂತರಾಳದಲ್ಲಿ ಯಾವುದೋ ಮೂಲೆಯಲ್ಲಿ ನೋವಾಯಿತು? ಅದೇಕೆ? ಅದೇನು? ಎಂದು ಸ್ಪಷ್ಟವಾಗಿ ಅರಿವಾಗಲಿಲ್ಲ ಅಲೋಕನಿಗೆ. ಮೂಲೆಯ ಮೇಜಿನ ಮೇಲಿದ್ದ ಹೂದಾನಿಯಲ್ಲಿನ ಒಣಗಿದ ಹೂಗಳು ತಮ್ಮ ವಿಚಿತ್ರ ಆಕಾರಗಳೊಡನೆ ಅವನನ್ನು ಅಣಕಿಸಿದವು. ಒಂದೆರಡು ದಿನಗಳು ಕಳೆಯುವಷ್ಟರಲ್ಲಿ ಅವನ ತೋರಿಕೆಯ ಆಟಾಟೋಪ ನೀರಿನ ಗುಳ್ಳೆಯಂತೆ ಟಪ್ಪೆಂದು ಒಡೆಯಿತು. ಕಾಫಿ ಮಾಡಲು ಹೋಗಿ ಒಂದು ಕಡೆ ಕೈ ಸುಟ್ಟುಕೊಂಡರೆ, ತಿಂಡಿ ಮಾಡಲು ಹೋಗಿ ಹತ್ತಾರು ಕಡೆ, ಅಡುಗೆ ಮಾಡಲು ಹೋಗಿ ಇಪ್ಪತ್ತಾರು ಕಡೆ ಸುಟ್ಟುಕೊಂಡ. ಛೇ! ಕೋಪದಲ್ಲಿ ನಾನೇನೋ ಹಾಗಂದೇ ಅಂತ ಇವಳು ನನ್ನನ್ನು ಹೀಗೆ ಬಿಟ್ಟು ಹೊರಟೇ ಹೋಗುವುದೇ? ಮನಸಾದರೂ ಹೇಗೆ ಬಂತು? ಎಂದು ಅಂದುಕೊಂಡಾಗ ಅವನಿಗೆ ಅರಿಯದಂತೆ ಕಂಠ ಗದ್ಗದವಾಗಿತ್ತು. ಮನೆಯಂತೆ ಹೃದಯವನ್ನು ಶೂನ್ಯತೆ ಆವರಿಸಿತು. ಯಾರು ಯಾರು ಈ ಮನೆಯನ್ನು ತುಂಬಿದ್ದವರು? ಹೃದಯವನ್ನು ಬರಿದುಮಾಡಿ ಹೋದವರು ಯಾರು? ಇನ್ನಾರು ನಂದಿನಿ, ಛೀ ಎಂದಿಗೂ ಇಲ್ಲ,

ಅವಳನ್ನು ನಾನು ದ್ವೇಷಿಸುತ್ತೇನೆಂಬುದು ಸುಳ್ಳು ಎಂದಿತು ಎದೆಯ ಆ ಮೂಲೆಯ ದನಿ! ಯಾರವರು ಈಚೀಚೆಗೆ ನನ್ನ ನಿದ್ದೆಯನ್ನು ಹಾಳು ಮಾಡುತ್ತಿದ್ದಾರೆ?

ಅದೇ ನುಡಿಗಳು ಅವೆಲ್ಲ ನನಗೆ ತಿರಪರಿಚಿತ. ಅವಳು ಯಾರು? ನಂದಿನಿ.. ನನ್ನ ನಂದಿನಿ, ಅಲೋಕ ಅಲೋಕ ಎಂದು ಕೂಗುತ್ತಾ ಮೆಲುನಗುತ್ತಿದ್ದಾಳೆ. ನಾನು ಹಿಡಿಯಹೋಗುತ್ತೇನೆ, ಅಯ್ಯೋ ಮಾಯವಾದಳು ನಂದಿನಿ.. ಬೇಗ ಬಾ, ನಿನ್ನ ಕೊರತೆ ಮನೆಯ ಒಂದೊಂದು ವಸ್ತುವಿನಲ್ಲಿಯೂ ಕಾಣುತ್ತಿದೆ. ಒಂದೇ ವಾರಕ್ಕೆ ನಾನು ಸೋತು ಹೋದೆ, ಇನ್ನು ಆರು ತಿಂಗಳು! ಸತ್ತೇ ಹೋಗುತ್ತೇನೆ. ನಿಶ್ಚೇಷ್ಠಿತನಂತೆ ಆರಾಮ ಕುರ್ಚಿಗೆ ಒರಗಿದ. ಅವನ ಮುಖ ನೋಡಿದರೆ ಅವನ ಶತ್ರುಗಳು ಕನಿಕರಿಸುವಂತಿತ್ತು. ನಂದಿನಿ ಹೋದ ಒಂದೇ ವಾರಕ್ಕೆ ಅಡಿಗೆ ಪ್ರಯೋಗ ನಿಂತಿತ್ತು, ಹೊಟೇಲಿನ ಊಟ ಅಭ್ಯಾಸವಿಲ್ಲ. ಹಸಿವು ತಡೆಯಲಾರದೆ ಹೋಟೆಲಿಗೆ ಶರಣು ಹೋಗುತ್ತಿದ್ದ ತಿನ್ನುವ ತಟ್ಟೆಯಲ್ಲಿ ನಂದಿನಿಯ ಮುಖ ಕಾಣಿಸಿ, ಅವಳು ಅಣಕಿಸಿ ತುಂಟ ನಗೆ ನಕ್ಕಂತಾಗುತ್ತಿತ್ತು. ಮುಂದೆ ಒಂದು ತುತ್ತೂ ತಿನ್ನಲು ಆಗದೆ ಅಲ್ಲಿಂದ ಮೇಲೆ ಏಳುತ್ತಿದ್ದ. ಆರೇ ದಿನಗಳಲ್ಲಿ ಅವನ ಕಣ್ಣುಗಳಲ್ಲಿನ ಕಾಂತಿ ಹಿಂಗಿತು. ಕೆನ್ನೆಗಳು ಬಡಕಲಾದವು, ರಾತ್ರಿಯೆಲ್ಲ ನಂದಿನಿ ಎಂದು ಕನವರಿಸುತ್ತಾ ಆರಾಮ ಕುರ್ಚಿಯಲ್ಲಿ ಒರಗಿದ.

ಅಲೋಕ ಮನೆ ಬಾಗಿಲು ತೆರೆದು ಎರಡು ದಿನಗಳಾಯ್ತು. ಎರಡು ದಿನಗಳಿಂದ ಎದುರು ಮನೆ ಕಿಟಕಿ ಕಾಮಾಕ್ಷಮ್ಮ ಗಮನಿಸುತ್ತಿದ್ದಾಳೆ. ಆದಿನ ಹೆಂಡತಿನ ಊರಿಗೆ ಕಳಿಸಿ ಒಂದೇ ಖುಷಿಪಡ್ತಾ ಇದೆ ಮುಂಡೇದು ಎಂದು ಕಟಕಿ ಆಡಿದ್ದ ಕಿಟಕಿ ಕಾಮಾಕ್ಷಮ್ಮನ ಕೋಪ ಮಂಜಿನಂತೆ ಕರಗಿತು. ಅಯ್ಯೋ.. ಏನಾಗಿದೆಯೋ ಏನೋ, ಎಷ್ಟೇ ಜಗಳ ಆಡ್ತಿದ್ರು ನಂದಿನಿ ಅವನನ್ನು ಹೀಗೆ ಯಾವತ್ತು ಬಿಟ್ಟು ಹೋಗಿರಲಿಲ್ಲ. ಶಾಮರಾಯರು ಕಾಗದ ಯಾಕೆ ಬರಿಯೋಕೆ ಹೋದರೋ ಏನೋ ಎಂದು ಗೊಣಗುತ್ತಾ ಸರೋಜಮ್ಮನ ಮನೆಗೆ ಧಾವಿಸಿದಳು. "ರೀ.. ಸರೋಜಮ್ಮ, ಎರಡು ದಿವಸಗಳಿಂದ ಅಲೋಕನ ಮನೆ ಬಾಗಿಲು ತೆಗೆದೇ ಇಲ್ಲ, ನಂಗೆ ಯಾಕೋ ಭಯ ಆಗ್ತಾ ಇದೆ. ಅವರು ಬೇರೆ ಮನೆಯಲ್ಲಿಲ್ಲ, ಸ್ವಲ್ಪ ಬನ್ನಿ ನೋಡೋಣ".

ಸರೋಜಮ್ಮ ಕಣ್ಣರಳಿಸಿ ಕೇಳಿ, "ಅಯ್ಯೋ! ನಡೀರಿ ಮುಂಚೆ, ನಾವೇನೋ ಮಾಡೋಣ ಅಂತ ಹೊರಟರೆ, ಇದಿನ್ನೇನೋ ಆಗ್ತಾ ಇದೆಯಲ್ಲ" ಎಂದು ಕಾಮಾಕ್ಷಮ್ಮನ ಜೊತೆ ಅಲೋಕನ ಮನೆಗೆ ಧಾವಿಸಿದಳು. ಅಲೋಕನ ದೇಹ ದುರ್ಬಲವಾಗಿತ್ತು ಕನಸು ನಿದ್ದೆ ಎಚ್ಚರಗಳಲ್ಲಿ ತೂಗಾಡುತ್ತಿತ್ತು ಮನಸು. ಯಾರೋ ಜೋರಾಗಿ ಕರೆಯುತ್ತಿದ್ದಾರೆ ಬಾಗಿಲ ಬಡಿಯುತ್ತಿದ್ದಾರೆ.., ಏಳಲಾರದೆ ಎದ್ದು ನಿಧಾನವಾಗಿ ಬಂದು ಚಿಲಕ ಸರಿಸಿದ. ತೆರೆದವನೇ ಪಕ್ಕದ ಕುರ್ಚಿಯಲ್ಲಿ ಕುಸಿದು ಕುಳಿತ. ಕತ್ತಿನ ಬಳಿ ಕೈ ತಂದು ಸರೋಜಮ್ಮ ಸ್ಪರ್ಶಿಸಿದಳು. ಕಾದ ಕೆಂಡವನ್ನು ಮುಟ್ಟಿದಂತೆ ಕೈ ಹಿಂದಕ್ಕೆ ಬಂತು. "ಅಯ್ಯೋ, ತುಂಬ ಜ್ವರ ಇದೇರಿ, ಅವನನ್ನು ಮುಂಚೆ ಎತ್ತಿ ಹಾಸಿಗೆಯ ಮೇಲೆ ಮಲಗಿಸೋಣ, ನೀವು ಯಾರ ಕೈಲಾದರೂ ಬೇಗ ಬ್ರೆಡ್ ತರಿಸಿ. ಹೊಟ್ಟೆಗೆ ತಿಂದು ಎಷ್ಟು ದಿನವಾಯಿತು, ನಾನು ಬಿಸಿ ಕಾಫಿ ಮಾಡುತ್ತೇನೆ, ನೀವು ಬೇಗ ಹೋಗಿ ಈ ಮೂಲೆ ತಿರುವಿನಲ್ಲಿ ಇದ್ದಾರಲ್ಲ ಡಾಕ್ಟರ್ ಅವರನ್ನು ಕರೆದುಕೊಂಡು ಬನ್ನಿ" ಎಂದು ಸರೋಜಮ್ಮ ಬಡಬಡಿಸಿದಳು.

ಬಿಸಿ ಕಾಫಿ ಗುಟುಕರಿಸಿದ ಅಲೋಕನಿಗೆ ಜೀವ ಬಂದಂತಾಯಿತು. ಅದೇ ಕನವರಿಕೆ.. ನಂದಿನಿ ನಂದಿನಿ. ಶಂಕರಭಟ್ಟರು ಮತ್ತು ಶಾಮರಾಯರಿಗೆ ಸುದ್ದಿ ತಲುಪಿತು. ನಂದಿನಿಗೆ ಕಾಮಾಕ್ಷಮ್ಮನವರು ಫೋನ್ ಮಾಡಿ ವಿಷಯ ತಿಳಿಸಿದರು.

ಇತ್ತ ತವರಿನಲ್ಲಿ ನಂದಿನಿ ಶೂನ್ಯವನ್ನು ದಿಟ್ಟಿಸುತ್ತಾ ನಿರಾಶೆ ಮೈವೆತ್ತಂತೆ ಕುಳಿತಿದ್ದಳು. ಕಾಮಾಕ್ಷಮ್ಮನ ಜೊತೆಗೆ ಫೋನಿನಲ್ಲಿ ಮಾತಾಡುತ್ತಿದ್ದ ಹಾಗೇ ಕುಸಿದು ಕುಳಿತಳು. ಅಲೋಕ, ಅಲೋಕ ಎಂದು ಜೋರಾಗಿ ಕೂಗಿದಳು. ತಾಯಿ ಮತ್ತು ಅಣ್ಣ ಅವಳ ಬಳಿಗೆ ಓಡಿ ಬಂದರು. ಇಬ್ಬರೂ ಗಾಬರಿಯಿಂದ ಎತ್ತಿಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿ ಗಾಳಿ ಬೀಸಿದರು. ನೀರು ಚಿಮುಕಿಸಿದರು, 'ಏನಾಯ್ತು ಏನಾಯ್ತು ನಂದಿನಿ' ಎಂದು ಅವಳ ತಾಯಿ ಚಡಪಡಿಸಿದರು. "ಅಮ್ಮ, ನನ್ನ ಬಟ್ಟೆಗಳನ್ನೆಲ್ಲ ಬೇಗ ಸಿದ್ಧಮಾಡಿ, ಅಣ್ಣ ನಾನು ಬೇಗ ಅವರ ಬಳಿಗೆ ಹೋಗಬೇಕು" ಎಂದು ಗಳಗಳನೆ ಅತ್ತಳು. ಅಣ್ಣ ಸಮಾಧಾನ ಮಾಡಿ, "ನಂದಿನಿ, ಅಳಬೇಡಮ್ಮ ಈಗಲೇ ಹೋಗೋಣ, ನಾನೇ ಕರ್ಕೊಂಡು ಹೋಗ್ತೀನಿ" ಎಂದು ತಂಗಿಯ ತಲೆ ಸವರಿದ.

ನಂದಿನಿ ಮನೆಗೆ ದಾವಿಸಿದವಳೇ ಅಲೋಕನ ಬಳಿಗೆ ಓಡಿದಳು. ಮಂಚದ ಮೇಲೆ ಅಸಹಾಯಕನಂತೆ ಮಲಗಿದ್ದ ಅಲೋಕನನ್ನು ನೋಡಿ ಅಳು ಉಕ್ಕಿ ಬಂತು. "ಅಯ್ಯೋ ಎಷ್ಟು ಬದಲಾಗಿ ಹೋಗಿದ್ದಾರೆ ನನ್ನ ಅಲೋಕನೇ... ಅಯ್ಯೋ ನಾನು ಎಷ್ಟು ಕೆಟ್ಟವಳು! ಆಲೋಕ" ಎಂದು ಮೆಲ್ಲನೆ ಕರೆದಳು. ಮಧುರವಾಗಿ, ಆತ್ಮೀಯವಾಗಿ ಅಖಂಡ ಒಲವು ಆ ಕರೆಯಲ್ಲಿ ತುಂಬಿತ್ತು. ನಾನು ಸ್ವಪ್ನ ಕಾಣುತ್ತಿದ್ದೇನೆಯೇ? ಎದುರಲ್ಲಿ ನನ್ನ ಪ್ರೀತಿಯ ಮನದನ್ನೆ.. ಅವನ ಕಣ್ಣುಗಳು ಮಿಂಚಿದವು. ಕಳೆದುಕೊಂಡಿದ್ದ ಆರೋಗ್ಯ ಒಮ್ಮೆಲೇ ಮರಳಿದಂತಾಯಿತು. ಹೊಸ ಉತ್ಸಾಹ, ಪುಳಕಗಳು ಮೈಯಲ್ಲಿ ಶಕ್ತಿ ತುಂಬಿದವು. ನಂದಿನಿ ಎಂದು ಮೇಲೆ ಏಳಲು ಹೋದ ಅವನನ್ನು ಕಂಡು ನಂದಿನಿ ಧಾವಿಸಿ, ಅಪ್ಪಿ ಹಿಡಿದು ಮೃದುವಾಗಿ ಮಲಗಿಸಿದಳು. ಎಷ್ಟೋ ವರ್ಷಗಳಿಂದ "ವಿಪ್ರಲಂಭ"ದ ಕುಲುಮೆಯಲ್ಲಿ ಬೆಂದಂತಾಗಿದ್ದ ಅಲೋಕ ನಂದಿನಿಯರು ಇನ್ನೆಂದೂ ಅಗಲದಂತೆ ಒಂದಾದರು.

ಮರುದಿನ ನಂದಿನಿಯನ್ನು ಮನಸಾರೆ ಚುಂಬಿಸಿ ಆಫೀಸಿಗೆ ಹೊರಟ ಅಲೋಕನಿಗೆ ಸೃಷ್ಟಿಯ ಸಮಸ್ತ ವಸ್ತುವೂ ಚೆಲುವಾಗಿ ಕಂಡಿತು. ಅಂಗಳದಲ್ಲಿ ಅರಳಿದ್ದ ಬಿಳಿಯ ಗುಲಾಬಿಯನ್ನು ಚುಂಬಿಸಿದ. ಹಾರುತ್ತಿದ್ದ ಹಕ್ಕಿಗಳಿಗೆ ಕೈಬೀಸಿದ. ಬೀದಿಯಲ್ಲಿ ಹೋಗುತ್ತಿದ್ದ ನಾಯಿಮರಿಯನ್ನು ಅನಾಮತ್ತಾಗಿ ಎತ್ತಿ ಮುದ್ದಿಸಿದ. ಗಿಡಮರ ಗಳೆಲ್ಲವನ್ನು ಮೃದುವಾಗಿ ಸವರಿದ. ಎಳೆಬಿಸಿಲನ್ನು ಬೀರುತ್ತಿದ್ದ ನೇಸರನ ಮೊಗಕ್ಕೆ ಕಣ್ಣು ಕೀಲಿಸಲು ಪ್ರಯತ್ನಿಸಿ ಮನಸಾರೆ ನಕ್ಕ.

ಓಹ್! ನೀವಿನ್ನು ಇಲ್ಲೇ ನಿಂತಿದ್ದೀರಾ? ನಿಮ್ಮನ್ನು ಮರೆತೇಬಿಟ್ಟಿದ್ದೆನಲ್ಲಾ... ಮಾರಾಯರೇ ನೋಡಿ, ಅಲೋಕನಂದಿನಿ ಹೇಗೆ ಒಂದಾದರು. ಈಗ ಧಾರಾಳವಾಗಿ ಹೋಗಿ ಅವರನ್ನು ಭೇಟಿ ಮಾಡಿ.

***

ಚೆಂಗನ 'ಭಯೋತ್ಪಾದನೆ'

– ಜಿ ವಿ ಅರುಣ

ಮೊನ್ನೆ ನವೆಂಬರಿನಲ್ಲಿ ಒಂದು ದಿನ, ಬೆಳಗ್ಗೆ ಮನೆಯ ಮುಂದೆ ಪೇಪರ್ ಓದುತ್ತಾ ಕುಳತಿದ್ದೆ.

"ನಂಸ್ಕಾರ ಸಾ " ಪರಿಚಿತ ಧ್ವನಿ; ತಲೆಯೆತ್ತಿ ನೋಡಿದೆ. ಚೆಂಗ ಬಹಳ ದಿನಗಳ ಅನಂತರ ಮನೆಗೆ ಬಂದಿದ್ದ.

"ಓಹೋ , ಬಾ, ಬಾ ಚೆಂಗ, ಎಷ್ಟು ದಿನ ಆಗೋಗಿತ್ತು ನಿನ್ನನ್ನು ನೋಡಿ! ನಮ್ಮನ್ನೆಲ್ಲ ಮರೆತುಬಿಟ್ಟೆಯೋ ಹೇಗೆ? ಹೇಗಿದ್ದೀ?," ನಾನು ಕೇಳದೆ.

"ಏ ಅಂಗೇನೂ ಇಲ್ಲ ಸಾ ನಾನು, ನಮ್ಮ ಎಂಡ್ರು, ಮಕ್ಳು ಎಲ್ಲಾ ಸೆಂದಾಗೇ ಅವ್ರೆ. ನಿಮ್ಮತ್ರ ಮಾತಾಡಕ್ಕೆ ಬೇಕಾದಷ್ಟು ಇಚಾರಗಳು ಇದ್ವೋ. ಆದ್ರೆ ಒಂದು ಕೇಳೋಮಾ ಅನ್ನೋ ಹೊತ್ತಿಗೆ ಮತ್ತೊಂದು ಇಚಾರ ಬಂದ್ಬಿಡೋದಾ, ಅದಕ್ಕೆ ಫೋನ ಮಾಡಕ್ಕೆ, ಬರಕ್ಕೆ ಆಗ್ನಿಲ್ಲ ಸಾ "

"ಮತ್ತೆ ಆ ನಿನ್ನ ಸಮಸ್ಯೆಗಳಗೆ ಪರಿಹಾರವನ್ನು ಹೇಗೆ ಕಂಡುಕೊಂಡೆ ಚೆಂಗ?" ಕೇಳದೆ. ಯಾವುದೇ ಸಮಸ್ಯೆ ಬಂದರೂ ಅದಕ್ಕೆ ಪರಿಹಾರ ಸಿಕ್ಕುವವರೆಗೆ ಅವನು ಸುಮ್ಮನೆ ಇರುವ ಅಸಾಮಿನೇ ಅಲ್ಲ. ಹಾಗಾಗಿ ನನಗೆ ಕುತೂಹಲವಾಗಿತ್ತು.

"ಅನ್ಬವ ಸಾ, ಅನ್ಬವ. ಕೆಲವಕ್ಕೆ ಎಂಡ್ರ ಅತ್ರ, ಇಲ್ಲ ಮಕ್ಕನ್ನ ಕೇಳ್ತದ್ದೆ. ನಿಮಗೆ ಗೊತ್ತಲ್ಲ, ರವಷ್ಟು ಬೀಡಿ ಮ್ಯಾಕೆ ನಂಗೆ ಪಿರೀತಿ ಅಂತ. ನಾನು ಬೀಡಿ ತಗೊಳ್ಳೋ ಗೂಡಂಗಡಿಯವನು ದಕ್ಷಿಣ ಕನ್ನಡದವ್ನು. ಅವ್ನು ಅದೇನು ಚೂಟಿ ಅಂತೀನಿ. ಏನೇ ಸಮಸ್ಯೆ ಕೇಳದ್ರು, ಥಟ್ಟಂತ ಪರಿಹಾರ ಯೋಳ್ತಾನೆ "

"ಯಕ್ಷಗಾನ ತಾಳಮದ್ದಳೆ ಪ್ರಭಾವ ಇರುತ್ತಪ್ಪ ಅವರ ಮೇಲೆ."

"ನಿಮಗೆ ಹೆಂಗೆ ಗೊತ್ತಾಯ್ತು ಸಾ! ನಿಜ ಸಾ, ಯಕ್ಸಗಾನ, ತಾಳ ಅಂತ ಓಯ್ತಾನೇ ಇರ್ತಾನೆ ಸಾ, ಅವನ್ನ ಹೆಂಗಿದ್ರು ದಿನಕ್ಕೆ ಎರಡು ಕಿತ ನೋಡ್ತೀನಲ್ಲ. ಅದಕ್ಕೆ ಎಲ್ಲಾ ಡೌಟನ್ನು ಅವ್ನ್ ಅತ್ರನೇ ಕೇಳಬಿಡ್ತೀನಿ. ಅದ್ಕೆ ನಿಮಗೆ ತೊಂದರೆ ಕೊಡ್ತಾ ಇಲ್ಲ ಸಾ "

"ಒಳ್ಳೇದಪ್ಪ ಚೆಂಗ, ಒಟ್ಟಿನಲ್ಲಿ ನಿನ್ನ ಸಂದೇಹಗಳು ಪರಿಹಾರ ಆಗ್ತಿದ್ರೆ ಅದೇ ನನಗೆ ಸಂತೋಷ".

"ಆದ್ರೆ ನಿಮ್ಮ ಮೇಲೆ ಗೌರ್ವ ಕಮ್ಮಿ ಆಗಿಲ್ಲ ಸಾ, ನಮ್ಮ ಗುರುಗೋಳು ಹಿಂಗೇ ಏಳೋರು ಅಂತ ಅವ್ನ್ಗೆ ಏಳ್ತಾನೆ ಇತೀರ್ನಿ ಸಾ "

“ಸಂತೋಷ ಆಯ್ತು ಚೆಂಗ. ಈಗೇನು ಇದ್ದಕ್ಕಿದ್ದ ಹಾಗೆ ನನ್ನ ನೆನೆಸಿಕೊಂಡು ಬಂದದ್ದು” ಚೆಂಗನನ್ನು ಜಾಡಿಗೆ ತರಲು ಕೇಳಿದೆ.

“ಅದೇ ಸಾ , ಭಾರಿ ಡೌಟು. ಅದಕ್ಕೆ ನಿಮ್ಮ ತಾವ ಬಂದೆ.”

“ಏನಪ್ಪ ಅಂಥ ಭಾರಿ ವಿಚಾರ?”

“ಹೂಂ ಸಾ , ಬಯೋತ್ಪಾಧಕರ ವಿಚಾರ ಸಾ ”

“ಓಹೋ ಅವರ ವಿಚಾರ ಕೇಳಿದ್ರೆ ನನಗೆ ಮೈಯೆಲ್ಲಾ ಉರಿಯುತ್ತೆ ಚೆಂಗಾ ”

“ಅಲ್ಲವ್ರಾ ಸಾ, ನಂಗೂ ಅಷ್ಟೇಯಾ, ಈಗ ನೀವೇ ಯೋಳಿ ಸಾ, ಈ ಬಯೋತ್ಪಾಧಕರ ಒಟ್ಟೆ ಸೀಳಬೇಕಲ್ವಾ ಸಾ ”

“ಹೊಟ್ಟೆ ಸೀಳೋದೇನು, ಅವರ ವಂಶನೇ ನಿರ್ವಂಶ ಮಾಡಬೇಕು; ಈಗ ಹುಟ್ಟಿಲ್ಲ, ಮುಂದೆ ಹುಟ್ಟೋದು ಇಲ್ಲ ಅನ್ನಿಸಬೇಕು”. ಆವೇಶದಿಂದ ಹೇಳಿದೆ.

“ಸಾ , ನಾನು ಯೋಳಿದ್ದು ಅದಲ್ಲ ಸಾ ”

“ಮತ್ತೆ ಇನ್ನೇನಪ್ಪ?” ಕೇಳಿದೆ.

“ಈ ಬಯೋತ್ಪಾಧಕ ಪದದಲ್ಲಿ ‘ಧ’ ಇದ್ಯಲ್ಲ ಸಾ, ಅದ್ರ ಒಟ್ಟೆ ಸೀಳಬೇಕೊ ಇಲ್ಲವೋ. ಅದು ವಸಿ ಯೋಳಿ ಸಾ.” ಚೆಂಗನ ಈ ಕನ್ನಡ ಪ್ರೀತಿಯಿಂದ ನನ್ನ ಆವೇಶವೆಲ್ಲ ಇಳಿದು ಹೋಯಿತು.

“ಇದನ್ನ ನಿನ್ನ ಗೂಡಂಗಡಿ ಸ್ನೇಹಿತರು ಸ್ಪಷ್ಟವಾಗಿ ತಿಳಿಸ್ತಾ ಇದ್ರು. ಅವ್ರನ್ನ ಕೇಳಲಿಲ್ವ?”

“ಕೇಳ್ದೆ, ಅವ್ನು ನಕ್ಕುಬಿಟ್ಟ. ಆಮ್ಯಾಕೆ ಅಲ್ಪಪ್ರಾಣಿ ಅಂತ ನನಗೆ ಹೆಸರು ಇಟ್ಟು ಕರ್ದ.”

ನನಗೆ ಬಂದ ನಗುವನ್ನು ತಡೆದುಕೊಂಡು, “ಅವರು ಸರಿಯಾಗೇ ಹೇಳಿದ್ದಾರಲ್ಲಪ್ಪ, ನಿನಗೆ ಅಲ್ಪಪ್ರಾಣಿ ಎಂದಿಲ್ಲ. ಅವರು ಭಯೋತ್ಪಾದಕದಲ್ಲಿ ‘ದ’ ಅಲ್ಪಪ್ರಾಣ, ನೀನು ಹೇಳಿದಂತೆ ಹೊಟ್ಟೆ ಸೀಳಬೇಕಾಗಿಲ್ಲ ಅಂತ ಅದರರ್ಥ” ಅಂದೆ.

“ಓ ಸರಿ ಅಂಗಾದ್ರೆ. ಆದ್ರೂ ಒಟ್ಟೆ ಸೀಳಿದರೇನೇ ಆ ಪದಕ್ಕೆ, ಅವರು ಮಾಡೋ ಕೇಡಿನ ಕೆಲ್ಸ ತಿಳಿಸೋ ಒಂದು ಸಕ್ತಿ ಬರುತ್ತೆ ಸಾ ”

"ಅದಿರ್ಲ, ಅಲ್ಪಪ್ರಾಣ ಮಹಾಪ್ರಾಣಗಳ ಬದಲು ಹೊಟ್ಟೆ ಸೀಳೋದು ಅಂತ ಯಾರು ನಿನಗೆ ಹೇಳಕೊಟ್ಟಿದ್ದು?"

"ನಮ್ಮ ಮಾಧ್ಯಮಿಕ ಸಾಲೆ ಕನ್ನಡ ಮೇಷ್ಟ್ರು ಸಾ. ಆ ಪ್ರಾಣ ಗೀಣ ಅಂದ್ರೆ ನಮ್ ತಲೆಗೆ ಹೆಂಗೆ ಹೋಯ್ತದೆ ನೀವೇ ಯೋಳಿ. ಅದ್ಕೆ ನಮ್ಗೆ ಹೊಟ್ಟೆ ಸೀಳೋದು ಅಂತ ಅರ್ತ ಆಗೋ ಹಂಗೆ ಯೋಳಕೊಟ್ಟಿದ್ರು. ಬಾಳ ಒಳ್ಳೆ ಮೇಷ್ಟ್ರು ಸಾ."

ಅವನು ಹೇಳಿದ್ದು ಒಂದು ರೀತಿ ಸರಿಯಾಗಿದೆ ಅನಿಸಿತು.

"ಅವರು ಇನ್ನೇನೇನು ಹೇಳಕೊಟ್ಟಿದ್ದರಪ್ಪ?" ಕುತೂಹಲದಿಂದ ಕೇಳಿದೆ.

"ಒಂದು ನಂಗೆ ಇನ್ನೂ ಗೆಪ್ತಿಲೈತೆ ಸಾ , ನಾನು 'ಕ' ಅಕ್ಷರ ಬರೀಬೇಕಾದ್ರೆ ಮೇಲಿನ ಸೊನ್ನೆ, ಕೆಳಗಿನ ಸೊನ್ನೆ ಎಲ್ಡನ್ನು ಒಂದೇ ಸೈಜ್ ಬರಿತಿದ್ದೆ. ಅವರು 'ಚೆಂಗಾ, 'ಕ' ಬರೀಬೇಕಾದ್ರೆ ಹಂಡೆ ಮೇಲೆ ಹಂಡೆ ಕೂರಿಸಬೇಡಪ್ಪ. ಹಂಡೆ ಮೇಲೆ ಚೊಂಬು ಕೂರಿಸು' ಅಂತ ಯೋಳಿದ್ರು ಸಾ " ಅಂದ.

ಆ ಅಧ್ಯಾಪಕರ ಈ ನೂತನ ಸೃಜನಶೀಲ ಪಾಠಕ್ರಮದಿಂದ ಅವರ ಮೇಲೆ ನನಗೆ ಗೌರವ ಮೂಡಿತು. ಮನದಲ್ಲೇ ಅವರಿಗೆ ವಂದಿಸಿದೆ. ಈ ರೀತಿ ಇನ್ನೂ ಇರಬಹುದಾದ ಹೊಸ ಪಾಠದ ಮಾದರಿಗಳನ್ನು ತಿಳಿಯಬೇಕು ಅನ್ನಿಸಿತು. ಅಂಥವು ನಿಮಗೆ ಗೊತ್ತಿದ್ದರೆ ದಯವಿಟ್ಟು ನನಗೆ ತಿಳಿಸಿ.

***

ಆಂಗ್ಲಭಾಷೆ ಹಾಗೂ ಶಿಕ್ಷಣ ಮಾಧ್ಯಮ

-ಗಣಪತಿ ಹೆಗಡೆ, ಮೂರೂರು

ಮಾತೃಭಾಷೆ ಎನ್ನುವದು ಶಿಕ್ಷಣ ಮಾಧ್ಯಮವಾಗಿದ್ದರೆ ಶಿಕ್ಷಣ ಕಲಿಯುವಿಕೆಗೆ ಅನುಕೂಲ ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯವಿರುವದು ಸಾಧ್ಯವೇ ಇಲ್ಲ. ಮಗು ಹುಟ್ಟಿನಿಂದಲೆ ಮನೆಯ ಪರಿಸರದಲ್ಲಿಯೇ ಬೆಳೆಯುತ್ತ ಬಾಹ್ಯ ಪ್ರಪಂಚದ ಸಂಬಂಧವಿಲ್ಲದೇ ಇದ್ದಲ್ಲಿ, ಮತ್ತೂ ಮನೆಯವರು ಹಾಗೂ ಅಕ್ಕಪಕ್ಕದವರು ಮಾತೃಭಾಷೆಯನ್ನು ಬಿಟ್ಟು ಬೇರೆ ಭಾಷೆಗಳನ್ನು ಮಾತನಾಡದೇ ಇದ್ದಲ್ಲಿ, ಮಗುವಿನ ಬೆಳವಣಿಗೆಯ ಜೊತೆ ಸಹಜ ಕಲಿಕೆಯೂ ಮಾತೃಭಾಷಾ ಮೂಲಕವೇ ಇರುತ್ತದೆ.

ಅಕ್ಷರಗಳು, ಶಬ್ದಗಳು, ಶಬ್ದಾರ್ಥಗಳು, ವಾಕ್ಯ ಸಂಯೋಜನೆ ಇವುಗಳ ಜೊತೆ ವ್ಯಾವಹಾರಿಕ ಗಣಿತ, ತಕ್ಕಮಟ್ಟಿಗಿನ ಪುರಾಣೇತಿಹಾಸ ಇವುಗಳನ್ನೂ ಮಗು ಈ ಹಂತದಲ್ಲಿಯೇ ಕೇವಲ ಶ್ರವಣಗ್ರಹಿಕೆಯಿಂದಲೇ ಕಲಿಯುತ್ತದೆ. ಅದಕ್ಕಾಗಿಯೇ ಮನೆಯೆ ಮೊದಲ ಪಾಠಶಾಲೆ ಅಂತ ಹೇಳುವದು. ಅಕ್ಕಪಕ್ಕದ ಪರಿಸರದ ಭಾಷೆಗಳೂ ಮಗುವಿನ ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ. ಹೀಗೆ ಮಗು ಬೆಳೆಯುತ್ತಲೆ ಕಲಿಯುತ್ತಾ ಹೋಗುತ್ತದೆ.

ಇಂತಹ ಶಿಕ್ಷಣಕ್ಕೆ ಭಾಷಾ ಮಾಧ್ಯಮ ಯಾವುದು ಅಂತ ಹೇಳುವ ಅವಶ್ಯಕತೆಯೇ ಇರುವದಿಲ್ಲ. ಮಾತೃಭಾಷೆಯೇ ಮಾಧ್ಯಮ. ಭಾಷಾ ಮಾಧ್ಯಮ ಯಾವುದಾಗಿರಬೇಕು ಎನ್ನುವದು ಶಾಲೆಗೆ ಹೋಗಿ ಕಲಿಯಲು ಪ್ರಾರಂಭಿಸಿದ ಮೇಲೆಯೇ ಗುತ್ತಾಗಬೇಕಲ್ಲವೇ?

ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಶಿಕ್ಷಣವು ಮಾತೃಭಾಷೆಯಲ್ಲಿಯೇ ಆಗಬೇಕು ಎನ್ನುವದು ಬಹುಪಾಲು ಭಾಷಾತಜ್ಞರ ಅಭಿಪ್ರಾಯ. ಇದು ಸರಿ ಅಂತಾದರೂ ಸಾಧ್ಯವೇ ಎನ್ನುವದು ಪ್ರಶ್ನೆ.

ಜಗತ್ತನ್ನು ಬಿಡಿ, ಕರ್ನಾಟಕದಲ್ಲಿಯೇ 72 ಭಾಷೆಗಳಿವೆ ಎನ್ನುತ್ತಾರೆ. ಸುಮಾರು 50 ಭಾಷೆಗಳು ಬುಡಕಟ್ಟು ಜನಾಂಗಕ್ಕೆ ಸೇರಿರುವದು. ಕೇವಲ ಸಾವಿರಾರು ಜನರ ಗುಂಪಿಗೂ ಒಂದು ಜನರಾಡುವ ಭಾಷೆ ಇದೆ ಎನ್ನುತ್ತಾರೆ ಭಾಷಾತಜ್ಞರು. ಬದಲಾದ ಪರಿಸರದ ಕಾರಣಕ್ಕಾಗಿ ಜನರಿಗೆ ಅನ್ಯಭಾಷಿಕರ ಜೊತೆ ಸತತ ಸಂಪರ್ಕ ಅನಿವಾರ್ಯ. ಭಾಷೆ ಭಾಷೆಗಳ ಸಂಪರ್ಕ ಸಂವಹನದ ಕಾರಣದಿಂದ ಬಲವಾದ ಭಾಷೆ ಅಥವಾ ಬಲಯುತರ ಭಾಷೆ ಮೇಲುಗೈ ಸಂಪಾದಿಸುತ್ತದೆ. ಈ ಕಾರಣಕ್ಕಾಗಿಯೇ ಎಷ್ಟೋ ಭಾಷೆಗಳು ಪೂರ್ಣಾವಸಾನವಾಗಿವೆ ಅಥವಾ ಅಳಿವಿನ ಹಂತದಲ್ಲಿವೆ.

ಈ ಹಿಂದೆ ಎಷ್ಟೋ ಜನರು ಶಾಲೆಗೇ ಹೋಗದೆ ಅಥವಾ ಪ್ರಾಥಮಿಕ ಹಂತದ ಕೆಳಗಿನ ತರಗತಿಗಳಿಗೆ ಹೋಗಿ ತಮ್ಮ ಶಿಕ್ಷಣವನ್ನು ನಿಲ್ಲಿಸಿಬಿಡುತ್ತಿದ್ದರು. ತಮ್ಮ ದೈನಂದಿಕ ಚಟುವಟಿಕೆಗಳಿಗೆ ಅವರಿಗೆ ಸಿಕ್ಕಿದ್ದ ಶಿಕ್ಷಣ ಸಾಕಾಗುತ್ತಿತ್ತು. ಬ್ರಿಟೀಷರು ಬಂದ ಮೇಲಂತೂ 'ಶಾಲಾ ಶಿಕ್ಷಣ' ಎನ್ನುವದು ನೌಕರಿಗೆ ಒಂದು ರಹದಾರಿ ಎನ್ನುವ ಹಾಗಿತ್ತು. ಶಿಕ್ಷಕ, ವಕೀಲ, ವೈದ್ಯರಂತಹ ಖಾಸಗಿ ನೌಕರಿಯ ಜೊತೆಗೆ ಉಳಿದ ಸರಕಾರೀ ನೌಕರಿಗೆ (ಬ್ರಿಟೀಷ್ ಹಾಗೂ ರಾಜಸತ್ತೆ ಕೂಡಿ) ಶಾಲಾ ಶಿಕ್ಷಣದ ಅನಿವಾರ್ಯತೆ ಒಡಮೂಡಿತ್ತು. ಬಹಳಷ್ಟು ಜನರು

ಶಾಲಾ ಶಿಕ್ಷಣ ಇಲ್ಲದೇ ಸ್ವಪ್ರಯತ್ನದಿಂದ ವಿದ್ವಾಂಸರಾಗುತ್ತಿದ್ದರು. ಇದು ವಿಶೇಷವಾಗಿ ನಾಟಕ, ಯಕ್ಷಗಾನ, ಸಂಗೀತ ಮೊದಲಾದ ವಿಭಾಗಗಳಲ್ಲಿ ಕಂಡುಬರುತ್ತದೆ.

ಈಗಂತೂ ಕನ್ನಡ ಕರ್ನಾಟಕದ ಸ್ಥಳೀಯ ಭಾಷೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಉದಾಹರಣೆ ತೆಗೆದುಕೊಳ್ಳುವದಾದರೆ, 1956ರ ಪೂರ್ವದಲ್ಲಿ ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತದ ಭಾಗವಾಗಿಯೂ, ಉತ್ತರ ಕನ್ನಡವು ಮುಂಬಯಿ ಪ್ರಾಂತದ ಭಾಗವಾಗಿಯೂ ಇತ್ತು. ಅಲ್ಲಿ ಬಹುಪಾಲು ಆಡಳಿತಗಾರರು ತಮಿಳಿಗರು ಹಾಗೂ ಮರಾಠಿಗರು ಇದ್ದರೂ ಶಿಕ್ಷಣ ಮಾಧ್ಯಮದಲ್ಲಿ ಕನ್ನಡದ ಹೊರತಾದ ಭಾಷೆ ಕಂಡುಬರಲಿಲ್ಲ. ಬಹುಶಃ ಬೇರೆ ಸ್ಥಳಗಳಲ್ಲೂ ಇದೇ ಪರಿಸ್ಥಿತಿ ಇದ್ದಿರಬಹುದು. ನೌಕರಿಗಾಗಿ ಅಥವಾ ಉಳಿದ ಕೆಲಸಗಳನ್ನು ಹುಡುಕಿಕೊಂಡು ಹೊರ ರಾಜ್ಯಗಳಿಗೆ ಹೋಗುವವರ ಸಂಖ್ಯೆ ತೀರಾ ವಿರಳವಿದ್ದಿತ್ತು. ತೀರಾ ಆಸಕ್ತಿ ಅಥವಾ ಅನಿವಾರ್ಯತೆ ಇದ್ದವರು ಮಾತ್ರ ಹೋಗುತ್ತಿದ್ದರು. ಅವರಿಗೆ ಕನ್ನಡ ಮಾಧ್ಯಮ ಎನ್ನುವದು ಜೀವನ ನಿರ್ವಹಣೆಗೆ ಒಂದು ಸಮಸ್ಯೆಯೇ ಆಗಿರಲಿಲ್ಲ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ವಿವಿಧ ಭಾಷೆಗಳನ್ನಾಡುವ ಜನರ ಪರಸ್ಪರ ಸಂಪರ್ಕ ಹಾಗೂ ರಾಷ್ಟ್ರದ ಒಕ್ಕೂಟದ ಕಾರಣಕ್ಕಾಗಿ ಇಂಗ್ಲೀಷ್ ಭಾಷೆ ಒಂದು ವ್ಯಾವಹಾರಿಕ ಅನಿವಾರ್ಯತೆ ಎನ್ನುವ ಹಾಗೆ ಆಯಿತು. (ಮೊಗಲರ ಆಕ್ರಮಣಕ್ಕಿಂತಲೂ ಮೊದಲು ವ್ಯಾವಹಾರಿಕ ಸಂಪರ್ಕ ಭಾಷೆ ಸಂಸ್ಕೃತವಾಗಿದ್ದಿದ್ದನ್ನು ಕಾಣಬಹುದು. ಬೇರೆ ಬೇರೆ ಕಾರಣಗಳಿಂದ ಸಂಸ್ಕೃತ ಸ್ವತಂತ್ರ ಭಾರತದ ಸಂಪರ್ಕ ಭಾಷೆಯಾಗಲಿಲ್ಲ). ಭಾರತೀಯ ಭಾಷೆಗಳಲ್ಲಿ ಹಿಂದಿ ಬಹುಪಾಲು ಜನರ ಮಾತೃಭಾಷೆಯಾಗಿತ್ತು ಹಾಗೂ ಕೆಲವು ಭಾಷಿಕರಿಗೆ ಹಿಂದಿ ಭಾಷೆ ಅರ್ಥ ಮಾಡಿಕೊಳ್ಳಲು ಸುಲಭವಾಗಿತ್ತು ಎನ್ನುವ ಕಾರಣಕ್ಕಾಗಿ ಸ್ವಾತಂತ್ರ್ಯ ಬಂದ ಮೊದಲಲ್ಲಿ ಇಂಗ್ಲೀಷು ಹಾಗೂ ಹಿಂದಿ ರಾಷ್ಟ್ರವ್ಯಾಪಿ ಅಧಿಕೃತ ಭಾಷೆಯ ಸ್ವರೂಪವನ್ನು ಪಡೆದುಕೊಂಡಿದ್ದವು.

ಕೆಲಸಗಳಿಗಾಗಿ ಅದರಲ್ಲೂ ವಿಶೇಷವಾಗಿ ನೌಕರಿಯ ಕಾರಣಕ್ಕಾಗಿ ಶಿಕ್ಷಣ ಅದರಲ್ಲಿಯೂ ಪದವಿ ಉದ್ಧೇಶಿತ ಶಿಕ್ಷಣ ಮಹತ್ವವನ್ನು ಪಡೆದುಕೊಂಡಿತು. ಸಂಪರ್ಕ ಭಾಷೆಯಾದ ಇಂಗ್ಲೀಷ್ ಶಿಕ್ಷಣದಲ್ಲಿ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಇಂಗ್ಲೀಷ್ ಭದ್ರವಾಗಿ ಶಿಕ್ಷಣ ಕ್ಷೇತ್ರವನ್ನು ಆವರಿಸಿಕೊಂಡಿತು. ಭಾಷೆಗಳ ಹೊರತಾಗಿ ಉಳಿದ ವಿಷಯಗಳು ಅದರಲ್ಲೂ ವಿಶೇಷವಾಗಿ ವಿಜ್ಞಾನ ವಿಷಯಗಳನ್ನು ಕೇವಲ ಇಂಗ್ಲೀಷ್ ಭಾಷೆಯಲ್ಲಿ ಕಲಿಯಬೇಕಿತ್ತು. ಕನ್ನಡ ಮಾಧ್ಯಮದಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿದವರೂ ಸಹ ಕೆಲವೇ ಮಂದಿಗೆ ಇಂಗ್ಲೀಷ್ ಮಾಧ್ಯಮ ಸುಲಭ ಸಾಧ್ಯವಾಯಿತು. ಪದವಿ ಕಾಲೇಜುಗಳಲ್ಲಿ ಕಲಿಯುವಾಗ ಇಂಗ್ಲೀಷ್ ತಿಳಿಯದ ವಿದ್ಯಾರ್ಥಿಗಳು ಕೀಳರಿಮೆ ಹೊಂದಿದ್ದೂ ಸುಳ್ಳಲ್ಲ.

ಬಹುರಾಷ್ಟ್ರೀಯ ಕಂಪನಿಗಳು ಭಾರತವನ್ನು ಪ್ರವೇಶಿಸಿದ ಮೇಲೆ ಖಾಸಗೀ ಸಂಸ್ಥೆಗಳಲ್ಲಿ ನೌಕರಿಯ ಅವಕಾಶ ಇನ್ನೂ ಹೆಚ್ಚಾಯಿತು. ಇಂತಲ್ಲಿ ಇಂಗ್ಲೀಷ್ ಒಂದು ಅನಿವಾರ್ಯ ಎನ್ನುವಂತಾಯಿತು. ಇಂಗ್ಲೀಷ್ ಭಾಷೆ ಕಬ್ಬಿಣದ ಕಡಲೆಯೆಂದೂ, ಇದನ್ನು ಕಲಿತರೆ ಮುಂದಿನ ಭವಿಷ್ಯಕ್ಕೆ ಅನುಕೂಲವಾಗುವದೆಂದೂ, ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಅಭಿಪ್ರಾಯ ಮೂಡತೊಡಗಿದವು. 'ಇಂಗ್ಲೀಷ್ ಸ್ಪೀಕನ್ ಕೋರ್ಸ್' ಗಳಂತಹ ವಿಶೇಷ ತರಗತಿಗಳು ನಾಯಿಕೊಡೆಗಳಂತೆ ಎತ್ತತೊಡಗಿದವು.

ಭಾಷೆಯಮಟ್ಟಿಗೆ ಅತೀ ಅಭಿಮಾನ ಉಳ್ಳವರು ಎಂದು ಹೇಳಿಸಿಕೊಳ್ಳುವ ತಮಿಳರು ಹಾಗೂ ಬಂಗಾಲಿಗಳು ಸಹ ಇಂಗ್ಲೀಷನ್ನು ವಿರೋಧಿಸಲಿಲ್ಲ. ಇಷ್ಟೇ ಅಲ್ಲ ಇಂಗ್ಲೀಷಿನಲ್ಲಿಯ ಹೆಚ್ಚಿನ ಅನುಭವದ ಕಾರಣಕ್ಕಾಗಿ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಕನ್ನಡವೂ ಸೇರಿದಂತೆ ಬೇರೆ ಭಾಷಿಗರಿಗಿಂತ ಒಂದು ಹೆಜ್ಜೆ ಮುಂದುವರಿದಿದ್ದರು. (ಹಿಂದಿಯ ವಿಷಯ ಬೇರೆ).

ಇಂತಹ ಸಂದರ್ಭದಲ್ಲಿಯೇ ಇಂಗ್ಲೀಷ್ ಮಾಧ್ಯಮದ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಉನ್ನತ ಭವಿಷ್ಯಕ್ಕಾಗಿ ಅನಿವಾರ್ಯ ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು. ಕನ್ನಡದ ಮೇಲಿನ ಅಭಿಮಾನಕ್ಕಿಂತ ಮಕ್ಕಳ ಭವಿಷ್ಯವೇ ಹೆಚ್ಚಿನದು ಅಂತ ಜನರು ಅಭಿಪ್ರಾಯಪಡತೊಡಗಿದರು. ಶಿಕ್ಷಣ ಅಂದರೆ ಕೇವಲ ನೌಕರಿಯನ್ನು ಉತ್ಪಾದಿಸುವ ಕಾರ್ಖಾನೆ ಅಂತ ತಿಳಿದು ಉಳಿದ ಯಾವ ವಿಷಯಗಳಿಗೂ ಮಹತ್ವಕೊಡದೆ ಮಕ್ಕಳು ಇಂಗ್ಲೀಷ್ ಮಾಧ್ಯಮದ ಶಾಲೆಗಳತ್ತ ಮುಖ ಮಾಡಿದರು. ಸರಕಾರಕ್ಕೂ ಈ ವಿಚಾರವನ್ನು ಪರಿಣಾಮಕಾರಿಯಾಗಿ ವಿರೋಧಿಸಲು ಸಾಧ್ಯವಾಗಲಿಲ್ಲ.

ಈ ಪರಿಸ್ಥಿತಿಯ ದುರ್ಲಾಭ ಪಡೆದ ಕೆಲವರು ಮೂಲಭೂತ ಸೌಕರ್ಯದ ಹೊರತಾಗಿಯೂ ಇಂಗ್ಲೀಷ್ ಮಾಧ್ಯಮದ ಖಾಸಗಿ ಶಾಲೆಗಳನ್ನು ಹುಟ್ಟುಹಾಕಲು ಪ್ರಾರಂಭಿಸಿದರು. ಜನರೂ ಬೇಕಾಗಿಯೋ ಬೇಡವಾಗಿಯೋ ಸಮೂಹ ಸನ್ನಿಗೆ ಒಳಪಟ್ಟವರ ಹಾಗೆ ಇಂತಹ ಶಾಲೆಗಳಿಗೆ ಮಕ್ಕಳನ್ನು ಕಳಿಸತೊಡಗಿದರು. ಜನರ ಬೇಡಿಕೆಗಳು ಹೆಚ್ಚಾದ ಹಾಗೆ ಖಾಸಗಿ ಶಾಲೆಯ ಆಡಳಿತ ಮಂಡಳಿಗಳು ಹೆಚ್ಚು ಹೆಚ್ಚು ಶುಲ್ಕಗಳನ್ನು ಆಕರಿಸತೊಡಗಿದವು. ಪಾಲಕರೂ ಸಹ ತಮ್ಮಲ್ಲಿ ಗೊಣಗುತ್ತಲೇ ಸಾಲ-ಸೋಲಮಾಡಿಯಾದರೂ ಹೆಚ್ಚಿನ ಶುಲ್ಕ ಪಾವತಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ.

ಸರಕಾರವೂ ಇಂತಹ ಪರಿಸ್ಥಿತಿಗಳನ್ನು ಅರ್ಥಮಾಡಿಕೊಂಡ ಹಾಗಿದೆ. ಸರಕಾರೀ ಶಾಲೆಗಳಲ್ಲಿಯೂ ಇಂಗ್ಲೀಷ್ ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಆದರೂ ಖಾಸಗಿಯವರೊಡನೆ ಸ್ಪರ್ಧೆಮಾಡಿ ಜಯಿಸಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದಲೇ ಈಗ ಶಿಕ್ಷಣ ಎನ್ನುವದು ಖಾಸಗಿಯವರ ಕಪಿಮುಷ್ಟಿಯಲ್ಲಿ ನಲುಗುತ್ತಿದೆ.

ಇಂಗ್ಲೀಷ್ ಮಾಧ್ಯಮದ ಶಿಕ್ಷಣವಂತೂ ಈಗ ಅನಿವಾರ್ಯವಾಗಿಬಿಟ್ಟಿದೆ. ಇನ್ನಾದರೂ ಸರಕಾರ ಎಚ್ಚೆತ್ತುಕೊಂಡು ಖಾಸಗಿಯವರಿಗೆ ಪರ್ಯಾಯವಾಗಿ ಇಂಗ್ಲೀಷ್ ಮಾಧ್ಯಮದಲ್ಲಿ ಜನಸಾಮಾನ್ಯರ ಕೈಗೆಟಕುವ ರೀತಿಯಲ್ಲಿ ಶಿಕ್ಷಣ ಕೊಡಲು ಸಾಧ್ಯವಾದೀತೇ ಅಥವಾ ಬೆಳೆಯ ಬೇಲಿಯ ಕೀಲಿಕೈ ಕಳ್ಳರ ಕೈಯಲ್ಲಿದ್ದ ಹಾಗಾದೀತೆ?

***

ಬಾಲ್ಯದ ನೆನಪು

ಮಾವಿನ ಮರದ ಪ್ರಾರಬ್ಧ

–ಶೀಲಾ ಭಂಡಾರ್ಕರ್

ಗೇಟ್ ತೆರೆದ ಸದ್ದಾಯಿತೆಂದು ಹೋಗಿ ನೋಡಿದೆ, ಗಂಗಯ್ಯ ಅಂಗಳದ ಮಾವಿನ ಮರವನ್ನೇ ನೋಡುತ್ತಾ ನಿಂತಿದ್ದ. ಸೊಂಟದ ಮೇಲೆ ಎರಡೂ ಕೈಯಿಟ್ಟು ನಿಂತ ಅವನ ಭಂಗಿ ನೋಡಿದರೆ ಏನೋ ಯೋಚನೆಯಲ್ಲಿ ಬಿದ್ದ ಹಾಗಿತ್ತು.

ನಾನು ಒಳಗೆ ಹೋಗಿ ಅಪ್ಪನಿಗೆ ಗಂಗಯ್ಯ ಬಂದಿದ್ದಾನೆಂದು ತಿಳಿಸಿದೆ. ಗಂಗಯ್ಯ ಅಪ್ಪನ ಬ್ಯಾಂಕಿನಲ್ಲಿ ಪ್ಯೂನ್ ಆಗಿರುವವನು.

ಅಜ್ಜಿ ಮತ್ತು ಅಪ್ಪ ಹಿಂದಿನ ಜಗುಲಿಯಲ್ಲಿ ಕೂತು ಹಲಸಿನಹಣ್ಣು ಹೆಚ್ಚಿ ಬಿಡಿಸುತಿದ್ದರು. "ಹಿಂದೆ ಬರಲಿಕ್ಕೆ ಹೇಳು" ಅಂದರು ಅಪ್ಪ. ನಾನು ಹೋಗಿ "ಅಪ್ಪ ಹಿತ್ತಲಲ್ಲಿ ಇದ್ದಾರೆ" ಅಂದೆ. "ಹೂಂ" ಅಷ್ಟೇ ಹೇಳಿ ಇನ್ನೂ ಸ್ವಲ್ಪ ಹೊತ್ತು ಅಲ್ಲಿಯೇ ನಿಂತು ಆಮೇಲೆ ಮನೆಯ ಹಿತ್ತಲಿನ ಕಡೆ ನಡೆದ.

"ದಾನೆಯೇ.. ಮರಟ್ ಒಂಜಾಂಡಲಾ ಕುಕ್ಕು ಬುಡ್ತಿಜ್ಜಾ?" ಮರದಲ್ಲಿ ಮಾವಿನಹಣ್ಣು ಬಿಟ್ಟಿಲ್ಲವೆಂಬುದು ಅವನ ತಲೆಬಿಸಿಗೆ ಕಾರಣವಾಗಿತ್ತು.

"ಕುಕ್ಕು ಎಂತದ್ದು, ನೆಟ್ಟು ಐದು ವರ್ಷ ಆಗ್ಲಿಕ್ಕೆ ಬಂತು, ಒಂದು ಹೂ ಕೂಡ ಬಿಡ್ಲಿಲ್ಲ" ಎಂದು ಅಜ್ಜಿ ಹೇಳಿದರು.

"ಯ್ಯೆಬ್ಬೆ.. ಮತ್ತೆ ಎಂತಕ್ಕೆ ಅದನ್ನು ಸಾಕ್ತಾ ಇದ್ದೀರಿ, ದಂಡಕ್ಕೆ." ಗಂಗಯ್ಯನ ಮಾತಿಗೆ ಅಪ್ಪ ನಗುತ್ತಾ, "ಸಾಕುವುದೆಂದ್ರೆ ಅದಕ್ಕೇನು ಹೊಟ್ಟೆಗೆ ಹಾಕಬೇಕಾ, ಬಟ್ಟೆ ಕೊಡಿಸ್ಬೇಕಾ, ಶಾಲೆಗೆ ಕಳಿಸ್ಲಿಕ್ಕುಂಟಾ, ಎಂತ ಮಾತಾಡ್ತಿ ಗಂಗಯ್ಯಾ?!"

ನನಗೂ ನಗು ತಡೆಯಲಾಗಲಿಲ್ಲ.

"ಇರುವ ಇಷ್ಟು ಚಿಕ್ಕ ಜಾಗದಲ್ಲಿ ಅರ್ಧಕ್ಕರ್ಧ ಅದೇ ಹರಡಿಕೊಂಡಿದೆ. ಬಿದ್ದಿರ್ಲಿ ಅನ್ಲಿಕ್ಕೆ ನಿಮ್ದೇನು ಎಕರೆಗಟ್ಟಲೆ ತೋಟವಾ? ಹಾಗೆಲ್ಲಾ ಸುಮ್ನೆ ಭೂಮಿ ವೇಸ್ಟ್ ಮಾಡ್ಬಾರ್ದು."

ಪರಿಸರ ಸಂರಕ್ಷಣೆಯ ಪಾಠ ಶುರು ಮಾಡಿದ ಗಂಗಯ್ಯನನ್ನು ಮಧ್ಯದಲ್ಲಿಯೇ ತಡೆದು ಅಜ್ಜಿ ಕೇಳಿದರು. "ವೇಸ್ಟ್ ಹೇಗೆ? ಅದರ ನೆರಳಲ್ಲಿ ಕೂತು ಮಕ್ಳು ಆಡುವುದಿಲ್ವಾ? ಅಂಗಳ ತುಂಬಾ ಹಸಿರು ಹಸಿರಾಗಿ ಇಲ್ವಾ? ಇರಲಿ ಬಿಡು. ಹಣ್ಣು ಬಿಡುವ ಕಾಲ ಬಂದ್ರೆ ಬಿಟ್ಟೀತು. ನಿಂಗೇನಾದ್ರೂ ಔಷಧಿ ಗೊತ್ತಿದ್ರೆ ಹೇಳು ಮಾರಾಯಾ"

"ನೀವು ಒಳ್ಳೆ ಗೊಬ್ಬರ ಗಿಬ್ಬರ ಹಾಕಿ ಬೆಳೆಸಿದ್ದೀರಿ. ಬಿಡುವುದಿದ್ದರೆ ಇಷ್ಟು ವರ್ಷ ಬೇಕಿರಲಿಲ್ಲ. ಇನ್ನು ಉಳಿದಿರುವುದು ಒಂದೇ ಉಪಾಯ."

ಮರ ಕಡಿಯುವ ಅಂತಿಮ ಉಪಾಯ ಹೇಳುತಿದ್ದಾನೆಂದು ನನಗೆ ಅವನ ಮೇಲೆ ಕೋಪ ಬಂತು. ತಿಂದು ಬಿಸಾಕಿದ ಮಾವಿನ ಹಣ್ಣಿನ ಗೊರಟೊಂದು ಮೊಳಕೆಯೊಡೆದಿತ್ತೆಂದು ಅದನ್ನು ನಾವು ಒಂದು ಒಳ್ಳೆಯ ಜಾಗ ನೋಡಿ ನೆಟ್ಟು ಪಾತಿ ಮಾಡಿ ನೀರು ಹಾಕಿ ಬೆಳೆಸಿದ್ದು, ಅದು ನೋಡನೋಡುತಿದ್ದಂತೆ ಗಿಡವಿದ್ದದ್ದು ಮರವಾಗಿ ಹರಡಿತು. ಛತ್ರಿಯ ಹಾಗೆ ಮನೆಯ ಮುಂದಿನ ಅಂಗಳದ ನೆರಳಾಗಿತ್ತು.

ಅದರ ನೆರಳಲ್ಲಿ ಚಾಪೆ ಹಾಸಿ ಮಲಗಿ ಕಥೆ ಪುಸ್ತಕ ಓದುತಿದ್ದುದು, ಹಗ್ಗ ಕಟ್ಟಿ ದಿಂಬಿಟ್ಟು ಕೂತು ಸುಮ್ಮನೆ ದೂರದ ರಸ್ತೆಯಲ್ಲಿ ಹೋಗುವ ಜನರನ್ನು ನೋಡುವುದು, ಎದುರಿನ ರೈಲ್ವೆ ಹಳಿಯ ಮೇಲೆ ನಡೆದುಕೊಂಡು ಹೋಗುತ್ತಿರುವವರನ್ನು ಗಮನಿಸುವುದು ಎಲ್ಲವೂ ಇಂದಿಗೂ ನನ್ನ ನೆನಪಿನ ಮಧುರ ಕ್ಷಣಗಳು.

"ಇವನಿಗ್ಯಾಕೆ ಅಧಿಕಪ್ರಸಂಗ, ಬಂದ ಕೆಲಸ ಏನು ಅಂತ ನೋಡಿ ಹೋಗುವುದಲ್ವಾ." ಮನಸ್ಸಿನಲ್ಲೇ ಬೈದೆ.

"ಅದಕ್ಕೆ ಸಮಾ ಬಯ್ಬೇಕು. ಬಾಯಿಗೆ ಬಂದದ್ದು ಬಯ್ಬೇಕು. ನಾಚಿಕೆಯಾಗಿ ಫಲ ಬಿಡಲು ಶುರು ಮಾಡ್ತದೆ ನೋಡಿ ಬೇಕಾದ್ರೆ." ಗಂಗಯ್ಯನ ಉಪಾಯ ಕೇಳಿ ಎಲ್ಲರೂ ನಕ್ಕರು.

"ಇದೆಂತ ಉಪಾಯ ನಿನ್ನದು. ಬಯ್ಯುವುದಂದ್ರೆ ಹೇಗೆ ಬಯ್ಯುವುದು? ಇಂಚಲಾ ಒಂಜಿ ಉಂಡಾ ಮಾರಾಯಾ?" ಹೀಗೂ ಉಂಟೇ ಅನ್ನುವ ಸ್ಟೈಲಲ್ಲಿ ಅಜ್ಜ ಕೇಳಿದರು.

"ಉಂಡು ಅಮ್ಮಾ.. ನಾವು ಮಾಡಿದ್ದೇವೆ ಹಾಗೆ. ಆಮೇಲೆ ಮರದ ತುಂಬಾ ಹಣ್ಣು ಬಿಟ್ಟಿದೆ. ವರ್ಷ ವರ್ಷ."

"ಹೌದಾ! ಆದ್ರೆ ನಮಗೆ ಏನು ಬಯ್ಬೇಕು ಅಂತ ಗೊತ್ತಿಲ್ಲವಲ್ಲ. ಒಂದು ಕೆಲಸ ಮಾಡು ನೀನೇ ಬೈದು ನೋಡು. ಮನೆಯವರು ಬೈದ್ರೆ ತಾಗ್ಲಿಕ್ಕಿಲ್ಲ. ಹೊರಗಿನವರು ಬೈದ್ರೆ ಜಾಸ್ತಿ ಅವಮಾನ ಆಗಬಹುದು." ಅಪ್ಪ ಅವನ ಉಪಾಯವನ್ನು ಉಪಾಯದಿಂದಲೇ ಅವನ ತಲೆಗೆಯೇ ಅಂಟಿಸಿದರು.

ಬೆಳಗಿನ ಜಾವದಲ್ಲೇ ಬೈಬೇಕು. ಇನ್ನೂ ಕತ್ತಲೆ ಇರುವಾಗಲೇ. ಏನೇನೋ ಸಬೂಬು ಹೇಳುತಿದ್ದವನಿಗೆ ಅಮ್ಮ ಹೇಳಿದರು, “ನಾಳೆ ಆದಿತ್ಯವಾರ. ನಿಂಗೆ ಬ್ಯಾಂಕಿಲ್ಲ ಅಲ್ವಾ? ಪುಲ್ಲೆ ಕಾಂಡೆಯೇ ಬಾ. ಆಮೇಲೆ ಇಲ್ಲಿಯೇ ಕಾಫಿ ತಿಂಡಿ ಮಾಡಿ ಹೋದರಾಯ್ತು” ಎಂದರು.

ತಿಂಡಿ ಅಂದ ಕೂಡಲೇ ಬಾಯಲ್ಲಿ ನೀರೇ ಸುರಿಯಿತು ಗಂಗಯ್ಯನಿಗೆ. “ಎಂತ ತಿಂಡಿ ಮಾಡ್ತೀರಿ ನಾಳೆ?

ನಿಂಗೇನು ಬೇಕು ಹೇಳು ಅದೇ ಮಾಡ್ತಾರೆ ಎಂದು ಅಪ್ಪ ಕೂಡ. ಇವನು ಬಿಟ್ರೆ ಸಿಗುವ ಗಿರಾಕಿಯಲ್ಲ. ತಿಂಡಿ ಆಸೆಗಾದ್ರು ಬಂದೇ ಬರುತ್ತಾನೆ ಎಂದು ಅವನ ಉಪಾಯಕ್ಕೆ ಪ್ರತ್ಯುಪಾಯ ಹೂಡಿದರು.

"ಪುಂಡಿ ಗಟ್ಟಿ ಮಾಡ್ತೀರಾ? ಒಂದು ಸಲ ತಿಂದಿದ್ದೆ ನಿಮ್ಮನೇಲಿ. ಅಷ್ಟು ರುಚಿಯಾಗಿ ನಮ್ಗೆ ಮಾಡ್ಲಿಕ್ಕೆ ಬರುವುದಿಲ್ಲ. ನಮ್ಮನೇಲಿ ಮಾಡಿದ್ರೆ ಗಟ್ಟಿ ಗಟ್ಟಿಯಾಗೇ ಇರ್ತದೆ."

"ನೀವು ಅದಕ್ಕೆ ಗಟ್ಟಿ ಅಂತೀರಲ್ಲ ಅದಕ್ಕೇ ಅದು ಗಟ್ಟಿಯಾಗುವುದು. ನಮ್ಮ ಹಾಗೆ ಕಡುಬು ಅಂತ ಕರೀರಿ ಮೆತ್ತಗಾಗ್ತದೆ" ಎಂದೆ. ನನಗೂ ಅವನ ಮರಕ್ಕೆ ಬೈದು ಫಲ ಹುಟ್ಟಿಸುವ ಉಪಾಯದ ಬಗ್ಗೆ ಬಂದ ನಗುವನ್ನು ಹೊರಹಾಕಬೇಕಿತ್ತು.

"ಆಯ್ತು, ನಾಳೆ ನಿನ್ನ ಕೋರಿಕೆಯ ಪುಂಡಿ ಕಡುಬೇ ಮಾಡುವ. ಬೇಗ ಬಂದು ನಿನ್ನ ಕೆಲಸ ಮಾಡು ಆಯ್ತಾ." ಆಯ್ತು ಅಮ್ಮಾ ಅಂತ ಅವನಿಗೆ ತಿನ್ನಲು ಕೊಟ್ಟಿದ್ದ ಹಲಸಿನ ಹಣ್ಣು ತಿಂದು ಮುಗಿಸಿ ಹೋದ ಹಿ ಹಿಹಿ... ಇದೊಂದು ತರಹದ ತಮಾಷೆ ಎಂದು ಅನಿಸಿದರೂ, ಪಾಪ.. ಮರ ಏನು ಮಾಡಿದೆ.. ಸುಮ್ಮಸುಮ್ಮನೆ ಬೈಸಿ ಕೊಳ್ಳಲು,...? ಆದರೂ ಗಂಗಯ್ಯ ಬಂದಾಗ ಹೇಗೆ ಬಯ್ಯಬಹುದು ಎಂದು ನೋಡಬೇಕು.

ಮಾರನೆ ದಿನ ಗಂಗಯ್ಯ ಬೆಳಬೆಳಗ್ಗೆ ಬಂದು ಬಾಗಿಲು ತಟ್ಟಿದಾಗ ನಾನೂ ಎದ್ದೆ. ಆದರೆ ಅಮ್ಮ, "ಅವನಷ್ಟಕ್ಕೆ ಅವನ ಕೆಲಸ ಮಾಡಲಿ.. ನೀನೇನೂ ಅದನ್ನು ನೋಡಬೇಕಾಗಿಲ್ಲ" ಅಂದರು.

ನಾನು ಎದ್ದು ಕೂತದ್ದೇ ಅದಕ್ಕೋಸ್ಕರ.. ನೋಡಬೇಕಾಗಿಲ್ಲ ಅಂದರೆ...! ಹೂಂ.. ಅಂದೆ ಅಷ್ಟೆ. ಮೆತ್ತಗೆ ಹೋಗಿ ಕಿಟಕಿಯಿಂದ ಇಣುಕಿ ನೋಡಿದೆ.

ಗಂಗಯ್ಯ ಪಂಚೆಯನ್ನು ಕಚ್ಚೆ ಕಟ್ಟಿ ನಿಂತಿದ್ದ. ಇವನೇನು ಮರ ಹತ್ತಿ ಬೈಯುತ್ತಾನಾ ಅಂತ ಆಶ್ಚರ್ಯ ನನಗೆ. ಇಲ್ಲ.. ಅಲ್ಲೇ ನಿಂತು ಮೊದಲು ಮರಕ್ಕೆ ನಮಸ್ಕಾರ ಹಾಕಿದ. ನಂತರ ಬಗ್ಗಿ ಒಂದು ಹಿಡಿ ಮಣ್ಣನ್ನು ಕೈಯ್ಯಲ್ಲಿ ಹಿಡಿದುಕೊಂಡು ಕಣ್ಣೆಲ್ಲ ಅರಳಿಸಿ., ಕೈ ಬಾಯಿ ತಿರುವುತ್ತ..

ಅದೇನು ಬೈಯುತ್ತಿದ್ದನೋ ಗೊತ್ತಿಲ್ಲ..!

ಒಟ್ಟಿನಲ್ಲಿ ಮೂಕಿ ಚಿತ್ರ ನೋಡಿದ ಅನುಭವವಾಯಿತು. ತುಂಬಾ ಹೊತ್ತು ಮಾತನಾಡಿದ ಮೇಲೆ ಕೈಯ್ಯಲ್ಲಿ ಹಿಡಿದ ಆ ಮಣ್ಣನ್ನು ಮರದೆಡೆಗೆ ತೂರಿ ಬಿಸಾಕಿದ.

ಆಮೇಲೆ ಹಿಂದುಗಡೆ ಬಾಗಿಲ ಹತ್ತಿರ ಇಟ್ಟಿದ್ದ ನೀರಿನಲ್ಲಿ ಕೈಕಾಲು, ಮುಖ ಎಲ್ಲಾ ಚೆನ್ನಾಗಿ ತೊಳೆದು ಅಮ್ಮ ಕೊಟ್ಟ ಕಾಫಿ ಮತ್ತು ಕಡುಬು ತಿಂದು, ಅಪ್ಪ ದುಡ್ಡು ಕೊಡಲು ಹೋದರೆ ಬೇಡವೇ ಬೇಡ.. ಮರ ಫಲ ಬಿಟ್ಟಾಗ ನನಗೊಂದು ನಾಲ್ಕು ಹಣ್ಣು ಕೊಡಿ ಸಾಕು ಎಂದು ಹೊರಟೇ ಹೋದ.

ನೋಡಬೇಕಾಗಿಲ್ಲ ಎಂದು ಹೇಳಿದ್ದರೂ ಕೂಡ ನಾನು ನೋಡಿಯೇ ನೋಡುತ್ತೇನೆ ಅಂತ ಅಮ್ಮನಿಗೆ ಗೊತ್ತಿತ್ತು. ನನ್ನನ್ನು ಕರೆದು, 'ಏನು ಮಾಡಿದ ಅವ?' ಎಂದು ಕೇಳಿದರು. ನಾನು ಅದನ್ನೇ ಕಾಯುತಿದ್ದೆ.. ಎಲ್ಲವನ್ನೂ ಯಥಾವತ್ತಾಗಿ ತೋರಿಸಿದೆ.

ಅಮ್ಮನಿಗೆ ನಗುವೋ ನಗು.. ಆಮೇಲೆ ಎಷ್ಟೋ ದಿನದವರೆಗೆ ಮನೆಗೆ ಯಾರೇ ಬಂದರೂ, ಅಮ್ಮ ನನ್ನನ್ನು ಕರೆದು ಇವರಿಗೊಂದು ಸಲ ಗಂಗಯ್ಯನ ಮಿಮಿಕ್ರಿ ಮಾಡಿ ತೋರಿಸು ಅನ್ನುತಿದ್ದರು.

ಮೊದಮೊದಲು ನನಗೂ ಖುಷಿ. ಆಮೇಲಾಮೇಲೆ ಅಮ್ಮ ಕರೆದರೂ ಕೇಳಿಸದ ಹಾಗೆ ಒಳಗೇ ಇರುತಿದ್ದೆ.

ಅಂತೂ ಇಂತೂ ಒಂದಿನ ನಮ್ಮ ಮಾವಿನ ಮರದಲ್ಲಿ ಹೂ ಬಿಟ್ಟಿತು.. ಅಮ್ಮನಿಗೆ ಆಗಲೇ ಎಷ್ಟು ಹಣ್ಣು ಬಿಡಬಹುದು.. ಯಾರುಯಾರಿಗೆ ಎಷ್ಟೆಷ್ಟು ಕಳಿಸುವುದು ಎಂದು ಲೆಕ್ಕಾಚಾರ ಹಾಕುವುದೇ ಕೆಲಸವಾಯಿತು. "ಗಂಗಯ್ಯನ ನಾಲ್ಕು ಹಣ್ಣು ಮೊದಲೇ ತೆಗೆದಿಡಬೇಕು" ಎಂದು ಅಜ್ಜಿ ಅಂದಾಗ ನಾನು ಸುಮ್ಮನಿರದೆ, "ಅಜ್ಜಿ, ಒಂದು ವೇಳೆ ಬರಿಯ ನಾಲ್ಕೇ ಹಣ್ಣು ಬಿಟ್ಟರೆ ಏನು ಮಾಡುವುದು? "

"ಸುಮ್ಮನಿರು ನೀನು ಅಪಶಕುನ ಮಾತಾಡಬೇಡ" ಎಂದು ಬೈದರೂ... ಕೂಡಲೇ "ಹೌದಲ್ಲ.. ಒಂದೊಂದು ಸಲ ಮೊದಲ ಫಲ 2–3 ಮಾತ್ರ ಬಿಡುವುದು ಇದೆ ಅಂತೆ" ಅಂದರು.

ಹಾಗೆಯೇ ಹೂಗಳು ಉದುರಿ ಬಿದ್ದು ಉಳಿದಿದ್ದು ಬರೀ ನಾಲ್ಕು ಮಾವಿನಕಾಯಿಗಳು! ಈಗ ಏನು ಮಾಡುವುದು? ಯಾರಿಗೆ ಹಂಚುವುದು? ಎನ್ನುವ ಯೋಚನೆಯಲ್ಲಿ ಅಮ್ಮ ಬಿದ್ದಾಗ, ಅಪ್ಪ ಸಮಾಧಾನ ಮಾಡಿದರು.

"ಸ್ವಲ್ಪ ಇರು. ಅದು ಯಾವ ತಳಿಯ ಮಾವಿನ ಹಣ್ಣು ಎಂದು ನೋಡುವ, ಅದೇ ಹಣ್ಣುಗಳನ್ನು ಮಾರ್ಕೆಟ್‌ನಿಂದ ತಂದು ಹಂಚಿದರಾಯಿತು ಬಿಡು. ನೀನು ಪಟ್ಟಿ ತಯಾರು ಮಾಡು, ಯಾರಿಗೆಲ್ಲ ಕೊಡಬೇಕು ಅಂತ ನೋಡು"

ತಮಾಷೆಗೆ ಹೇಳಿದ್ದು ಎಂದು ಅಮ್ಮನಿಗೆ ಗೊತ್ತಾಗಲಿಲ್ಲ.. ಹಂಚುವ ಹುಚ್ಚಿನ ಅಮ್ಮ ನಿಜವಾಗಲೂ ಪಟ್ಟಿ ಮಾಡಲು ಕೂತರು.

***

ಆತ್ಮಾಭಿಮಾನ

– ಎನ್.ಶಂಕರ ರಾವ್

ಮಧುರಳ ಮನದಂಗಳದಲ್ಲಿ ಬಹಳ ವರುಷಗಳ ನಂತರ ಹೂವೊಂದು ಅರಳಿ ಸುಗಂಧ ಸೂಸುವಂತೆ ಮನದಲ್ಲಿ ಮತ್ತಿನ ಸಲ್ಲಾಪವೊಂದು ಗರಿಗೆದರಿತ್ತು. ತರುಣಿಯ ಮನದಲ್ಲಿ ಕನಸಿನ ಬಾವುಟ ಹಾರಿಸಿ ಗಟ್ಟಿತಳ ಊರಿದ ಗಿರೀಶನ ಪರಿಚಯ ಫೇಸ್ಬುಕ್ ಮೂಲಕ ಆದದ್ದು. ಪರಿಚಯದ ಗಾಢತ್ವ ಅವಳನ್ನು ಮಂಗಳೂರಿನಿಂದ ಬೆಂಗಳೂರಿಗೆ ಹೋಗಿ ಭೇಟಿಮಾಡಲು ಪ್ರೇರೇಪಿಸಿತ್ತು. ರೈಲಿನ ಸದ್ದಿನೊಂದಿಗೆ ಹೆಣ್ಣಿನ ಎದೆಯ ತಾಕಲಾಟದ ಆಲಾಪದ ಸ್ವರ ಕೊರಗಿ ನಗುತ್ತಿತ್ತು. ಮತ್ತೊಂದು ಕ್ಷಣಕ್ಕೆ ಸಮಾಧಾನವಾಗುತ್ತಿತ್ತು. ಒಮ್ಮೆಯೂ ಭೇಟಿಯಾಗದ ಅವರ ಸುದೀರ್ಘ ಪ್ರೇಮಕ್ಕೆ ಅಂತಿಮ ಅರ್ಥ ಹುಡುಕಲು ಆಕೆಗೆ ಆತ ಬರಹೇಳಿದ್ದ. ಹಿಂದಕ್ಕೊರಗಿ ಕಣ್ಣು ಮುಚ್ಚಿದಳು. ಎರಡು ಕಣ್ಣೀರ ಹನಿ ಉದುರಿದವು. ದುಗುಡಭಾವದ ಅಮೂರ್ತ ಗೊಂದಲ ಆಕೆಯ ಮನದಲ್ಲಿ ಸ್ವರ್ಗದಲ್ಲಿರುವ ತಂದೆತಾಯಿ ಸುಳಿದರು.

ರೈಲಿನ ಹಳಿಯ ಶಬ್ದಕ್ಕೆ ಮನದ ಮೂಲೆಯಲ್ಲಿ ಅವಿತಿದ್ದ ನೆನಪುಗಳ ಸರಮಾಲೆ ಒಂದೊಂದಾಗಿ ಗರಿಕೆದರಿತು. ಆ ದಿನಗಳು ಎಷ್ಟು ಸುಂದರ. ಅಪ್ಪ, ಅಮ್ಮ, ನಾನು ಮತ್ತು ತಂಗಿ. ಚಿಕ್ಕ ಮಧ್ಯಮ ವರ್ಗದ ಸುಖೀ ಸಂಸಾರ. ವಿದ್ಯಾಭ್ಯಾಸ ಡಿಗ್ರಿಯವರೆಗೆ ಸುಸೂತ್ರವಾಗಿ ನಡೆಯಿತು. ಒಮ್ಮೆಲೇ ಸುಖೀ ಸಂಸಾರದಲ್ಲಿ ಬಿರುಗಾಳಿ ಬೀಸಿತು. ಅಂದು ಅಪ್ಪ ಅಮ್ಮ ಹಾಸನದಿಂದ ಬರುತ್ತಿದ್ದ ಕಾರು ಚಾರ್ಮುಡಿ ಘಾಟ್‌ನಲ್ಲಿ ಅಪಘಾತಕ್ಕೆ ಈಡಾಯಿತು. ಇಬ್ಬರೂ ಉಳಿಯಲಿಲ್ಲ. ಶೂನ್ಯ ಆವರಿಸಿತು. ಚಿಕ್ಕ ವಯಸ್ಸಿನ ತಂಗಿಯ ಜವಾಬ್ದಾರಿ. ಸ್ವಂತ ಮನೆಯಿದ್ದಿದ್ದು ತುಂಬಾ ಅನುಕೂಲವಾಯಿತು.

ಕೆಲವು ತಿಂಗಳುಗಳ ನಂತರ ಅಪ್ಪನ ಆಫೀಸಿನಲ್ಲೇ ಕೆಲಸ ಕೊಟ್ಟರು. ಆರ್ಥಿಕ ಪರಿಸ್ಥಿತಿ ಸುಧಾರಿಸಲು ನೆರವಾಯಿತು. ತಂಗಿಯನ್ನು ಓದಿಸಲು ಅನುಕೂಲವಾಯಿತು.

ಅವಳು ಮನಸ್ಸಿನಲ್ಲೇ ನಿರ್ಧಾರ ಮಾಡಿದಳು. ನಾನು ಮದುವೆ ಆದರೂ, ನನ್ನ ತಂಗಿ ನನ್ನ ಜೊತೆ ಇರಬೇಕು. ಅವಳು ಜೀವನದಲ್ಲಿ ಸೆಟ್ಲ್ ಆಗೋವರೆಗೂ ಅವಳನ್ನು ನನ್ನ ಮಗಳ ಹಾಗೆ ನೋಡಿಕೊಂಡು, ನನಗೆ ಒಳ್ಳೆಯ ಕೆಲಸವಿರುವುದರಿಂದ, ನಮ್ಮ ಮನೆ ಅವಳ ಹೆಸರಿಗೆ ಮಾಡುತ್ತೇನೆ. ತಂದೆ ತಾಯಿ ಇಲ್ಲದ ಕೂಸು ಸುಖವಾಗಿರಲಿ.

ಮಧ್ಯೆ ಟ್ರೈನ್ ಸ್ಟೇಷನ್‌ನಲ್ಲಿ ನಿಂತಾಗ, ವಾಸ್ತವಕ್ಕೆ ಹಿಂತಿರುಗಿತು ಮನಸ್ಸು. ಕಾಫಿ ತಿಂಡಿ ತಿಂದು, ಅಕ್ಕಪಕ್ಕದಲ್ಲಿ ಕುಳಿತಿದ್ದ ಕೆಲವರ ಜೊತೆ ಲೋಕಾಭಿರಾಮವಾಗಿ ಮಾತನಾಡುತ್ತ ಪ್ರಯಾಣ ಸಾಗಿತ್ತು. ಬಹುತೇಕ ಪ್ರಯಾಣಿಕರು ಮೊಬೈಲ್‌ನಲ್ಲಿಯೇ ಮಗ್ನರಾಗಿದ್ದರು. ಈ ನಡುವೆ ಯಾರು ಯಾರನ್ನು ಮಾತನಾಡಿಸುವುದು ಕಡಿಮೆಯಾಗಿದೆ. ಎಲ್ಲರೂ ಅವರವರ ಸ್ನೇಹಿತರು, ಪ್ರೇಮಿಗಳ ಜೊತೆ ಚಾಟಿಂಗ್‌ನಲ್ಲೇ ಮಗ್ನರಾಗಿದ್ದರು.

ಮಧುರ ಮತ್ತೆ ತನ್ನ ಹಳೆಯ ನೆನಪಿನಂಗಳಕೆ ಜಾರಿದಳು.

ಫೇಸ್ಬುಕ್‌ನಲ್ಲಿ ಪೋಸ್ಟ್ ಮಾಡುವುದು, ಅದರಲ್ಲಿ ಬರುವ ಲೈಕ್‌ಗಳಿಗೆ ಸಂತಸಪಡುವುದು, ಇದೆಲ್ಲಾ ಹೊಸತರಲ್ಲಿ ಎಷ್ಟು ಚೆಂದ. ತಾನು ಸಹ ಇದಕ್ಕೆ ಹೊರತಲ್ಲ. ಮೊದಮೊದಲು ಗೆಳತಿಯರ ಜೊತೆ ಶುರುವಾಯಿತು. ಕೆಲವು ತಿಂಗಳುಗಳ ನಂತರ ಯಾರೋ ಗೆಳತಿಯ ಮುಖಾಂತರ ಗಿರೀಶನೊಡನೆ ಫೇಸ್ಬುಕ್ ಗೆಳತನ.

ಚಾಟಿಂಗ್ ಮೊದಮೊದಲು ಸ್ನೇಹಿತರಂತೆ ಶುರುವಾಗಿ, ನಂತರ ಪ್ರೇಮಿಗಳ ಆತ್ಮೀಯತೆ ಬೇರೂರಿತು. ಪ್ರತಿದಿನ ಮಾತಾಡದಿದ್ದರೆ ಏನೋ ಕಳೆದುಕೊಂಡ ಹಾಗೆ ಭಾಸವಾಗುತ್ತಿತ್ತು. ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಗಾಢವಾದ ಭಾವನೆ ಬೆಳೆಯಿತು. ಒಂದು ದಿನ ಗಿರೀಶನೇ, 'ನೀನು ಬೆಂಗಳೂರಿಗೆ ಬಾ, ಮುಖತ: ಮಾತನಾಡೋಣ. ಒಬ್ಬರನ್ನೊಬ್ಬರು ನೋಡಿದ ಹಾಗೆ ಆಗುತ್ತದೆ. ನನ್ನ ತಂದೆ ತಾಯಿ ಪರಿಚಯ ಮಾಡುತ್ತೇನೆ' ಎಂದು ಕರೆದ.

ಮಧುರ ಸ್ವಲ್ಪ ಆಲೋಚಿಸಿ, 'ಈ ವಾರದ ಕೊನೆಯಲ್ಲಿ ಬರುತ್ತೇನೆ' ಎಂದು ಉತ್ತರ ಕೊಟ್ಟಳು.

ಯೋಚನಾ ಲಹರಿ ಮುಂದುವರಿದ ಹಾಗೆ, ಮಧುರಳ ಮನಸ್ಸಿನಲ್ಲಿ, ಗಿರೀಶ ಹೇಗಿರುತ್ತಾನೆ. ಸುಂದರವಾಗಿಯೋ ಅಥವಾ..? ಗಂಡಸಿಗೆ ಲಕ್ಷಣಕ್ಕಿಂತ ಉದಾರ ಮನೋಭಾವ, ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳುವ ಮನಸ್ಸು, ದುಶ್ಚಟಗಳಿಂದ ದೂರವಿದ್ದರೆ ಸಾಕು.. ಅಯ್ಯೋ, ನಾನು ಅವನ ಬಗ್ಗೆ ಎಷ್ಟೊಂದು ಕನಸು ಕಾಣುತ್ತಿದ್ದೇನೆ, ಎಂದು ಒಮ್ಮೆ ಮುಗುಳ್ನಕ್ಕಳು.

ರೈಲು ಬೆಂಗಳೂರು ನಿಲ್ದಾಣದಲ್ಲಿ ಬಂದಿಳಿಯಿತು. ಆಚೆ ಬಂದು ಗಿರೀಶನಿಗೆ ಹುಡುಕಾಡಿದಳು. ಸ್ಟೇಷನ್‌ಗೆ ಬರುತ್ತೀನಿ ಅಂದಿದ್ದ. ಸ್ವಲ್ಪ ಹೊತ್ತು ಕಾದು ಫೋನ್ ಮಾಡಿದಳು.

'ಓ, ಆಗಲೇ ಬಂದುಬಿಟ್ಟೆಯಾ? ನಾನು ಇನ್ನೂ ಮಲಗಿದ್ದೆ.. ಹೋಗ್ಲಿ ಆಟೋ ತೊಗೊಂಡು ಈ ಅಡ್ರೆಸ್‌ಗೆ ಬಾ.'

ಮಧುರಳ ಮನಸ್ಸಿನ ಮೂಲೆಯಲ್ಲಿ ಒಂದು ಪ್ರಶ್ನೆ ಅಂಕುರಿಸಿತು??

ಅಡ್ರೆಸ್ ವಿಚಾರಿಸಿಕೊಂಡು ಗಿರೀಶನ ಮನೆಗೆ ಹೋಗಬೇಕೆಂದಿದ್ದ ಮನಸ್ಸು... ಬೇಡ ಅನಿಸಿತು. ಸರಿ, ಅಲ್ಲೇ ಹತ್ತಿರದ ಹೋಟೆಲಿನಲ್ಲಿ ರೂಂ ತೆಗೆದುಕೊಂಡು ರೆಸ್ಟ್ ತೆಗೆದುಕೊಂಡಳು.

ಸ್ವಲ್ಪ ಹೊತ್ತಿನ ನಂತರ ಗಿರೀಶ ಫೋನ್ ಮಾಡಿದ. 'ಏನಾಯ್ತು , ಮನೆಗೆ ಬರಲಿಲ್ಲ. ಅಡ್ರೆಸ್ ಸಿಗಲಿಲ್ವ?'

'ಇಲ್ಲಾ , ಇಲ್ಲೇ ಒಂದು ಹೋಟೆಲ್ನಲ್ಲಿ ರೂಂ ತೆಗೆದುಕೊಂಡೆ..'

'ನೀನು ಬಾ, ಬ್ರೇಕ್ ಫಾಸ್ಟ್ ಜೊತೆಗೆ ಮಾಡೋಣ' ಅಂದಳು.

ಗಿರೀಶ 'ಸಾರಿ ಕಣೇ, ಇನ್ನರ್ಧ ಗಂಟೆಯೊಳಗೆ ಅಲ್ಲಿ ಇರುತ್ತೀನಿ' ಅಂದ.

ಗಿರೀಶನನ್ನು ಮೊದಲ ಸಲ ನೋಡುವ ತವಕ, ಹೇಗಿರುತ್ತಾನೋ? ರೂಂನ ಕಾಲಿಂಗ್ ಬೆಲ್ ಅವಳ ಆಲೋಚನೆಗೆ ಬ್ರೇಕ್ ಮಾಡಿತು.

'ಹಾಯ್, ಹಲೋ, ನಾನು ಗಿರೀಶ್..' ನಗುತ್ತಾ ನಿಂತಿದ್ದ ಸುಂದರಾಂಗ..

'ನಾನು ಮಧುರ ..' ನಾಚಿಕೆಯಿಂದ ನುಡಿದಳು. ಅವಳ ಮನಸ್ಸಿನಲ್ಲಾದ ಸಂತಸ ಮುಖದಲ್ಲಿ ಹೊಳೆಯುತ್ತಿತ್ತು.

ನಂತರ ಬ್ರೇಕ್‌ಫಾಸ್ಟ್ ಮಾಡುತ್ತಾ ಮಾತು ಮುಂದುವರಿಸಿದರು. 'ನಾನು ಬೈಕ್ ತಂದಿದ್ದೇನೆ.. ಸುತ್ತಾಡಿ ಬರೋಣ ಆಯ್ತು?'

'ಸರಿ, ಆದರೆ ಮೊದಲು ದೇವಸ್ಥಾನಕ್ಕೆ ಹೋಗೋಣ, ನಂತರ ನಿನಗೆ ಬಿಟ್ಟಿದ್ದು...'

ಆಗಲಿ ಎಂದು ಗಿರೀಶ್, 'ಅಲ್ಲೇ ಹತ್ತಿರದ ದೇವಸ್ಥಾನಕ್ಕೆ ಹೋಗಿ ನಮಸ್ಕಾರ ಮಾಡಿ, ಕಬ್ಬನ್ ಪಾರ್ಕಿನಲ್ಲಿ ಸುತ್ತಾಡಿ ಬರೋಣ, ಈಗ ಅಷ್ಟು ಬಿಸಿಲಿಲ್ಲ, ಚೆನ್ನಾಗಿರುತ್ತದೆ' ಅಂದ.

ಪಾರ್ಕಿನಲ್ಲಿ ಬಂದು, ಒಂದು ಕಡೆ ಕೂತರು.

'ಮತ್ತೆ ಹೇಗನ್ನಿಸಿತು.. ನನ್ನನ್ನು ನೋಡಿ?' ಗಿರೀಶನ ಮಾತಿಗೆ,. 'ಹುಂ ಪರವಾಗಿಲ್ಲ, ಫೇಸ್ಬುಕ್‌ಗಿಂತ ಚೆನ್ನಾಗಿ ಕಾಣಿಸುತ್ತಿದ್ದೀಯ!" ಎಂದು ಮಧುರ ತಮಾಷೆ ಮಾಡಿದಳು.

ನಂತರ ಗಿರೀಶ, 'ನಮ್ಮ ಮನೆಯಲ್ಲಿ ಎಲ್ಲಾ ವಿಷಯ ತಿಳಿಸಿದ್ದೇನೆ. ತಾಯಿ ತಂದೆ ಒಪ್ಪಿದ್ದಾರೆ.. ನಮ್ಮಗಳ ಸಂಪ್ರದಾಯ ಬೇರೆಯಾದರೂ ಕಷ್ಟಪಟ್ಟು ಒಪ್ಪಿದರು. ನೀನು ಮದುವೆಯಾದ ಮೇಲೆ ಇಲ್ಲಿಗೆ ಬಂದುಬಿಡು. ಬೇರೆ ಕೆಲಸ ನೋಡಿಕೋ?'

'ಏನೋ.. ನೀನೆ ಎಲ್ಲಾ ನಿರ್ಧಾರ ಮಾಡಿದ ಹಾಗಿದೆ. ಸ್ವಲ್ಪ ಟೈಮ್ ಬೇಕು, ಯೋಚಿಸೋಣ' ಅಂದಳು ಮಧುರ.

'ಯೋಚ್ನೆ ಯಾಕೆ, ನಿನ್ನನ್ನ ಚೆನ್ನಾಗಿ ನೋಡಿಕೊಳ್ಳುತ್ತೀನಿ ..' ಎಂದು ನಕ್ಕ ಗಿರೀಶ್.

ಮಧುರ ನಗಲಿಲ್ಲ..?

ಆಮೇಲೆ ಇನ್ನೊಂದು ವಿಷಯ.., 'ನಿನ್ನ ಮನೆ ಮಾರಿಬಿಡು. ನಿನ್ನ ತಂಗಿಯನ್ನು ಅಲ್ಲೇ ನಿಮ್ಮ ನೆಂಟರ ಮನೆಗೆ ಬಿಡಬಹುದು...'

ಇದನ್ನು ಕೇಳಿ ಮಧುರ ಒಮ್ಮೆಲೇ, 'ಸ್ಟಾಪ್ ಗಿರೀಶ್, ನನ್ನ ವೈಯಕ್ತಿಕ ವಿಷಯಗಳಿಗೆ ತುಂಬಾ ಇಂಟರ್‌ಫಿಯರ್ ಆಗ್ತಾ ಇದ್ದೀಯಾ? ನಮಗೆ ಇನ್ನೂ ಮದುವೆ ಆಗಿಲ್ಲ ಅನ್ನೋದನ್ನು ಮರೆತಹಾಗಿದೆ. ನಾನು ಇಂದು ಸಂಜೆ ವಾಪಸ್ಸು ಹೋಗುತ್ತಿದ್ದೇನೆ.'

ಗಿರೀಶನ ನಿಶ್ಯಬ್ದ ಮೌನ..ಅವನ ಮನಸ್ಥಿತಿಯನ್ನು ಅನಾವರಣಗೊಳಿಸಿತು...

ತಿರಸ್ಕಾರ ಭಾವದಿಂದ ಗಿರೀಶ ಸಾಗಿ ಸಾಗಿ ಹೋಗುತ್ತಿದ್ದ. ಮಧುರಳ ಗಟ್ಟಿ ಮನದಲ್ಲಿ ಮೊಳಕೆಯೊಡೆದ ಗಟ್ಟಿ ನಿರ್ಣಯದ ಏಣಿಯನ್ನೇರಿ ಗಿರೀಶನ ಅಪಕ್ವತೆಯನ್ನು ಸಹಾನುಭೂತಿಯಿಂದ ನೋಡುವಂತೆ ಮಾಡಿತು. ಹಳೆಯ ಕನಸು ಕೊಲೆಯಾಯಿತು. ಹೊಸ ಕನಸಿನ ಅಲೆಯಲ್ಲಿ ದುಃಖ ಉಮ್ಮಳಿಸಿ ಬಂತು.

***

ಕಥಾ ಪ್ರಪಂಚ

ಬೆಳಕು ಬೀರುವ ಕತೆಗಳು

– ವಿಠ್ಠಲ್ ಇಜೇರಿ

ಎಲ್ಲ ವಯಸ್ಸಿನವರು ಕತೆಗಳನ್ನು ಇಷ್ಟಪಡುತ್ತಾರೆ. ಮನೋರಂಜನೆ ಒಂದು ಕಾರಣವಾದರೆ ಬಹಳಷ್ಟು ಕತೆಗಳು ಮೌಲ್ಯಗಳನ್ನು,, ನಿತ್ಯ ಸತ್ಯಗಳನ್ನು, ಮಧುರ ಭಾವಗಳನ್ನು ಒಳಗೊಂಡಿರುತ್ತವೆ. ಕತೆಗಳು ಸುಲಭವಾಗಿ ಅರ್ಥವಾಗುತ್ತವೆ. 'ಎನ್‌ಲೈಟನಿಂಗ್ ಸ್ಟೋರೀಸ್' ಎಂಬ ಕಥಾ ಸಂಕಲನ 74 ಕತೆಗಳ ಸಂಗ್ರಹವಾಗಿದ್ದು ಇವುಗಳನ್ನು ಭಾರತೀಯ ಸಂಸ್ಕೃತಿ ಮತ್ತು ಮಧ್ಯಪೂರ್ವ ರಾಷ್ಟ್ರಗಳು, ಇಟಲಿ, ಮೊದಲಾದ ದೇಶಗಳ ಕತೆಗಳು ಮೊದಲುಮಾಡಿ 20ನೇ ಶತಮಾನದವರೆಗಿನ ಕತೆಗಳು ಇಲ್ಲಿವೆ. ಹಿಂದೂ, ಬುದ್ಧ, ಸೂಫಿ, ಕ್ರಿಶ್ಚಿಯನ್ ಪರಂಪರೆಯ ಕತೆಗಳು ಇದರಲ್ಲಿವೆ. ಈ ಕತೆಗಳು ಉನ್ನತ ಪರಂಪರೆ ಮತ್ತು ವಿವಿಧ ಸಂಸ್ಕೃತಿಗಳ ಆಧ್ಯಾತ್ಮಿಕ ಸತ್ಯಗಳನ್ನು ಒಳಗೊಂಡಿವೆ. ಮೂಲ ಬೆಂಗಾಲಿ ಕೃತಿ ಗಾಲ್ಪಾ ಮಾಲಿಕ (ಹೂವಿನ ಸರ)ವನ್ನು ಅಮೇರಿಕಾದ ಸೈಂಟ್ ಲೂಯಿಸ್ ವೇದಾಂತ ಸೊಸೈಟಿಯ ಮುಖ್ಯಸ್ಥರಾದ ಸ್ವಾಮಿ ಚೇತನಾನಂದರು ಇಂಗ್ಲಿಷ್‌ನಲ್ಲಿ ತಂದರು. ಅದು ಸ್ವಾಮಿ ವಿಮೋಹನಂದರಿಂದ ಬೆಳಕು ಬೀರುವ ಕಥೆಗಳಾಗಿ ರೂಪಾಂತರವಾಗಿದೆ.

ಈಗ ಒಂದು 'ಜಾದೂಗಾರ' ಎಂಬ ಕನಸುಗಳ ಮಾನಸಿಕ ಹಿನ್ನೆಲೆ ಬಿಂಬಿಸುವ ಕತೆ ನೋಡುವಾ:

ಉತ್ತರಕಾಂಡ ರಾಜ್ಯದಲ್ಲಿ ಲವಣ ಎಂಬ ರಾಜನಿದ್ದ. ಅವನ ರಾಜ್ಯದಲ್ಲಿ ಸಾಧನ ಸಂಪತ್ತು ಚೆನ್ನಾಗಿದ್ದು, ರಾಜ್ಯದೆಲ್ಲೆಡೆ ನೆಮ್ಮದಿ, ಶಾಂತಿ ನೆಲೆಸಿತ್ತು. ಅವನು ಒಂದು ಸುಂದರ ಕನಸನ್ನು ಕಂಡ. ಕನಸು ಯಾಕೆ ಬೀಳುತ್ತವೆ, ಕನಸುಗಳ ಉದ್ದೇಶ, ಅರ್ಥ ಹೇಗೆ ಅರಿಯುವುದು ಎಂಬ ಬಗ್ಗೆ ಜಿಜ್ಞಾಸೆ ಉಂಟಾಗಿತ್ತು. ಗ್ರಂಥ ಗಳನ್ನು ಓದಿದ, ಪಂಡಿತರನ್ನು, ವಿಚಾರಿಸುತ್ತಲಿದ್ದ.

ಆ ವೇಳೆಗೆ ಅವರ ರಾಜ್ಯಕ್ಕೆ ಒಬ್ಬ ಪ್ರಸಿದ್ಧ ಜಾದುಗಾರ ಬಂದ. ಅನೇಕ ಕಡೆ ಅವನ ಪ್ರದರ್ಶನಕ್ಕೆ ಬೇಡಿಕೆ ಬಂದರೂ ಅವನದು ಒಂದೇ ಮಾತು, "ನಾನು ಜಾದೂ ಪ್ರದರ್ಶನ ನೀಡುವುದು ಮಹಾರಾಜರ ಎದುರು ಮಾತ್ರ".

ವಿಷಯ ಮಹಾರಾಜರವರೆಗೆ ಹೋಗಿ ಒಂದು ದಿನ ಮಹಾರಾಜರು ಮತ್ತು ಅವರ ಆಸ್ಥಾನದ ಮಂತ್ರಿವರ್ಯರ ಎದುರು ಜಾದೂ ಪ್ರದರ್ಶನಕ್ಕೆ ಏರ್ಪಾಡಾಯಿತು. ಜಾದೂಗಾರ ಉದ್ದದ ಬಣ್ಣ ಬಣ್ಣದ ನವಿಲುಗರಿ ಗಾಳಿಯಲ್ಲಿ ಆಡಿಸುತ್ತ, ತಾಜಾ ಹಣ್ಣುಗಳನ್ನು ಶೂನ್ಯದಲ್ಲಿ ಸೃಷ್ಟಿಸಿ ಅಲ್ಲಿದ್ದವರಿಗೆ ತಿನ್ನಲು, ವಾಸನೆ ನೋಡಲು ಕೊಟ್ಟ. ಬೇರೆ ಬೇರೆ ವಸ್ತುಗಳನ್ನು ಎಲ್ಲಿಂದಲೋ ತೆಗೆದ ಮತ್ತು ಮಾಯ ಮಾಡಿದ. ಈಗ ಜಾದೂಗಾರ ರಾಜನತ್ತ ದೃಷ್ಟಿ ಇಟ್ಟು ತನ್ನ ನವಿಲುಗರಿಯನ್ನು ಗಾಳಿಯಲ್ಲಿ ತೇಲಾಡಿಸಿದ. ಆಶ್ಚರ್ಯ, ರಾಜನ ಎದುರು ಕೋರೈಸುವ ಬೆಳಕು ಕಾಣಿಸಿಕೊಂಡಿತು ಮತ್ತು ಅದರೊಳಗಿಂದ ಆಕರ್ಷಕ ಅಚ್ಚ ಬಿಳಿ ಕುದುರೆ ಹೊರಬಂದು ನಿಂತಿತು. ಜಾದುಗಾರ ರಾಜನಿಗೆ "ಆ ಬಿಳಿ ಕುದುರೆ ಸವಾರಿ ಮಾಡಿ" ಅಂದ. ರಾಜ ಆ ಕುದುರೆ ಏರಲು ಎದ್ದು ನಿಂತ ಮತ್ತು ಅಲ್ಲಿಯೇ ಕುಸಿದು ಕುಳಿತು ಪ್ರಜ್ಞೆ ಕಳೆದುಕೊಂಡ.

ರಾಜನ ದೇಹ ಕಂಪಿಸಿ ಬಿರುಸಾಗತೊಡಗಿತು. ರಾಜಸಭಾಸದರು ಗಾಬರಿಯಿಂದ ಜಾದೂಗಾರನತ್ತ ನೋಡಿದರು. ಅವನು ನವಿಲುಗರಿ ಆಡಿಸುತ್ತ ಸಮಾಧಾನದಿಂದ ಇರುವಂತೆ ಸನ್ನೆ ಮಾಡಿದ. ಸ್ವಲ್ಪ ಸಮಯ ಕಳೆಯಿತು. ರಾಜನಿಗೆ ಪ್ರಜ್ಞೆ ಬಂತು. ನಿಧಾನವಾಗಿ ಎದ್ದು ಸಿಂಹಾಸನದ ಮೇಲೆ ಕುಳಿತ.

ಜಾದುಗಾರ ರಾಜನಿಗೆ "ಏನು ನಡೆಯಿತು?" ಅಂದ. ರಾಜ ತನ್ನ ಕತೆ ಹೇಳತೊಡಗಿದ. "ನನ್ನೆದುರು ಬಿಳಿ ಕುದುರೆಯೊಂದು ಪ್ರತ್ಯಕ್ಷವಾಯಿತು. ನೀವು ಹೇಳಿದ ತಕ್ಷಣ ಕುದುರೆ ಮೇಲೆ ಏರಿದೆ. ಅದು ನಾಗಾಲೋಟದಲ್ಲಿ ಓಡುತ್ತ ಒಂದು ಅಪರಿಚಿತ ದೇಶಕ್ಕೆ ನನ್ನನ್ನು ಕೊಂಡೊಯ್ಯಿತು. ಇನ್ನಷ್ಟು ದೂರ ಹೋದಾಗ ಕಾಡು. ಅಲ್ಲಿ ನೀರು ಹುಡುಕಲು ಕೆಳಗೆ ಇಳಿದೆ. ತಕ್ಷಣ ಕುದುರೆ ಮಾಯವಾಯಿತು. ಮುಂದೆ ಹೋದಾಗ ಮರದಿಂದ ಬಲೆ ನೇತು ಹಾಕಿದ್ದರು, ಕತ್ತಲೆಯಲ್ಲಿ ಕಾಣಲಿಲ್ಲ. ನಾನು ಬಲೆಯಲ್ಲಿ ಸಿಕ್ಕುಹಾಕಿಕೊಂಡೆ. ಹಸಿವು, ನೀರಡಿಕೆಯಿಂದ ಬಳಲಿದ್ದೆ. ಆಗ ಯಾರಾದರೂ ನೀರು ಕೊಟ್ಟಿದ್ದರೆ ನೀರಿನ ಬದಲು ಅರ್ಧ ರಾಜ್ಯವನ್ನು ಬೇಕಾದರೂ ಕೊಡಲು ತಯಾರಿದ್ದೆ. ಸಾಕಷ್ಟು ಕೂಗಿದೆ, ಯಾರೂ ಬರಲಿಲ್ಲ. ರಾತ್ರಿ ಕಳೆದು ಬೆಳಗಾಗುವವರೆಗೆ ಅದೇ ದೈನ್ಯ ಸ್ಥಿತಿಯಲ್ಲಿದ್ದೆ. ಬೆಳಗ್ಗೆ ಯಾರೋ ಹಾಡುವ ಧ್ವನಿ ಕೇಳಿ ಕಣ್ಣು ಬಿಟ್ಟೆ. ಆಕೆ ಒಬ್ಬ ಯುವತಿ, ಒಂದು ಕೈಯಲ್ಲಿ ಚಾಕು ಹಿಡಿದಿದ್ದಳು. ತಲೆ ಮೇಲೊಂದು ಬುಟ್ಟಿ. ಆಕೆ ನನ್ನತ್ತಲೇ ಬರುತ್ತಿದ್ದಳು. ನಾನು ಆತುರದಿಂದ ಕರೆದು, 'ಸ್ವಲ್ಪ ನೀರು, ಊಟ ಕೊಡು' ಎಂದು ಕೇಳಿದೆ. ಆಕೆ "ನೀವು ಉಚ್ಚ ಕುಲದವರು, ನಾನೋ ಕಡಿಮೆ ಜಾತಿಯವಳು. ಊಟ, ನೀರು ಕೊಟ್ಟು ಪಾಪಕ್ಕೆ ಗುರಿಯಾಗಲಾರೆ" ಅಂದಳು. ನಾನು "ಪರವಾಗಿಲ್ಲ, ಕೊಡು ನಾನೇನೂ ತಪ್ಪು ಎಣಿಸುವುದಿಲ್ಲ" ಅಂದಾಗ ಆಕೆ "ಹಾಗಾದರೆ ಸರಿ ನನ್ನ ಬುಟ್ಟಿಯಲ್ಲಿ ನೀರು, ಊಟ ಎರಡೂ ಇದೆ, ಕೊಡುವೆ. ಆದರೆ ಒಂದು ಷರತ್ತು, ನೀವು ನನ್ನನ್ನು ಮದುವೆಯಾಗುವುದಾದರೆ ನಾನು ನಿಮ್ಮ ಹಸಿವೆ, ಬಾಯಾರಿಕೆ ಪೂರೈಸಬಲ್ಲೆ" ಅಂದಳು. ನಾನು ಆಕೆಯನ್ನು ನೋಡಿದೆ. ಯುವತಿ ಏನೋ ಸರಿ, ಆದರೆ ಆಕೆ ಅತ್ಯಂತ ಕುರೂಪಿ, ಆದರೂ ಜೀವ ಉಳಿಯಬೇಕಲ್ಲ, ಮದುವೆಗೆ ಸಮ್ಮತಿಸಿದೆ. ಆಕೆ ತನ್ನ ಕೈಯಲ್ಲಿದ್ದ ಹರಿತವಾದ ಚೂರಿಯಿಂದ ಬಲೆಯನ್ನು ಕತ್ತರಿಸಿ ನನಗೆ ನೀರು ನೀಡಿದಳು. ಹೋದ ಜೀವ ಬಂದಂತಾಯಿತು. ಆಮೇಲೆ ಊಟ ನೀಡಿದಳು.

ಆಕೆ ನನ್ನನ್ನು ತಮ್ಮ ಗ್ರಾಮಕ್ಕೆ ಕರೆದುಕೊಂಡು ಹೋದಳು. ಅವರೆಲ್ಲಾ ಬಹಳ ದೀನ ಸ್ಥಿತಿಯಲ್ಲಿದ್ದರು. ಮದ್ಯ, ಮಾಂಸ ಸೇವಿಸುತ್ತಿದ್ದರು. ಮೊದಮೊದಲು ನನಗೆ ಕಷ್ಟವೆನಿಸಿದರೂ ಕ್ರಮೇಣ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡೆ. ನಮಗೆ ಮೂರು ಮಕ್ಕಳಾದರು. ಆ ವೇಳೆಗೆ ಅಲ್ಲಿ ಅತೀವ ಬರಗಾಲ ಉಂಟಾಯಿತು, ಹಿಂದೆಯೇ ಸಾಂಕ್ರಾಮಿಕ ರೋಗಗಳು ಹರಡಿ ಎಲ್ಲರೂ ಆ ಸ್ಥಳ ತೊರೆದು ಹೋಗತೊಡಗಿದರು. ರೋಗಕ್ಕೆ ತುತ್ತಾಗಿ ನನ್ನ ಹೆಂಡತಿ ಸಾವಿಗೀಡಾದಳು. ನಾನೂ ಮಕ್ಕಳೊಡನೆ ಆ ಸ್ಥಾನದಿಂದ ಹೊರಟೆ. ದಾರಿಯಲ್ಲಿ ಮಕ್ಕಳನ್ನು ಕಳೆದುಕೊಂಡು ರೋಧಿಸುವ ವೇಳೆಗೆ ಎಚ್ಚರವಾಯಿತು. ಈಗ ಇಲ್ಲಿರುವೆ".

ರಾಜ, ಜಾದೂಗಾರನಿಗೆ "ಇದೆಲ್ಲ ಏನು?" ಎಂದು ಕೇಳಿದ. ಜಾದೂಗಾರ "ಪ್ರಭು, ನೀವು ಕನಸುಗಳ ಬಗ್ಗೆ ಅರಿಯುವ ಪ್ರಯತ್ನ ಮಾಡುತ್ತಿದ್ದಿರಿ. ಅದನ್ನು ನಿಮಗೆ ತಿಳಿಸುವ ಪ್ರಯತ್ನ ಈ ಜಾದೂ ಮೂಲಕ ಮಾಡಿದ್ದೇನೆ. ಕನಸುಗಳು ನಮ್ಮ ಮನಸ್ಸಿನ ಚಟುವಟಿಕೆಗಳು. ಅವೆಲ್ಲ ನಮ್ಮ ದೇಹದಲ್ಲಿ ನಡೆಯುತ್ತವೆ. ಅಲ್ಲಿಯ ಘಟನೆಗಳನ್ನು ದೇಹ ಅನುಭವ ಮಾಡಿಕೊಳ್ಳುತ್ತದೆ. ಆದರೆ ಕನಸಿನಿಂದ ಹೊರಬಂದಾಗ ಅದೆಲ್ಲ ಭ್ರಮೆ ಎಂದು ಅರಿವಿಗೆ ಬರುವುದು. ಅದೆಲ್ಲ ಮಿಥ್ಯ.. ಕನಸಿನಲ್ಲಿ ನಾವು ಬೆಟ್ಟವನ್ನು ಕಾಣಬಹುದು, ಆದರೆ ದೇಹದಲ್ಲಿ ಬೆಟ್ಟವಿರಲು ಸಾಧ್ಯವಿಲ್ಲ. ಅದು ಮಿಥ್ಯ ಮತ್ತು ಅಲ್ಲಿ ಕಾಣುವುದೆಲ್ಲ ಭ್ರಮೆ. ನಮ್ಮ ಶಾಸ್ತ್ರಗಳು ನಿಜ ಜೀವನದಲ್ಲಿ ಕಾಣುವುದೂ ಮಿಥ್ಯ, ಈ ಜಗತ್ತು ಒಂದು ಭ್ರಮೆಯ ಲೋಕ ಎಂದು ತಿಳಿಸುವವು. ಈ ಸತ್ಯ ಮನವರಿಕೆಯಾದಾಗ ಜಗತ್ತು ನಮ್ಮಲ್ಲಿದೆ, ಹೊರಗೆ ಕಾಣುವುದೆಲ್ಲ ಮಾಯೆ ಎಂದು ಅರ್ಥವಾಗುವುದು. ಅಲ್ಲಿರುವ ಸತ್ಯ ಏನೆಂದರೆ ಈ ಮನಸ್ಸಿನ ಹಿಂದೆ ಚೈತನ್ಯ ರೂಪದ ಆತ್ಮವಿದೆ. ಅದು ಮಾತ್ರ ಶಾಶ್ವತವಾದ ಸತ್ಯ. ಇದನ್ನು ಅರಿತರೆ ನಾವು ಜೀವನವನ್ನು ನೋಡುವ ದೃಷ್ಟಿ ಬದಲಾಗುವುದು".

ರಾಜನಿಗೆ 'ಈ ಜಗತ್ತೇ ಮಿಥ್ಯ, ನನ್ನಲ್ಲಿ ಇರುವುದು ಚೈತನ್ಯಪೂರ್ಣ ಆತ್ಮ, ಅದೊಂದೇ ಸತ್ಯ. ಅಂದಮೇಲೆ ಕನಸುಗಳ ಚಿಂತೆ ಏಕೆ? ಎನಿಸಿ ಅವನು ನಿಶ್ಚಿಂತನಾದ. ***

ಪ್ರಚಲಿತ ಹಣಕಾಸು

ರೆಪೋ ದರ ಹೆಚ್ಚಳದ ಪರಿಣಾಮ
ಠೇವಣಿಗಳ ಮೇಲಿನ ಬಡ್ಡಿ ದರದ ಮೇಲೆ ಆಗಬಹುದೇ?

– ಶ್ರೀಧರ ಬಾಣಾವರ

ರೆಪೋ ದರ ಎಂದರೆ ಭಾರತೀಯ ರಿಸರ್ವ್ ಬ್ಯಾಂಕಿನ ಮೂಲಕ ಬ್ಯಾಂಕುಗಳು ತಮ್ಮಲ್ಲಿರುವ ಭದ್ರತಾ ಪತ್ರಗಳ ಆಧಾರದಲ್ಲಿ ಪಡೆದುಕೊಳ್ಳಬಹುದಾದ ಸಾಲದ ಮೇಲೆ ವಿಧಿಸುವ ಬಡ್ಡಿ ದರ.

ಈ ವಾರ (07-12-22) ಬಾರತೀಯ ರಿಸರ್ವ್ ಬ್ಯಾಂಕು ತನ್ನ ರೆಪೋ ದರವನ್ನು ಶೇ.0.35 ಅಂಶಗಳಷ್ಟು ಏರಿಸಿದೆ. ಮೇ 2022ರಿಂದ ಇಲ್ಲಿಯವರೆಗೆ ರೆಪೋ ದರ ನಾಲ್ಲನೆಯ ಬಾರಿ ಸತತವಾಗಿ ಏರಿದೆ. ಮೇ 2022ರಲ್ಲಿ ಶೇ. 4.00ರಷ್ಟಿದ್ದ ದರ ಈ ಏರಿಕೆಯೊಂದಿಗೆ ಶೇ. 6.25ಕ್ಕೆ ಏರಿದೆ. ಇದು ಬ್ಯಾಂಕು ಸಾಲಗಳಿಗೆ ಅನ್ವಯಿಸುವ ದರವಾದರೂ ಪ್ರತಿ ಏರಿಕೆಯೊಂದಿಗೆ ಏಳುವ ಪ್ರಶ್ನೆಯೆಂದರೆ ಕುಸಿದಿರುವ ಠೇವಣಿ ಬಡ್ಡಿ ದರ ಎಷ್ಟು ಏರಬಹುದು ಎಂಬುದಾಗಿದೆ. ಆಶ್ಚರ್ಯದ ಸಂಗತಿಯೆಂದರೆ ಈ ವಾರ ರೆಪೋ ದರ ಹೆಚ್ಚಳದ ಘೋಷಣೆಯಾದ ತಕ್ಷಣವೇ ಪ್ರಮುಖ ಟಿವಿ ವಾಹಿನಿಗಳಲ್ಲಿ ಚರ್ಚೆ ಶುರುವಾದದ್ದೇ ಠೇವಣಿ ಬಡ್ಡಿ ದರಗಳ ಹೆಚ್ಚಳದ ಬಗ್ಗೆ. ಅಲ್ಲಿನ ಆಂಕರ್‌ಗಳು ಸಾಲದ ಬಡ್ಡಿ ಹೆಚ್ಚಳದ ಪರಿಣಾಮಗಳನ್ನು ಬಿಟ್ಟು ಈ ಬಾರಿಯ ರೆಪೋ ದರದಿಂದ ಠೇವಣಿಗಳ ಮೇಲಿನ ಬಡ್ಡಿ ದರ ಎಷ್ಟು, ಯಾವಾಗ ಹೆಚ್ಚಾಗಬಹುದು ಎಂಬ ಪ್ರಶ್ನೆಗಳನ್ನು ಅಲ್ಲಿದ್ದ ಪರಿಣಿತರ ಕಡೆಗೆ ತೂರಿದ್ದು ವಿಶೇಷವಾಗಿತ್ತು. ತಕ್ಷಣಕ್ಕೆ ಯಾವುದೇ ಸ್ಪಷ್ಟವಾದ ಉತ್ತರ ಬಾರದಿದ್ದರೂ ಅಲ್ಪಸ್ವಲ್ಪ ಧನಾತ್ಮಕ ಪ್ರತಿಕ್ರಿಯೆಗಳು ಬಂದವು ಎಂಬುದೇ ಸಂತೋಷದ ವಿಷಯ. ಇನ್ನು ಸಾಮಾಜಿಕ ಜಾಲತಾಣಗಳಲ್ಲಿ ಇವುಗಳ ಚರ್ಚೆ ಸಾಕಷ್ಟು ಶುರುವಾಗಿದೆ.

ಬ್ಯಾಂಕುಗಳು ಠೇವಣಿಗಳ ಮೇಲಿನ ಬಡ್ಡಿ ದರಗಳನ್ನು ನಿಶ್ಚಯಿಸಲು ತಮ್ಮದೇ ಆದ ವಿಧಾನಗಳನ್ನು ರೂಪಿಸಿಕೊಂಡಿವೆ. ರೆಪೋ ದರವನ್ನು ಸಾಲದ ಬಡ್ಡಿ ದರಗಳನ್ನು ನಿರ್ಧರಿಸಲು ಬಳಸುವುದು ಬ್ಯಾಂಕುಗಳಿಗೆ ಹೆಚ್ಚು ಕಡಿಮೆ ಅನಿವಾರ್ಯವಾಗಿದ್ದರೂ ಠೇವಣಿ ಬಡ್ಡಿ ದರಗಳನ್ನು ನಿರ್ಧರಿಸಲು ಅದು ಮುಖ್ಯ ಮಾನಕ ವಾಗುವುದಿಲ್ಲ. ಬ್ಯಾಂಕುಗಳಲ್ಲಿ ಆಸ್ತಿ ಜವಾಬ್ದಾರಿ ನಿರ್ವಹಣೆ (ಅಸೆಟ್ ಲಯಾಬಿಲಿಟಿ ಮ್ಯಾನೇಜ್ಮೆಂಟ್) ಎಂಬ ಕ್ರಮವೊಂದಿರುತ್ತದೆ. ಇದರ ಪ್ರಕಾರ ಹೊರಹೋಗುವ ಮತ್ತು ಒಳಬರುವ ಹಣದ (ಫಂಡ್ಸ್ ಎಂಬರ್ಥದಲ್ಲಿ) ಹರಿವಿನ ದಿನವಹಿ ಲೆಕ್ಕಾಚಾರ ನಡೆಯುತ್ತದೆ. ಹಣದ ದ್ರವ್ಯತೆ (ಲಿಕ್ವಿಡಿಟಿ) ಯನ್ನು ಅಳೆಯಲು ಇದು ಸಹಕಾರಿ. ಉದಾಹರಣೆಗೆ ಸಾಲದ ಹೊರಹರಿವು ಹೆಚ್ಚಿದ್ದು ಅದಕ್ಕೆ ಹೊಂದುವ ಸಂಪನ್ಮೂಲ (ರಿಸೋರ್ಸಸ್)ಗಳಲ್ಲಿ ಕೊರತೆ ಇದ್ದಲ್ಲಿ ಅಂದರೆ ದ್ರವ್ಯತೆ ಕಡಿಮೆಯಾಗಿದ್ದಲ್ಲಿ ಬ್ಯಾಂಕು ಅದಕ್ಕೆ ತಕ್ಕಂತೆ ಹಣದ ಒಳಹರಿವನ್ನು ಹೆಚ್ಚಿಸಿಕೊಳ್ಳ ಬೇಕಾಗುತ್ತದೆ. ರೆಪೋ ಮೂಲಕ ಸಾಲ ಹಾಗೂ ಠೇವಣಿಗಳು ಇದಕ್ಕೆ ಸಹಕಾರಿಯಾಗುತ್ತವೆ.

ಇಂತಹ ಸಮಯದಲ್ಲಿ ಬ್ಯಾಂಕುಗಳು ಹೆಚ್ಚಿನ ದರದಲ್ಲಿ ಠೇವಣಿಗಳನ್ನು ಬರಮಾಡಿಕೊಳ್ಳುತ್ತವೆ. ಅಂದರೆ ಬಡ್ಡಿ ದರ ಹೆಚ್ಚಿಸುತ್ತವೆ. ಕೊರತೆಯ ಅವಧಿಗೆ ತಕ್ಕಂತೆ ಬಡ್ಡಿ ದರಗಳನ್ನು ನಿಗದಿಪಡಿಸುತ್ತವೆ. ಹಲವೊಮ್ಮೆ ಐದು ವರ್ಷದ ಮೇಲ್ಪಟ್ಟ ಅವಧಿಯ ಠೇವಣಿಗೆ, ಎರಡು-ಮೂರು ವರ್ಷಗಳ ಅವಧಿಯ ಠೇವಣಿಗಿಂತ ಕಡಿಮೆ

ಬಡ್ಡಿಯ ದರ ಇರಬಹುದು. ರೆಪೋ ದರ ಹೆಚ್ಚಳವಾದ ಸಂದರ್ಭಗಳಲ್ಲೆಲ್ಲಾ ಅದಕ್ಕನುಗುಣವಾಗಿ ಠೇವಣಿಗಳ ಮೇಲಿನ ಬಡ್ಡಿ ದರ ಏರಬೇಕೆಂಬ ನಿಯಮವೇನೂ ಇಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ರೆಪೋ ದರದ ಏರಿಕೆಯ ಜೊತೆಗೇ ಠೇವಣಿಗಳ ಮೇಲಿನ ಬಡ್ಡಿ ದರದಲ್ಲಿ ಸಹ ಸ್ವಲ್ಪಮಟ್ಟಿನ ಹೆಚ್ಚಳ ತಡವಾಗಿಯಾದರೂ ಆಗಿದೆ. ಮೇ 2022ರಲ್ಲಿ ಎಸ್.ಬಿ.ಐ.ನ ಐದು ವರ್ಷಗಳ ಮೇಲಿನ ಅವಧಿ ಠೇವಣಿಗಳ ಮೇಲಿನ ಬಡ್ಡಿ ದರ ಶೇ 5.5 ಇತ್ತು. ಅಂದಿನ ರೆಪೋ ದರ ಶೇ. 4.00 ಇತ್ತು. ಅಂದರೆ ಬ್ಯಾಂಕು ಶೇ. 1.5ರಷ್ಟರ ವ್ಯತ್ಯಾಸವನ್ನಿಟ್ಟುಕೊಂಡು ಲಾಭದಾಯಕವಾಗಿ ವ್ಯವಹಾರ ಮಾಡಲು ಸಾಧ್ಯವಾಗಿತ್ತಾದರೆ, ಇಂದು ಅದೇ ಬ್ಯಾಂಕು ಶೇ. 6.25ರ ರೆಪೋ ದರಕ್ಕನುಗುಣವಾಗಿ ಐದು ವರ್ಷಕ್ಕೆ ಮೇಲ್ಪಟ್ಟ ಠೇವಣಿಗಳ ಮೇಲಿನ ಬಡ್ಡಿ ದರವನ್ನು 6.25+1.5 ಅಂದರೆ ಶೇ 7.75ರಷ್ಟು ಸಾರ್ವಜನಿಕರಿಗೆ, ಶೇ. 8.25ರಷ್ಟು ಹಿರಿಯ ನಾಗರಿಕರಿಗೆ, ಅದರ ಉಳಿದ ಎಲ್ಲಾ ಲೆಕ್ಕಾಚಾರಗಳ ನಡುವೆ ಕೊಡಲು ಸಾಧ್ಯವೇ ನೋಡಬೇಕು. ಆದರೆ ಅಕ್ಟೋಬರ್ 2022ಕ್ಕೆ ಮೇಲಿನ ವ್ಯತ್ಯಾಸ ಶೇ ಒಂದಕ್ಕೆ ಇಳಿದಿದ್ದು (ರೆಪೋ : 5.9% ಐದು ವರ್ಷಕ್ಕೆ ಮೇಲ್ಪಟ್ಟ ಠೇವಣಿಗಳ ದರ ಶೇ. 6.9) ಈ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ.

ಸಧ್ಯಕ್ಕೆ ರೆಪೋ ದರದ ಹೆಚ್ಚಳದ ನಡುವೆಯೂ ಸಾಲದ ಬೆಳವಣಿಗೆ ಎರಡಂಕೆಯಲ್ಲಿ ಇದೆ ಎಂದು ಆರ್ ಬಿ ಐ ತನ್ನ ವರದಿಯಲ್ಲಿ ತಿಳಿಸಿದೆ. ಅಂದರೆ ಸಾಲ ನೀಡಲು ಬ್ಯಾಂಕುಗಳಿಗೆ ಹೆಚ್ಚಿನ ಸಂಪನ್ಮೂಲದ ಅವಶ್ಯಕತೆ ಇದೆ. ರೆಪೋ ದರದ ಹಿಂದಿನ ಹೆಚ್ಚಳದ ಪರಿಣಾಮ ಠೇವಣಿಗಳ ಬಡ್ಡಿ ದರದ ಮೇಲೂ ಸಾಕಷ್ಟು ಧನಾತ್ಮಕವಾಗಿ ಆಗಿದೆಯೆಂದೂ ಹಾಗೂ ಆರ್ ಬಿ ಐ ಇದರ ಪ್ರಸರಣೆಯನ್ನು ಸಹ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದೂ ಈ ಸಂದರ್ಭದಲ್ಲಿ ಆರ್ ಬಿ ಐ ತಿಳಿಸಿದೆ.

ತಕ್ಷಣಕ್ಕೆ ಹೊಸದಾಗಿ ಠೇವಣಿಗಳನ್ನು ಮಾಡಬಯಸುವವರು ಸ್ವಲ್ಪ ಹೆಚ್ಚಳಕ್ಕೆ ಕಾಯಬಹುದು. ಪರ್ಯಾಯವಾಗಿ ಅಲ್ಪ ಅವಧಿಗೆ ಠೇವಣಿ ಮಾಡಿ ಬಡ್ಡಿ ಹೆಚ್ಚಳವಾದಾಗ ದೀರ್ಘಾವಧಿಯ ಠೇವಣಿಗಳಲ್ಲಿ ಮರುಹೂಡಿಕೆ ಮಾಡಬಹುದು.

***

ನೆಲದಾಳದ ಗುಹೆ – ಇನ್ನರ್ ಸ್ಪೇಸ್ ಕ್ಯಾವೆರಿನ್

– ಜಿ.ವಿ. ನಿರ್ಮಲ



ಇತ್ತೀಚಿಗೆ ನಾನು ಮೇಘಾಲಯಕ್ಕೆ ಪ್ರವಾಸ ಹೋದಾಗ ಮಾಸ್ಮೆಮ್ಮೈ ಎನ್ನುವ ಗುಹೆಗೆ ಹೋಗಿದ್ದೆ. ಮೇಘಾಲಯದಲ್ಲಿ ಇಂತಹ 1580 ಗುಹೆಗಳಿವೆಯಂತೆ. ಇಲ್ಲಿನ ಗುಹೆಯನ್ನು ನೋಡಿದಾಗ ನಾನು 2003ರಲ್ಲಿ ಅಮೆರಿಕಾಗೆ ಹೋದಾಗ ಭೇಟಿ ನೀಡಿದ ವಿಭಿನ್ನ ವಿಸ್ಮಯ ಗುಹೆಯ ಅಂತರಾಳದ ನೋಟಗಳು ನನ್ನ ಕಣ್ಮುಂದೆ ಮತ್ತೊಮ್ಮೆ ಅನಾವರಣವಾಯ್ತು. ಅದೇ ನೆನಪುಗಳನ್ನು ನಿಮ್ಮ ಮುಂದಿಡಲು ಇಷ್ಟಪಡುತ್ತೇನೆ.

ಟೆಕ್ಸಾಸ್ ಪ್ರಾಂತ್ಯದಲ್ಲಿ ಜಾರ್ಜ್ ಟೌನಿನ ಆಸ್ಟಿನ್ ಬಳಿಯಿರುವ ಗುಹೆಯ ಹೆಸರು ಇನ್ನರ್ ಸ್ಪೇಸ್ ಕ್ಯಾವೆರಿನ್. ವಿಶೇಷವೆಂದರೆ ಇದನ್ನು ಕಂಡು ಹಿಡಿದವರು ಪ್ರಾಚ್ಯವಸ್ತು ಸಂಶೋಧಕರಾಗಲೀ, ಭೂಗರ್ಭ ವಿಜ್ಞಾನಿಗಳಾಗಲೀ ಅಲ್ಲ. ಟೆಕ್ಸಾಸ್ ಹೈ ವೇ ಇಲಾಖೆಯವರು! ಹೈ ವೇ ಇಲಾಖೆ 1963ರಲ್ಲಿ ಈ ಸ್ಥಳದಲ್ಲಿ ಅಂತರರಾಜ್ಯ ಹೆದ್ದಾರಿ–35 ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ಅದರ ಸಲುವಾಗಿ ಭೂಮಿಯನ್ನು ಕೊರೆದು ಪರೀಕ್ಷೆ ಮಾಡಲು ಪ್ರಾರಂಭಿಸಿದರು. ಕೊರೆಯುತ್ತಿದ್ದಂತೆ ಆ ಯಂತ್ರದ ಒಂದು ಮೊಳೆ ಕೊರಕಲಿನ (drill bit) ಒಳಗೇ ನುಸುಳಿ ಬಿದ್ದು ಹೋಯಿತಂತೆ. ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಆ ಜಾಗ ಬಿಟ್ಟು ಬೇರೆ ಕಡೆ ಕೊರೆದರು. ಅಲ್ಲಿಯೂ ಅದೇ ಕಥೆಯಾಯಿತು. ಹೀಗೆ ಮೂರು ನಾಲ್ಕು ಬಾರಿ ಪುನರಾವರ್ತನೆಯಾದಾಗ ಕುತೂಹಲದಿಂದ ಒಬ್ಬ ಮನುಷ್ಯ ತೂರುವಷ್ಟು ಗುಂಡಿ ಕೊರೆದು, ಕೊರೆಯುವ ಯಂತ್ರದ ಸಹಾಯದಿಂದಲೇ ಆ ತೂತಿನೊಳಗೆ ಒಬ್ಬ ಕೆಲಸಗಾರ ಇಳಿದಾಗ ಅವನಿಗೆ ಅಲ್ಲಿ ವಿವಿಧ ಬಣ್ಣಗಳಲ್ಲಿ ರೂಪುಗೊಂಡಿದ್ದ ಅತ್ಯದ್ಭುತ ವಿನ್ಯಾಸಗಳ ಸಮೂಹವೇ ಕಂಡುಬಂತು. ಅವೆಲ್ಲ ರಾಸಾಯನಿಕ ಕಲ್ಲುಗಳು (ಸುಣ್ಣ ಕಲ್ಲು, ಹೆಲಕ್‌ಟೈಟ್ಸ್) ಪ್ರಕೃತಿ ಸಹಜವಾದ ರಾಸಾಯನಿಕ ಕ್ರಿಯೆಯಿಂದ, ನೆಲದಾಳದಲ್ಲಿ ಶತಮಾನಗಳ ಶ್ರಮದಿಂದ ಸದ್ದಿಲ್ಲದೆ ನಿರ್ಮಿಸಿದ್ದ ವಿವಿಧ ಆಕರ್ಷಕ ಕಲಾಕೃತಿಗಳು! ರಸ್ತೆ ನಿರ್ಮಾಣ ತಂಡದವರು ಕೂಡಲೆ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರು. ಸರ್ಕಾರದವರು ರಸ್ತೆಯನ್ನು ಬೇರೆ ಕಡೆ ವರ್ಗಾಯಿಸಿ, ಗುಹೆಗಳನ್ನು ಜೋಪಾನವಾಗಿ ಅಗೆದು, ಸುಂದರ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಿದರು. ಇದೀಗ ಜಾರ್ಜ್‌ಟೌನ್ ಕಾರ್ಪೋರೇಷನ್ನವರು ಜೋಪಾನ ಮಾಡಿ, ಇದನ್ನು ಪ್ರವಾಸಿ ತಾಣದಂತೆ ನಿರ್ವಹಿಸುತ್ತಿದ್ದಾರೆ.

ಈ ಪ್ರಾಂತ್ಯದಲ್ಲಿ ಇಂತಹ ಹಲವು ಗುಹೆಗಳಿವೆಯಂತೆ. ಭೂಗರ್ಭ ವಿಜ್ಞಾನಿಗಳ ಅಧ್ಯಯನಗಳ ಪ್ರಕಾರ ಈ ಗುಹೆಯಲ್ಲಿ ರೂಪುಗೊಂಡಿರುವ ರಾಸಾಯನಿಕ ಶಿಲ್ಪಗಳು 10,000 ವರ್ಷಗಳಗೂ ಹಳೆಯವು. ಅತಿ ಪ್ರಾಚೀನ ಪ್ರಾಣಿಗಳ ಪಳಯುಳಿಕೆಗಳು, ಹೆಜ್ಜೆ ಗುರುತುಗಳೂ ದೊರಕಿವೆಯಂತೆ. ಅನಿರೀಕ್ಷಿತವಾಗಿ 1963ರಲ್ಲಿ ಬೆಳಕಿಗೆ ಬಂದ ನಂತರ ಹಿಮಯುಗದ (Ice age) ಕೆಲವು ಮಾಹಿತಿಗಳನ್ನು ತಿಳಿಯಲು ಸಾಧ್ಯವಾಯಿತಂತೆ.

ಗವಿಸಮೂಹ ಭೂಮಿಯ ಆಳದಲ್ಲಿ ೮೦ ಅಡಿ ಆಳದಲ್ಲಿ, 15,೦೦೦ ಅಡಿ ಉದ್ದವಿದ್ದು, ಅನೇಕ ಕವಲುಗಳಾಗಿ ಹಬ್ಬಿವೆ. ಗುಹೆಯೊಳಗೆ ಅಲ್ಲಲ್ಲಿ ಅಡಗಿಸಿಟ್ಟಿರುವ ದೀಪಗಳು, ರೂಪುಗೊಂಡಿರುವ ಆಕಾರ ಗಳ ಸೌಂದರ್ಯಕ್ಕೆ ಸ್ವಲ್ಪವೂ ಧಕ್ಕೆ ಮಾಡದಂತೆ, ಕಾಣಲು ಅಗತ್ಯವಾದಷ್ಟೇ ಬೆಳಕು ಹರಿಸುವಂತೆ ಅಚ್ಚುಕಟ್ಟಾಗಿ ಸಂಯೋಜಿತ ವಾಗಿವೆ. ಗುಹೆಯೊಳಗೆ ತಾಪಮಾನ ಮತ್ತು ಹವಾ ನಿಯಂತ್ರಣದ ವ್ಯವಸ್ಥೆಗಳೂ ಇವೆ. ಇದು ಕೇವಲ ವಿಹಾರ ತಾಣ ಮಾತ್ರವಲ್ಲ ಭೂಗರ್ಭ ಮತ್ತು ಪ್ರಾಣಿ ವಿಜ್ಞಾನಿಗಳ ಅಧ್ಯಯನ ತಾಣವೂ ಆಗಿದೆ.

ಅಂದಿನ ನಮ್ಮ ಮಾರ್ಗದರ್ಶಕ 2೦-22 ವಯಸ್ಸಿನ, ಚಟುವಟಿಕೆಯ, ಕಪ್ಪು ಅಮೆರಿಕನ್ ಬಾಲೆ. ಮೊತ್ತಮೊದಲು ಪ್ರವಾಸಿಗರನ್ನು ಗವಿಯ ಪ್ರವೇಶದ್ವಾರಕ್ಕೆ ಕರೆದೊಯ್ದಳು. ಅಲ್ಲಿ ಕರ್ನಾಟಕದ ಜೋಗ್, ಷಿಂಷಾ ಜಲ ವಿದ್ಯುತ್‌ಗಾರ ಗಳಲ್ಲಿರುವ ಟ್ರಾಲಿಯಂತಿರುವ ಚಿಕ್ಕ ರೈಲು ಗಾಡಿ ಸಿದ್ಧವಾಗಿ ನಿಂತಿತ್ತು. ಮಾರ್ಗದರ್ಶಕಿ 'ಆಹಾ! ಈಗ ಘಂಟೆಗೆ 2ಕಿಮೀ ವೇಗದಲ್ಲಿ ಬಹು ವೇಗವಾಗಿ ಓಡುವ ರೈಲಿನಲ್ಲಿ ಪಯಣಿಸಲಿದ್ದೀವಿ' ಎಂದು ನಗೆ ಚಟಾಕಿ ಹಾರಿಸಿದಳು. ಯಾವಾಗಲೂ ವೇಗವಾಗಿ ಓಡುವ ಅಮೆರಿಕನ್ನರಿಗೆ ಈ ವೇಗ (ನಿಧಾನ)ವೂ ಅಪರೂಪವೇ. ಅವಳ ಮಾತಿಗೆ ಎಲ್ಲರೂ ನಕ್ಕಾಗ ನಮ್ಮ ಭಯವೂ ಸ್ವಲ್ಪ ಮಟ್ಟಿಗೆ ದೂರವಾಯಿತು. ಭೂಗರ್ಭಕ್ಕೆ ತಲುಪಿದ ನಂತರ ಅವಳು ಹೇಳುವುದನ್ನು ಸ್ವಲ್ಪವೂ ಬಿಡದೆ ಕೇಳಬೇಕೆನ್ನುವ ಕಾತುರ ಮತ್ತು ಅದಕ್ಕಿಂತ ಹೆಚ್ಚಾಗಿ ಗುಹಾಸಂಕೀರ್ಣದಲ್ಲಿ ನಾವು ಅವಳಿಂದ ಕಳೆದು ಹೋಗಬಾರದೆನ್ನುವ ತವಕದಿಂದ ಅವಳನ್ನು ಎಡೆಬಿಡದೆ ಹಿಂಬಾಲಿಸಲು ಸಿದ್ಧರಾದೆವು.

ಅಬ್ಬಾ! ಒಳಗಿನ ದೃಶ್ಯಗಳನ್ನು ನೋಡಿ ಅಚ್ಚರಿಯಾಯಿತು. ಅನೇಕ ಸಾವಿರ ವರ್ಷಗಳು ಪ್ರಕೃತಿಯಲ್ಲಾದ ಬದಲಾವಣೆಗಳಿಂದ ಸುಣ್ಣ ಕಲ್ಲು, ಹೆಲಕ್ಟೈಟ್ ಮತ್ತಿತರ ಕೆಲವು ಪದಾರ್ಥಗಳು ಹವಾಮಾನ, ಉಷ್ಣತೆಗೆ ಅನುಗುಣವಾಗಿ ಘನೀಕೃತಗೊಂಡು, ಚಿತ್ರವಿಚಿತ್ರ ಆಕಾರಗಳನ್ನು ತಳೆದು ನಿಂತಿದ್ದವು. ವಿವಿಧ ಬಣ್ಣಗಳು, ಆಕಾರಗಳು! ಒಂದಕ್ಕಿಂತ ಮತ್ತೊಂದು ಸುಂದರವಾಗಿತ್ತು. ಆಕಾರಗಳಿಗೆ ತಕ್ಕಂತೆ `Flowing stone of Time', `Lake of the moon', `Soda straw balcony' ಇತ್ಯಾದಿ ಬೇರೆ ಬೇರೆ ಹೆಸರುಗಳನ್ನೂ ಕೊಟ್ಟಿದ್ದಾರೆ.



ಫ್ಲೋಯಿಂಗ್ ಸ್ಟೋನ್ ಆಫ್ ಟೈಮ್



ಸೋಡಾ ಸ್ಟ್ರಾ ಗ್ಯಾಲರಿ



ಕಾಲಮ್ ಇನ್ ದ ಕೇವ್

ಅಮೆರಿಕಾದವರು ಚಂದ್ರನ ಮೇಲಿಳಿದಾಗ ತೆಗೆದಿರುವ ಚಿತ್ರವನ್ನೇ ಹೋಲುವ ಒಂದು ಭಾಗಕ್ಕೆ `Lunar Landscape' ಎಂದಿದ್ದಾರೆ. ಮತ್ತೊಂದೆಡೆ ಸುಂದರವಾದ ಅಲಂಕಾರಿಕ ದೀಪಸಮೂಹದ (ಚಾಂಡಲಿಯರ್) ಆಕಾರವನ್ನು ಕಾಣಬಹುದು. ಅನೇಕ ಕಡೆ 'ಸ್ಟ್ರಾ' ಆಕಾರದ ನಳಿಕೆಗಳು ರೂಪುಗೊಂಡು, ಅವುಗಳಿಂದ ನೀರು ತೊಟ್ಟಿಕ್ಕುತ್ತಿರುತ್ತದೆ. ಆಕಾಶದಲ್ಲಿ ವಿವಿಧ ಆಕಾರದ ಮೋಡಗಳನ್ನು ನೋಡಿದಾಗ, ಆ ಮೋಡ ಹಾಗೆ ಕಾಣಿಸುತ್ತಿದೆ, ಈ ಮೋಡ ಹೀಗೆ ಕಾಣಿಸುತ್ತಿದೆ ಎಂದು ನಾವು ಭಾವಿಸುವುದಿಲ್ಲವೇ? ಹಾಗೆ ನಮ್ಮ ಕಲ್ಪನೆಗೆ ತಕ್ಕಂತೆ ಆಕಾರಗಳನ್ನು ಕಾಣಬಹುದು. ಆಕಾರಕ್ಕೆ ತಕ್ಕಂತೆ ಕಥೆಗಳನ್ನೂ ಹೆಣೆದಿದ್ದಾರೆ. ನನಗೆ 'ಶ್ರೀಕೃಷ್ಣನಂತೊಂದು ಮುಗಿಲು, ಅಲ್ಲಿ ರಾಧೆಯಂತಿನ್ನೊಂದು ಮುಗಿಲು' ಕವನ ನೆನಪಾಯಿತು. ಒಂದು ವಿನ್ಯಾಸ ಹಳೆಯ ಕಾಲದ ಅರಮನೆಯ (Castle) ತರಹ ಕಾಣುತ್ತದೆ. ಅದನ್ನು ತೋರಿಸಿ ಆ ಅರಮನೆಯಲ್ಲಿ ಒಬ್ಬ ಸುಂದರವಾದ ರಾಜಕುಮಾರಿ ಇದ್ದಾಳೆ. ಅವಳನ್ನು ನೋಡಲು ಒಬ್ಬ ರಾಜಕುಮಾರ ಬಹಳ ದೂರದಿಂದ ಕುದುರೆಯ ಮೇಲೆ ಬಂದಿದ್ದಾನೆ. ಆದರೆ ಅಲ್ಲಿ ಕಾಯುತ್ತಿರುವ ರಾಕ್ಷಸ ಅವನನ್ನು ಅಷ್ಟು ಸುಲಭವಾಗಿ ಒಳಗೆ ಬಿಡುವುದಿಲ್ಲ- ಇತ್ಯಾದಿ. ಆಕಾರಗಳಿಗೆ ತಕ್ಕಂತೆ ಪಾತ್ರಗಳನ್ನು ಕಟ್ಟಿ, ಸ್ವಾರಸ್ಯಕರವಾಗಿ ಕಥೆ ಹೇಳಿ ಎಲ್ಲರ ಗಮನವನ್ನೂ ಹಿಡಿದಿಡುತ್ತಿದ್ದಳು ಮಾರ್ಗದರ್ಶಕಿ. ಆ ಆಕಾರಗಳು ಶಾಸ್ತ್ರಬದ್ಧವಾಗಿ ಕಡೆದು ಮಾಡಿದ ಶಿಲ್ಪ ಕಲಾಕೃತಿಗಳಂತೆಯೇ ಮನಸ್ಸಿಗೆ ಆನಂದವನ್ನು ನೀಡಿ, ನಮ್ಮ ಕಲ್ಪನೆಯ ಮೂರ್ತಿಗಳಾಗಿ ಮೆರೆಯುತ್ತವೆ.

ಮಧ್ಯೆ ಮಧ್ಯೆ ಎಲ್ಲಿಂದಲೋ ಹರಿದು ಬಂದ ನೀರು ಯಾರದೋ ತಲೆಯ ಮೇಲೆ ಬಿದ್ದಾಗ ಅವರು 'ಹೋ' ಎಂದು ಕೂಗಿದರೆ, ಆ ಬಾಲೆ 'ನೀವು ಅದೃಷ್ಟವಂತರು. ಅದು ಅದೃಷ್ಟದ ಹನಿ' ಎಂದು ಕೂಗಿ ನಗಿಸುತ್ತಿದ್ದಳು.

ಕೆಲವೊಮ್ಮೆ ದರ್ಶಕರೇ `Hay! I am also lucky' ಎಂದು ಕೂಗುತ್ತಿದ್ದರು. ಕೆಲವು ಜಾಗಗಳಲ್ಲಿ ಜಾರಿಕೆಯಿಂದ ನಡೆಯುವುದೇ ಕಷ್ಟವಾಗುತ್ತಿತ್ತು. ನಾವು ಅದೃಷ್ಟವಂತರಾಗದಿದ್ದರೂ ಸರಿ. ಕಾಲು ಜಾರಿ ಬಿದ್ದು ದುರಾದೃಷ್ಟವಂತರಾಗಬಾರದೆಂದು ಬಹಳ ಜೋಪಾನವಾಗಿ ನಡೆಯುತ್ತಿದ್ದೆವು.

ಸುತ್ತಾಟ ಮುಗಿಯುತ್ತಿದ್ದಂತೆ ಮಾರ್ಗದರ್ಶಕಿ 'ಈಗ ಕತ್ತಲೆಗೆ ಹೆದರುವ ವ್ಯಕ್ತಿಗಳು ಮತ್ತು ಮಕ್ಕಳು ಎಚ್ಚರಿಕೆಯಾಗಿ ನಿಲ್ಲಿ. ಕೆಲವು ಸೆಕೆಂಡುಗಳು, ದೀಪ ಆರಿಸುತ್ತೇನೆ' ಎಂದು ಹೇಳಿ, ದೀಪ ಆರಿಸಿದಳು. ಅಬ್ಬಾ! ಎಂತಹ ಅನುಭವ. ಕಣ್ಣು ಕೆಕ್ಕರಿಸಿ, ಬಿಚ್ಚುಗಣ್ಣು ಮಾಡಿಕೊಂಡು ನೋಡಿದರೂ ಪಕ್ಕದಲ್ಲಿರುವವರೂ ಕಾಣದಂತಹ ಸಂಪೂರ್ಣ ಕತ್ತಲು. ಇಂತಹ ಸಂಪೂರ್ಣ ಕತ್ತಲಿನ ಅನುಭವ ನಮಗೆ ಸಿಗುವುದು ಕಷ್ಟಸಾಧ್ಯವೇ ಸರಿ. ಎಲ್ಲಿಂದಲಾದರೂ ಒಂದು ಬೆಳಕಿನ ಕಿರಣ ತೂರಿಬಂದು ಕತ್ತಲ ಪೂರ್ಣತೆಯನ್ನು ಕುಂಠಿತಗೊಳಿಸುತ್ತದೆ. ಮತ್ತೆ ಅವಳು ಗುಂಡಿ ಅದುಮಿ ಬೆಳಕು ಚೆಲ್ಲಿದಾಗ ಎಲ್ಲರೂ ಅವರವರಿಗೇ ಅರಿವಿಲ್ಲದಂತೆ 'ಓ' ಎಂದು ಉದ್ಗರಿಸುತ್ತಾ ಬೆಳಕನ್ನು ಸ್ವಾಗತಿಸಿದೆವು. ಮೈಸೂರು ಅರಮನೆಯ ದೀಪಗಳು ಝಗ್ಗನೆ ಒಮ್ಮಲೇ ಹೊತ್ತಿದಾಗಲೂ ಜನ ಕೂಗುತ್ತಾರಲ್ಲವೆ? ಹಾಗೆ. ನಿಜಕ್ಕೂ ಆ ದಿನ ನನ್ನ ಜೀವಮಾನದ ಅವಿಸ್ಮರಣೀಯ ದಿನ.

ಭಾರತದಲ್ಲಿಯೂ ಬೋರಾ ಮತ್ತು ಬೇಲಮ್ ಗವಿಸಮೂಹಗಳಲ್ಲಿ ನೈಸರ್ಗಿಕ ಸ್ಟಾಲಕ್‌ಟೈಟ್ಸ್ ಮತ್ತು ಸ್ಟಾಲಗ್‌ಮೈಟ್‌ಗಳು ವಿವಿಧ ರೂಪ ತಾಳಿ, ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ನಮ್ಮ ಜನರ ಮನೋಭಾವಕ್ಕೆ, ಕಲ್ಪನೆಗೆ ತಕ್ಕಂತೆ ಇವುಗಳಿಗೆ ಶಿವ. ದೇವಸ್ಥಾನ, ಮಸೀದಿ, ಚರ್ಚು ಇತ್ಯಾದಿ ಹೆಸರುಗಳನ್ನು ಕೊಟ್ಟಿದ್ದಾರೆ. ಆಂಧ್ರಪ್ರದೇಶದ ಇಂತಹ ನಿಸರ್ಗದ ಅದ್ಭುತವನ್ನು ನೋಡಿ ಆನಂದಿಸಬಹುದಲ್ಲವೇ?

***

ರಾತ್ರಿ ಗಸ್ತಿನ ಸಮಾಜಸೇವೆ

– ಮಹಾಬಲ

ಒಂದು ದಿನ ಸಾಯಂಕಾಲ ಬಡಾವಣೆಯ ಕೆಲವು ವಯಸ್ಕ ಗೃಹಸ್ಥರ ತಂಡ ಗಣಪತಿ ಹಬ್ಬದಂದು ಮನೆಮನೆಗೆ ದಾಳಯಿಡುವ ಬಾಲಕರೋಪಾದಿಯಲ್ಲಿ ಮನೆಗೆ ದಾಳ ಇಟ್ಟಿತು.

ಅವರು ಯಾವುದೋ ಸಾಮಾಜಿಕ ಅಭಿಯಾನಕ್ಕೆ ಬಂದಂಥ ಬಲವಾದ ಇಂಗಿತ ಕಂಡಿತು.

ಹಿರಿಯರೂ ಮೈಕೋ ಕಾರ್ಖಾನೆಯ ಉನ್ನತ ಹುದ್ದೆಯಲ್ಲಿದ್ದವರೂ ಆದ ರಾಜಾರಾಂ ಗಂಟಲು ಸರಿಪಡಿಸಿಕೊಂಡು, "ನೋಡಿ ನಿಮಗೂ ತಿಳಿದಿರಬಹುದು, ಬಡಾವಣೆಯಲ್ಲಿ ಇತ್ತಿತ್ತಲಾಗಿ ಕಳ್ಳರ ಕಾಟ ಹೆಚ್ಚಾಗಿದೆ. ಹಿತ್ತಲಿನಲ್ಲಿ ಸಿಕ್ಕ ಯಾವ ವಸ್ತುವನ್ನೂ ಬಿಡುತ್ತಿಲ್ಲ. ಬಕೆಟ್ಟು, ಚೊಂಬು, ಬ್ರಷ್ ಯಾತಕ್ಕೂ ಉಳಿಗಾಲವಿಲ್ಲ "

ಇನ್ನೂ ಕತೆ ಮುಂದುವರೆದಿತ್ತು. ನಾನು ಮಧ್ಯೆ ಪ್ರವೇಶಿಸಿ "ಅದಕ್ಕೇ" ಎಂದೆ. ನನ್ನ ಆತುರ ಮತ್ತೊಬ್ಬ ಸದಸ್ಯ ರಂಗಸ್ವಾಮಿಯವರಿಗೆ ಸಹ್ಯವಾಗಲಿಲ್ಲ. “ಅದನ್ನೇ ಯಜಮಾನ್ರು ಹೇಳುತ್ತಿದ್ದರು. ನೀವು ಕೇಳಬೇಕು ಕಿವಿಗೊಟ್ಟು" ಎಂದು ಸ್ವಲ್ಪ ಜೋರಾಗಿಯೇ ತಿವಿದರು.

ಅದನ್ನು ಕೇಳಿ ಅವರ ಫರ್ಮಾನಿನಂತೆ ಕಿವಿ ಕೊಟ್ಟೆ.

ರಾಜಾರಾಂ ಮುಂದುವರೆಸುತ್ತ, "ಅದಕ್ಕೇ ಸ್ಥಳೀಯ ಪೋಲೀಸ್ ಸ್ಟೇಷನ್ನಿನಲ್ಲೂ ಮಾತನಾಡಿದ್ದೇವೆ. ಅಲ್ಲಿನ ಇನ್ಸ್‌ಪೆಕ್ಟರು. ನಾವು ಇರೋ ಸಿಬ್ಬಂದಿಯಲ್ಲೇ ನಿಮ್ಮ ಬಡಾವಣೆಗೆ ಇಬ್ಬರನ್ನು ಗಸ್ತು ತಿರುಗಲು ಕೊಟ್ಟಿದ್ದೇವೆ. ಅಷ್ಟಕ್ಕೂ ಬಕೆಟ್ಟು, ಚೊಂಬು ಇತ್ಯಾದಿಗಳಿಗೆ ಜಾಸ್ತಿ ಗಸ್ತು ಕೊಟ್ಟರೆ ಉಳಿದವುಗಳ ಗತಿ ಏನು? ಬೇಕಾದರೆ ನಿಮ್ಮ ಬಡಾವಣೆ ನಿವಾಸಿಗಳ ತಂಡ ಕಟ್ಟಿಕೊಂಡು ಗಸ್ತು ತಿರುಗಿ, ನಮ್ಮ ಪಿ.ಸಿ.ಗಳು ನಿಮ್ಮ ಮಾನಸಿಕ ಬೆಂಬಲಕ್ಕೆ ಅಲ್ಲೇ ಓಡಾಡುತ್ತಿರುತ್ತಾರೆ" ಎಂದರು.

"ಅದಕ್ಕೇ ರಾಯರು ರಾತ್ರಿ ಗಸ್ತು ತಂಡದ ಬಗ್ಗೆ ಯೋಚಿಸ್ತಾ ಇದಾರೆ. ನಾವು ದಿನವಾರು ಗಸ್ತು ಕಾಯುವವರ ಪಟ್ಟಿ ಸಿದ್ಧ ಮಾಡ್ತಾ ಇದೀವಿ. ನೀವು ಯಾವತ್ತು ಬರ್ತೀರಾ ಹೇಳಿ" ಎಂದು ಮತ್ತೊಬ್ಬ ಸ್ವಯಂಸೇವಕ ನನ್ನ ಅಭಿಪ್ರಾಯಕ್ಕೇ ಅವಕಾಶ ನೀಡದಂತೆ ಪ್ರಸ್ತಾಪ ಮುಂದಿಟ್ಟ.

ಗತ್ಯಂತರವಿಲ್ಲದೆ ಭಾನುವಾರ ಆಯ್ದುಕೊಂಡೆ. ನಾನು ಆಗ ನಾನು ಸೋಮವಾರ ರಜೆ ಇದ್ದ ಬ್ಯಾಂಕ್ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದದೇ ಅದಕ್ಕೆ ಕಾರಣ. ಅಂಥದೇ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ ಗೆಳೆಯ ಶ್ರೀನಾಥನೂ ಭಾನುವಾರ ಆಯ್ದುಕೊಂಡ.

"ರಾತ್ರಿ ಒಂದೂವರೆ ಸುಮಾರಿಗೆ ಮನೆಯ ಹತ್ರ ಬಂದು ಹೆಸರು ಕೂಗ್ತೀವಿ. ತಡಮಾಡದೆ ಹೊರಗೆ ಬನ್ನಿ. ತಲೆಗೆ ಟೋಪಿ, ಸ್ವೆಟರ್, ಕೈಲೊಂದು ಕೋಲು ಇರತಕ್ಕದ್ದು." ಆಜ್ಞೆ ನೀಡುವಂತೆ ಹೇಳಿದರು ಆ ಸ್ವಯಂಸೇವಕರು.

ಆ ಶುಭಗಳಿಗೆ ಬಂದೇಬಿಟ್ಟಿತು. ಈ ಗಸ್ತಿನ ಪಟಾಲಂ ಮನೆ ಹತ್ತಿರ ಬಂದು ಹುಯಿಲೆಬ್ಬಿಸಿ ಮನೆಯಲ್ಲಿದ್ದವರಿಗೆ ಎಚ್ಚರಿಸುವುದು ಬೇಡವೆಂದು ನಾನೇ ಮನೆಗೆ ಬೀಗ ಹಾಕಿಕೊಂಡು ಹೊರಬಂದು ನಿಂತೆ. ಆದರೂ ಆ ಉತ್ಸಾಹಿ ಜನ ನನ್ನ ಹೆಸರನ್ನು ಕಿರುಚಿಕೊಂಡೇ ಬಂದರು. ಒಬ್ಬರು ಕುಲಾವಿ, ಸ್ವೆಟರ್ರು, ಮತ್ತೊಬ್ಬರು ಫಾರಸ್ಟ್ ರೇಂಜರಿನಂಥ ಹ್ಯಾಟು, ಓವರ್‌ಕೋಟು, ಮಗದೊಬ್ಬರು ಹೆಲ್ಮೆಟ್, ವಾಕಿಂಗ್ ಸ್ಟಿಕ್ಕು, ತರಹೆವಾರಿಯಾಗಿತ್ತು, ಅವರುಗಳ ಮೋಜಿನ ವೇಷ.

ಮುಂದಾಳು ರಾಜಾರಾಂ ತಂಡವನ್ನು ಅವರರವರ ಮನೆಯ ಹತ್ತಿರದ ಆಧಾರದಲ್ಲಿ ಎರಡು ಗುಂಪು ಮಾಡಿ ಬೇರೆ ಬೇರೆ ಕಳಿಸಿದರು. ಯಾವುದೇ ಅನುಮಾನಾಸ್ಪದ ವ್ಯಕ್ತಿ ಕಂಡರೆ ಕೂಲಂಕಷ ತನಿಖೆ ನಡೆಸಲು ಹೇಳಿದರು. ವಾರದ ಬೇರೆ ದಿನಕ್ಕೂ ಹೀಗೇ ಬೇರೆ ಬೇರೆ ತಂಡಗಳ ತೈನಾತಿಯಾಗಿತ್ತು.

ಆ ತಂಡದಲ್ಲಿ ನಾನು ಮತ್ತು ಶ್ರೀನಾಥ ಇಬ್ಬರೇ ಬ್ಯಾಂಕಿನವರು. ಉಳಿದವರೆಲ್ಲ ಮೈಕೋ ಕಾರ್ಖಾನೆಯವರು. ಅವರು ಬಹುಪಾಲು ಕಾರ್ಖಾನೆ ವಿಷಯವನ್ನೇ ಮಾತನಾಡುತ್ತಿದ್ದರು (ಬ್ಯಾಂಕಿನವರು ಬ್ಯಾಂಕಿನ ಬಗ್ಗೆ ಮಾತನಾಡಿದ ಹಾಗೆ). ದಾರಿಯಲ್ಲಿ ಸೆಕಂಡ್ ಷೋಗೆ ಹೋಗಿ ಬರುತ್ತಿದ್ದ ಪಡ್ಡೆಗಳು, ಸ್ಕೂಟರ್ ಕೆಟ್ಟು ತಳ್ಳಿಕೊಂಡು ಬರುತ್ತಿದ್ದ ಬಡಪಾಯಿಗಳು ನಮ್ಮ ತನಿಖೆಯ ಜಾಲಕ್ಕೆ ನರಳುತ್ತಿದ್ದರು. ಒಮ್ಮೆಯಂತೂ ಪರಸ್ಥಳಕ್ಕೆ ಮದುವೆಗೆ ಹೋಗಿ ತಡವಾಗಿ ಮನೆಗೆ ಬರುತ್ತಿದ್ದ ಕಾರಿನವರನ್ನು ತಡೆದು ನಮ್ಮ ತಲೆಹರಟೆ ಪ್ರಶ್ನಾವಳಿ ಆರಂಭಿಸಿದಾಗ ಅಲ್ಲಿದ್ದ ಹಿರಿಯರು ಒಮ್ಮೆಲೇ ರೇಗಿ, "ಯಾರ್ರೀ ನೀವು? ನಿಮಗೆ ಯಾರು ಈ ಅಧಿಕಾರ ಕೊಟ್ಟರು" ಎಂದಿದ್ದಲ್ಲದೆ ಮುಂದೆ ಬಂದ ಇನ್ಸಪೆಕ್ಟರರ ಜೀಪು ನಿಲ್ಲಿಸಿ ದೂರು ನೀಡಿದ್ದರು. ಮುಂದೆ ರಾಜಾರಾಂ ಅವರಿಗೆ ಸಿಕ್ಕ ಇನ್ಸಪೆಕ್ಟರರು. "ಒಳ್ಳೆ ಕೆಲಸ ಮಾಡುತ್ತಿದ್ದೀರಿ. ಆದರೆ ಇಂಥ ದೂರು ಬರದಂತೆ ನೋಡಿಕೊಳ್ಳಿ" ಎಂದು ನವಿರಾಗಿ ಎಚ್ಚರಿಸಿದ್ದರು.

ಆರಂಭದ ಸೋಡಾ ಬಾಟಲಿ ಉತ್ಸಾಹ ನಿಧಾನವಾಗಿ ಇಳಿಯತೊಡಗಿತು. "ಆ ತಂಡದವರು ಮೂರು ಗಂಟೆಗೇ ವಾಪಸು ಮನೆ ಸೇರುತ್ತಾರೆ. ನಾವು ಮಾತ್ರ ನಾಲ್ಕು ಗಂಟೆವರೆಗೆ ಇರಬೇಕು" ಎಂಬ ಪರಸ್ಪರ ಆಪಾದನೆಯ ಅನುಮಾನಗಳು, ಮನೆಯ ಹತ್ತಿರ ಹೋಗಿ ಬೊಬ್ಬೆ ಹಾಕಿದರೂ ಮಂಡಿನೋವು, ಹೊಟ್ಟೆನೋವುಗಳ ನೆಪ ಒಡ್ಡಿ ಚಕ್ಕರ್ ಹೊಡೆವವರು, ಇಂಥವರ ಪರಂಪರೆ ಬೇರೂರತೊಡಗಿತು. ಕೆಲವು ದಿನವಂತೂ ಹರಿಕತೆದಾಸ, ಹಾರ್ಮೋನಿಯಂ ವಾದಕ, ತಬಲಾ ವಾದಕ ಎನ್ನುವಂತೆ ಮೂರೇ ಜನ, ಮತ್ತೊಮ್ಮೆ ಸಂಗ್ಯಾ-ಬಾಳ್ಯಾ ಎಂಬಂತೆ ಇಬ್ಬರೇ ಎನ್ನುವ ಸ್ಥಿತಿಯನ್ನೂ ತಲುಪಿತು. ಯಾವುದೇ ಯುದ್ಧ ವಿದ್ಯೆಯ ತಾಲೀಮು ಇಲ್ಲದ ಇಷ್ಟು ಕಡಿಮೆ ಸಂಖ್ಯೆಯ ಸ್ವಯಂಸೇವಕರ ಮೇಲೆ ದುಷ್ಕರ್ಮಿಗಳ ತಂಡವೇ ಎರಗಿಬಿದ್ದರೆ ಏನು ಗತಿ ಎಂಬ ಭಯವೂ ಎಲ್ಲರನ್ನೂ ಕಾಡಿತು.

ಈ ನಡುವೆ ರಾಜಾರಾಂ ಅವರಿಗೆ ಸಿಕ್ಕ ಇನ್ಸ್‌ಪೆಕ್ಟರ್ ಪೂವಯ್ಯ, "ರಾಯರೇ, ನಮಗೆ ಬಲವಂತ ಕರ್ಮ ಈ ಗಸ್ತು ತಿರುಗೋದು. ಅದನ್ನು ಜವಾಬ್ದಾರಿಯಿಂದಲೂ ಮಾಡುತ್ತೇವೆ. ನಿಮಗೇಕೆ ಈ ಉಪದ್ರ? ಸುಮ್ಮನೆ ಮನೆಯಲ್ಲಿ ಮಲಗಿ" ಎಂದರಂತೆ.

ನಮಗಂತೂ ಈ ಮಾತುಗಳು ಸಂಜೀವಿನಿಯಷ್ಟೇ ಅಪ್ಯಾಯಮಾನವಾಗಿ ಕಂಡು. ಎರಡು ತಿಂಗಳಿಗೇ ರಾತ್ರಿ ಗಸ್ತಿನ ಸಮಾಜ ಸೇವೆ ಅವಸಾನ ಕಂಡಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಬಿಡಿ.

***

ಹೀಗೊಂದು ಗೃಹ ಪ್ರವೇಶ

-ಕೆ.ಎನ್.ಭಗವಾನ್

ನನ್ನ ಕಾರ್ಖಾನೆ ಬದುಕಿನಲ್ಲಿ ಕೊಂಚ ತಡವಾಗಿ ಗೆಳೆತನಕ್ಕೆ ಬಂದವರಲ್ಲಿ ಗೋ.ಶ್ರೀ. ಒಬ್ಬರು. ಆರಂಭದಲ್ಲಿ ಸಮಾಜವಾದ, ಬಂಡಾಯ ಸಾಹಿತಿಗಳ ಗುಂಪಿಗೆ ಹತ್ತಿರವಾಗಿದ್ದ ವ್ಯಕ್ತಿ ಎಂದು ಅಂದಾಜಿಗೆ ಸಿಕ್ಕಿದ್ದ ಈ ವ್ಯಕ್ತಿ ನನಗೆ ಆಪ್ತನಾಗಿದ್ದು ಬಹುಶಃ ಆತನ ಕಟ್ಟಾ ಕನ್ನಡಾಭಿಮಾನ, ಸರಳ ಬದುಕು, ಅಂಧ ಸಂಪ್ರದಾಯಗಳ ನಿರಾಕರಣೆ- ಇಂಥ ಗುಣಗಳಂದಲೇ ಇದ್ದೀತು. ಜೊತೆಗೆ 'ಇಂದು ಇಂದಿಗೆ, ನಾಳೆ ನಾಳೆಗೆ' ಎಂಬ ವಿಷಯದಲ್ಲಿ ನನ್ನಂತೆ!

ನನಗೆ ಈತನ ಭೇಟಿ ಮೊದಲು ಆಗಿದ್ದೆಲ್ಲಿ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ.. ಆತ ಕಾರ್ಮಿಕ, ನಾನು ಅಧಿಕಾರಿ, ಅದೂ ಸಹ ಬೇರೆಬೇರೆ ಇಲಾಖೆಗಳಲ್ಲಿ. ಅಂದಾಗ ಪರಿಚಯವಷ್ಟೆ ಸ್ನೇಹದ ಮಟ್ಟಕ್ಕೆ ಹೋಗಲಾರದು. ಅದೊಂದು ದಿನ ಈತ ನನ್ನನ್ನು ಹುಡುಕಿಕೊಂಡು ಇಲಾಖೆಗೆ ಬಂದ. 'ನಾನು ಕರ್ನಾಟಕ ಕಲಾ ಸಂಘದ ಕಾರ್ಯದರ್ಶಿ. ಎರಡು ತಿಂಗಳ ನಂತರ ಸಂಘಕ್ಕೆ ಇಪ್ಪತ್ತೈದು ವರ್ಷ ತುಂಬುತ್ತೆ. ಆ ಸಂಬಂಧ ವಿಶೇಷ ಸ್ಮರಣ ಸಂಚಿಕೆಯನ್ನು ಸಿದ್ಧಪಡಿಸಬೇಕಿದೆ. ಅದರ ಸಂಪಾದಕತ್ವ ನನ್ನ ಹೆಗಲಿಗೆ ಬಿದ್ದಿದೆ. ನೀವು ಮೂರ್ನಾಲ್ಕು ಪುಟಗಳ ಒಂದು ಹಾಸ್ಯ ಲೇಖನ ಬರೆದು ಕೊಡಬೇಕು' ಅಂತ ಕೇಳಿಕೊಂಡ. ನಾನು 'ಅರೆ! ನಾನು ಲೇಖಕ ಎಂದು ನಿಮಗೆ ಯಾರು ಹೇಳಿದರು?' ಎಂದೆ. ಹಾಗೇ ಎಚ್‌ಎಒಜಿ ಸೆಕ್ರೆಟರಿ ಅಕ್ಕಿಕಾಳು ನಂಜಪ್ಪ ಅವರ ಕಿರಣ ಮಾಸ ಪತ್ರಿಕೇಲಿ ನಾನು ಬರೆದಿದ್ದ ಸಂಗತಿ ಹಿಡಿದೇ ಬಂದಿದ್ದರಿಂದ ಒಪ್ಪಲೇಬೇಕಾಯ್ತು.. ಹೀಗೆ ಪರಿಚಯವಾಗಿದ್ದು ಗೆಳೆಯ ಗೋ.ಶ್ರೀ.

ಹೀಗೇ ಮುಂದೊಂದು ದಿನ ಅರ್ಧ ಪುಟದಷ್ಟು ಟೈಪಾಗಿದ್ದ ಕಾಗದವೊಂದನ್ನು ನನ್ನ ಕೈಲಿರಿಸಿ, 'ನಾಳೆ ನನ್ನ ಹೊಸ ಮನೆಯ ಗೃಹ ಪ್ರವೇಶ ಇಟ್ಕೊಂಡಿದ್ದೀನಿ. ಇಪ್ಪತ್ತೈದು ಜನ ಸಾಹಿತ್ಯ ಗೆಳೆಯರನ್ನಷ್ಟೆ ಕರೆದಿರೋದು. ಬೆಳಗ್ಗೆ ಹತ್ತು ಗಂಟೆಗೆ ಬಂದ್ರೆ ಸಾಕು' ಎಂದ. ಆಮಂತ್ರಣ ಪತ್ರದಲ್ಲಿ ಸಾಂಪ್ರದಾಯಿಕ ಎನಿಸುವ ಯಾವೊಂದು ಅಂಶವೂ ಇರಲಿಲ್ಲ. ಕವಿಗೋಷ್ಟಿ, ಮಿತ್ರ ಭೋಜನದ ಸಮಯ, ಮನೆಯ ವಿಳಾಸ ಇಷ್ಟೆ!

ಗೆಳೆಯನ ಮುಖವನ್ನು ಅಚ್ಚರಿಯಿಂದ ನೋಡಿದೆ. ಆತ 'ಅನೇಕರು ಗ್ರಹ ಪ್ರವೇಶ ಸಮಾರಂಭಕ್ಕೆ ಖರ್ಚು ಮಾಡುವಷ್ಟು ಹಣವನ್ನು ಬಡವರು ಒಂದು ಮದುವೆಗೂ ಮಾಡಲಾರರು. ನನ್ನದು ಇಪ್ಪತ್ತು, ಮೂವತ್ತು ಅಡಿಗಳ ನಿವೇಶನ. ಅದು ಬಿಡಿಎಯಿಂದ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮುಂಜೂರಾಗಿದ್ದಂಥದು. ಅವರಿಗೆ ಐದು ಸಾವಿರ ಹೆಚ್ಚಿಗೆ ಕೊಟ್ಟು ನನ್ನ ಹೆಸರಿಗೆ ಮಾಡಿಸ್ಕೊಂಡೆ. ಪಿ.ಎಫ್.ನಿಂದ ಸಾಲ ತಗೊಂಡು ಮನೆ ಕಟ್ಟಿಸಿದ್ದೀನಿ. ಖಂಡಿತ ಬರಬೇಕು' ಎಂದು ಮನವಿ ಮಾಡಿದ್ದು ನನಗೆ ಅನುಕಂಪ ಹುಟ್ಟಿಸಿತು.

ಕುಮಾರಸ್ವಾಮಿ ಲೇಔಟಿನಲ್ಲಿ ಆಗ ಬಹಳಷ್ಟು ನಿವೇಶನಗಳು ಖಾಲಿ ಇದ್ದವು. ಗೆಳೆಯ ತನ್ನ ಮನೆಗೆ ಅಭಿಮುಖವಾಗಿದ್ದ ಖಾಲಿ ನಿವೇಶನದಲ್ಲಿ ಶಾಮಿಯಾನ ಹಾಕಿಸಿ ಪ್ಲಾಸ್ಟಿಕ್ ಕುರ್ಚಿ, ಊಟದ ಮೇಜುಗಳ ವ್ಯವಸ್ಥೆ ಮಾಡಿದ್ದ. ಬೆಳಗಿನ ಉಪಹಾರ ಅಂದ್ರೆ ಪ್ಲಾಸ್ಟಿಕ್ ಟ್ರೇನಲ್ಲಿ ನಾಲ್ಕು ಪಾಕೆಟ್ ಗ್ಲೂಕೋಸ್ ಬಿಸ್ಕತ್ತು, ಬಾದಾಮಿ ಹಾಲು ಇಷ್ಟೆ. ನಾನಲ್ಲಿಗೆ ಹೋಗುವ ವೇಳೆಗಾಗಲೇ ಡಾ.ಜಿ.ಎಸ್.ಶಿವರುದ್ರಪ್ಪ, ಡಾ.ಎಚ್.ಎಸ್.ವೆಂಕಟೇಶ

ಮೂರ್ತಿ, ಡಾ.ಸುಮತೀಂದ್ರ ನಾಡಿಗ್, ಪ್ರೊ. ಬರಗೂರು ರಾಮಚಂದ್ರಪ್ಪ, ಪುಸ್ತಕಮನೆ ಹರಿಹರಪ್ರಿಯ, ಶೂದ್ರ ಶ್ರೀನಿವಾಸ್, ಬಿ.ಆರ್.ಲಕ್ಷ್ಮಣರಾವ್, ಎಂ.ಎನ್.ವ್ಯಾಸರಾವ್ ಮುಂತಾದ ಸಾಹಿತಿಗಳೆಲ್ಲ ಆಸೀನರಾಗಿ ತಮ್ಮದೇ ಮಾತಿನ ಲೋಕದಲ್ಲಿ ತೊಡಗಿದ್ದರು, ಅಂದಾಗ ಅದಕ್ಕೆ ಗೋ.ಶ್ರೀ. ಮೇಲೆ ಅವರಿಗಿದ್ದ ಪ್ರೀತಿ ವಿಶ್ವಾಸಗಳೇ ಕಾರಣ ಎಂದುಕೊಂಡೆ.

ಮೊದಲಿಗೆ ಕವಿಗೋಷ್ಠಿ ನಡೆಯಿತು. ಯಾರು ಯಾವ ಕವನ ವಾಚಿಸಿದರೋ ಮರೆತಿದ್ದೇನೆ. ಹೊಸಮನೆಯ ಮುಂಬಾಗಿಲ ಒಳಗೆ ಇರಿಸಿದ್ದ ಕಂಚಿನ ದೀಪಸ್ತಂಭದ ಸೊಡರುಗಳಿಗೆ ಐವರು ಕವಿಗಳು ಮೊಂಬತ್ತಿಯಿಂದ ದೀಪ ಕೊಟ್ಟರು. ಬಳಿಕ ಗೋ.ಶ್ರೀ. ಕುಟುಂಬದವರು ಬಲಗಾಲನ್ನು ಒಳಗಿಟ್ಟು ಗೃಹಪ್ರವೇಶ ಮಾಡಿದರು. ಉಳಿದ ನಾವೆಲ್ಲ ಚಪ್ಪಾಳೆ ತಟ್ಟಿದೆವು.

ನಾನು ಗೆಳೆಯನನ್ನು 'ಎಲ್ಲಿ ಬಂಧುಗಳು, ಸೋದರರು ಯಾರೂ ಕಾಣುತ್ತಿಲ್ಲ?' ಎಂದು ಕೇಳಿದೆ. ಗೆಳೆಯ 'ಅವರನ್ಯಾರನ್ನೂ ನಾನು ಕರೀಲಿಲ್ಲ. ನನ್ನಾಕೆಗೆ ಎಲ್ಲರನ್ನೂ ಕರೆದು ಸಾಂಪ್ರಾಯಕವಾಗಿ ಆಚರಿಸಬೇಕು ಅಂತ ಆಸೆಯಿತ್ತು. ನಾನು ಒಪ್ಪಲಿಲ್ಲ. ಆ ಸಿಟ್ಟಿಗೆ ಅವರ್ಯಾರೂ ಬರಲಿಲ್ಲ. ನನ್ನ ರೀತಿನೀತಿ ಹೀಗೇನೇ. ಒಪ್ಪುವವರು ಒಪ್ಪಲಿ, ಒಪ್ಪದವರು ಬಿಡಲಿ. ನನ್ನ ಮದುವೇನೂ ಸರಳವಾಗೇ ಮಾಡ್ಕೊಂಡೆ. ಆಗ ನೀವಿನ್ನೂ ನನಗೆ ಪರಿಚಯವಾಗಿರಲಿಲ್ಲ' ಎಂದಿದ್ದು ಮತ್ತಷ್ಟು ಸೋಜಿಗವಾಯಿತು.

ನಾನು , 'ಸಿಂಪಲ್ ಮದುವೆ ಅಂದರೆ ರಿಜಿಸ್ಟರ್ ಮ್ಯಾರೇಜಾ?' ಅಂತ ಮುಖ ನೋಡಿದೆ.

'ಇಲ್ಲ. ನಮ್ಮ ಮನೆಯವರು, ಇವಳ ಮನೆಯವರು ಸೇರಿದಂತೆ ಹದಿನೈದು ಹದಿನಾರು ಜನ ಕೋಟೆಯ ವೆಂಕಟರಮಣ ದೇವಸ್ಥಾನದಲ್ಲಿ ಮದುವೆ ಮುಗಿಸ್ಕೊಂಡು ಸಿಹಿ ಪೊಂಗಲ್, ಖಾರಾ ಪೊಂಗಲ್ ಪ್ರಸಾದ ತಗೊಂಡು ಮನೆಗೆ ಬಂದಿವಿ. ಅದರ ಮುಂದಿನ ಭಾನುವಾರ ಐವತ್ತು ಜನ ಸಾಹಿತ್ಯ ಗೆಳೆಯರಿಗೆ ವಿಶ್ವೇಶ್ವರಪುರದ 'ಮಾಡ್ರನ್ ಕೆಫೆ'ಯಲ್ಲಿ ಊಟ ಇಟ್ಕೊಂಡಿದ್ದೆ. ವಿಚಾರವಾದಿ ಡಾ.ಎಚ್.ನರಸಿಂಹಯ್ಯ ಅವರು ವಿಶೇಷ ಅತಿಥಿಗಳು. ಹಾಗೇನೇ ನಮಗೆ ಯಾರೂ ಉಡುಗೊರೆ ತರಬಾರದು ಅಂತ ತಿಳಿಸಿದ್ದೆ. ಬಂದಿದ್ದವರೂ ಹಾಗೇ ನಡ್ಕೊಂಡ್ರು ಅನ್ನಿ' ಎಂದರು. ನಾನು ಊಟ ಮುಗಿಸ್ಕೊ ಂಡು ಅಲ್ಲಿಂದ ಹೊರಬಂದೆ.

ಇತರರಿಗೆ ಆದರ್ಶ ಬೋಧಿಸುವ ಜನ ಲೆಕ್ಕವಿಲ್ಲದಷ್ಟು ಸಿಗುತ್ತಾರೆ. ಆದರೆ ತಮ್ಮ ನಡಡವಳಿಕೆಯಿಂದಲೇ ಆದರ್ಶ ವಾಗುವ ಗೋ.ಶ್ರೀ. ಅಂಥವರು ತೀರಾ ಅಪರೂಪ ಅಲ್ವೇ?.

***

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 208 – ಅಧ್ಯಕ್ಷರ ಅಭಿಪ್ರಾಯಗಳು

– ಭ.ರಾ. ವಿಜಯಕುಮಾರ್

ಸಹೃದಯೀ ಸಾಹಿತ್ಯ ಬಂಧುಗಳೇ,

208ನೇ ನೋಡಿಯೋ ಕಾರ್ಯಕ್ರಮ ಯಶಸ್ವಿಯಾಗಿ ಸಂಪನ್ನಗೊಂಡಿದೆ. 18 ಸದಸ್ಯರು ತಮ್ಮ ಬರಹವನ್ನು ಮಂಡಿಸಿ ಮನಗೆದ್ದಿದ್ದಾರೆ. ಆ ಸಂಖ್ಯೆಯೇ ಈ ಸರಣಿಯ ಯಶಸ್ಸನ್ನು ಹೇಳುತ್ತದೆ. ವಿವಿಧ ಸಾಹಿತ್ಯ ಪ್ರಕಾರದ ಬರಹಗಳು ಶ್ರೋತೃಗಳನ್ನು ರಂಜಿಸುತ್ತಲೇ ಒಂದಿಷ್ಟು ಚಿಂತನೆಯ ಗ್ರಾಸವನ್ನೂ ಕೊಟ್ಟಿವೆ.

'ಸಹಿತ'ವಾದದ್ದು ಸಾಹಿತ್ಯ ಎಂಬೊಂದು ವ್ಯಾಖ್ಯೆಯಿದೆ. ಅದರ ನೆರಳಿನಲ್ಲಿ ಹೇಳುವುದಾದರೆ ಈ ಗುಂಪು ಗಂಭೀರ ಸಾಹಿತ್ಯದ ಆಸ್ವಾದನೆ ಮತ್ತು ವಿಶ್ಲೇಷಣೆಗಳೆರಡರಲ್ಲೂ ತೊಡಗಿ ಬರಹಗಾರರು ಪರಸ್ಪರ ಪ್ರೋತ್ಸಾಹ ತಂದುಕೊಳ್ಳುತ್ತಿದ್ದಾರೆ. ಜತೆಗೆ ತಿದ್ದಬಲ್ಲ ಪ್ರಾಜ್ಞರೂ ಸಹ ಇಲ್ಲಿದ್ದು ಬೆಳವಣಿಗೆಗೂ ದಾರಿ ತೋರಿದ್ದಾರೆ. ಇಲ್ಲಿ ಪಳಗಿದ ಅನೇಕರು ಸ್ಪರ್ಧೆಗಳಲ್ಲೂ ಭಾಗವಹಿಸಿ ಬಹುಮಾನಿತರಾಗುತ್ತಿದ್ದಾರೆ. ಮೂಲತಃ ಸಾಹಿತ್ಯ ಬದುಕಿನ ವಿವೇಕಯುತ ಚಿತ್ರಣವಾಗಿ ತನ್ಮೂಲಕ ಮನಸ್ಸು ಬುದ್ಧಿಗಳ ಹಿತವನ್ನು ಉದ್ದೀಪಿಸಿ ಸಮಾಜದ ಹಾದಿಯನ್ನು ಸುಗಮ ಗೊಳಿಸುವುದು. (ಹಾಗಾಗಬೇಕೆಂಬುದು ಆಶಯ).

ಇನ್ನು ಇಂದಿನ ಹದಿನೆಂಟು ಅಧ್ಯಾಯಗಳ ಗೀತೆಯನ್ನು, ಹದಿನೆಂಟು ಅಕ್ಷೋಹಿಣಿ ಸೈನ್ಯವನ್ನು, ಅಷ್ಟಾದಶ ಪುರಾಣಗಳನ್ನು ನೆನಪಿಸುವ ಇಂದಿನ ಹದಿನೆಂಟು ಬರಹಗಳ ಬಗ್ಗೆ ನನ್ನಅನಿಸಿಕೆಗಳು ಇಲ್ಲಿವೆ:

1. **ಶ್ರೀಮತಿ ಸುಜಾತಾ ರವೀಶರವರ ಕವಿತೆ 'ಅಸ್ಥಿ–ಆಸ್ತಿ'**. ಕವನದ ಶೀರ್ಷಿಕೆಯೇ ಒಂದು ಸೂಚನೆಯನ್ನು ನೀಡುವಂತಿದೆ. ಅಕ್ಷರ ಕಾಗುಣಿತಗಳ ವ್ಯತ್ಯಾಸದ ಪ್ರಾಥಮಿಕ ನೋಟವನ್ನೇ ಕವನದ ಆರಂಭವಾಗಿಸಿ ಮುಂದುವರೆಯುತ್ತಾರೆ. ಕವಿತೆ ನಾವು ಊಹೆ ಮಾಡಿದಂತೆ ಆಧ್ಯಾತ್ಮಿಕ ಸ್ಪರ್ಶ ಪಡೆಯುತ್ತದೆ. ಇಹ–ಪರ, ಶಾಶ್ವತ–ನಶ್ವರಗಳ ಚಿಂತನೆಯೊಂದಿಗೆ ನಾವು ಉಳಿಸಿಕೊಳ್ಳಬೇಕಾದುದೇನು ಎನ್ನುವುದನ್ನೂ ಸೂಚಿಸುತ್ತದೆ. ಕೊನೆಯಲ್ಲಿ ಬಳಸಿರುವ 'ಪರಿಛಾಯೆ' ಎಂದ ಪದ ಹೊಸ ಪ್ರಯೋಗದಂತಿದೆ. ಬಹುಶಃ ಹಿಂದಿಯ ಪ್ರಭಾವದಿಂದ ಸೃಷ್ಟಿಯಾದಂತೆನಿಸುತ್ತದೆ.

2. **ಶ್ರೀಮತಿ ಶೀಲಾ ಭಂಡಾರ್ಕರ್‌ರವರ 'ಮಾವಿನ ಮರದ ಪ್ರಾರಬ್ಧ'** ಒಂದು ಅನುಭವ ಕಥನ. ಚಿಕ್ಕಂದಿನಲ್ಲಿ ನಡೆದ ಘಟನೆಯ ನಿರೂಪಣೆ. ಬಹು ವರ್ಷಗಳಾದರೂ ಫಲ ಕೊಡದ ಮನೆಯಂಗಳದ ಮಾವಿನ ಮರದ ಬಗ್ಗೆ ಗಂಗಯ್ಯ ಹಾಗೂ ಮನೆಯವರ ಭಾವನೆಗಳು, ಮಾತುಕತೆಗಳ ಮೂಲಕ ಕತೆ ಮುಂದುವರೆಯುತ್ತದೆ. ಮರದಿಂದೇನೂ ಪ್ರಯೋಜನವಿಲ್ಲ, ಏನಾದರೂ ಮಾಡಬೇಕೆಂಬ ಗಂಗಯ್ಯನ ನುಡಿಗಳು ಮರ ಕಡಿಯಲು

ಸೂಚಿಸಿದಂತಿದೆ ಎಂದು ಮನೆಯವರು ಭಾವಿಸುತ್ತಾರೆ. ಆದರೆ ಅದಕ್ಕೊಂದು ವಿಚಿತ್ರ ಸಲಹೆಯನ್ನು ಅವನು ನೀಡುತ್ತಾನೆ. ಮರವನ್ನು ಬೈದು ನಿಂದಿಸಿ ಹೀಯಾಳಿಸುವ ಕ್ರಮವದು. ಮನೆಯವರಿಗೂ ಇದು ಕುತೂಹಲ ಮೂಡಿಸಿ ಒಪ್ಪುತ್ತಾರೆ. ನಂತರ ಅದರ ವಿವರಣೆಯಿದೆ. ಹಿಂದಿ ಸಿನಿಮಾ 'ತಾರೆ ಜಮೀನ್ ಪರ್'ನಲ್ಲಿ ಬರುವ ಇಂಥಹುದೇ ಆದರೆ ವಿರುದ್ಧ ರೀತಿಯ ಸಂಭಾಷಣೆ ನೆನಪಾಯಿತು. ಅಲ್ಲಿ ಆಫ್ರಿಕದ ಜನಾಂಗವೊಂದು ಮರವನ್ನು ಕೊನೆಗಾಣಿಸಲು ಇದೇ ರೀತಿಯ ಪ್ರಯೋಗ ನಡೆಸಿದರೆ, ಇಲ್ಲಿ ಫಲ ನೀಡಲು ಬಳಸಿದ್ದಾರೆ. ಧನಾತ್ಮಕ ಭಾರತೀಯ ಚಿಂತನೆ!. ಸಸ್ಯಗಳಿಗೂ ಜೀವವಿದೆಯೆಂದು ವೈಜ್ಞಾನಿಕವಾಗಿ ಸಾಬೀತಾಗುವ ಮೊದಲೂ ನಾವು ಅದೇ ಭಾವದಲ್ಲಿದ್ದೆವೆಂದು ಜನಪದರು ಸೂಚಿಸಿದಂತಿದೆ. ಹಾಸ್ಯ ಸಂಭಾಷಣೆಗಳನ್ನೂ ಒಳಗೊಂಡ ಸರಳ ನಿರೂಪಣೆ ಇಲ್ಲಿದೆ.

3. ಶ್ರೀಮತಿ ರೇಣುಕಾ ದೇಸಾಯಿಯವರ "ಕೋಟೆ ಹೇಳದ ಕಥೆ" ತನ್ನ ತಂತ್ರದಿಂದ ಸೆಳೆಯುತ್ತದೆ. ವಿಶೇಷವಾಗಿ ಮಕ್ಕಳನ್ನು. ಆರಂಭದಲ್ಲೇ ಸೌಗಂಧಿಪುರವು ಸವದತ್ತಿಯಾಗಿ ರೂಪಾಂತರಗೊಂಡ ಇತಿಹಾಸವನ್ನು ಹೇಳುತ್ತದೆ. ಪ್ರಸ್ತುತ ಹೆಸರಿನ ಬದಲಾವಣೆಗಳು ನಡೆದಿರುವ ಹಿನ್ನೆಲೆಯಲ್ಲಿ ಇದೊಂದು ಸೂಚನೆ. ಅಮ್ಮ, ಮಗಳ ಕೋಟೆಯ ವೀಕ್ಷಣೆ ಹಾಗೂ ಸಂಭಾಷಣೆಯ ಮೂಲಕ ಮುನ್ನಡೆಯುವ ಕಥೆ ಕಾಲವು ಮರೆಮಾಚಿದ, ತಿರುಚಿದ ವಾಸ್ತವ ಗಳೆಡೆಗೆ ಸಾಗುತ್ತದೆ. ಇತಿಹಾಸದಲ್ಲಿ ದಾಖಲಾಗದ ಭಾವಗೋಚರ ಸತ್ಯಗಳ ಅನಾವರಣದ ಯತ್ನ ಇಲ್ಲಿದೆ. ಎರಡು ಪೀಳಿಗೆಯ ಮನಸ್ಸುಗಳು ಪಾಲ್ಗೊಂಡು ಅನುಭವಿಸುವ ಮಾತುಗಳು ಚಿಂತನೆಗೆ ದೂಡುತ್ತವೆ. ಇಲ್ಲಿನ ನಾಟಕೀಯ ಅಂಶ ಇದನ್ನೊಂದು ರಂಗರೂಪವಾಗಿಸಬಹುದೆಂಬ ಅಂಶವನ್ನೂ ನೀಡುತ್ತದೆ.

4. ಶ್ರೀ ಶ್ರೀಧರ ಬಾಣಾವರ ಅವರ "ರೆಪೋ ಹಾಗೂ ಠೇವಣಿಗಳ ಬಡ್ಡಿ ದರ" ಆರ್ಥಿಕ ವಿಶ್ಲೇಷಣೆಯ ಒಂದು ಪ್ರಸ್ತುತ ಸ್ಥಿತಿಯ ಗಂಭೀರ ಲೇಖನ. ಬ್ಯಾಂಕುಗಳ ವಹಿವಾಟಿನಲ್ಲಿ ನಿಯತವಾಗಿ ನಡೆಯುವ ಬಡ್ಡಿ ದರದ ಬದಲಾವಣೆ ಹಾಗೂ ದೇಶದ ಆರ್ಥಿಕ ವ್ಯವಹಾರದಲ್ಲಾಗುವ ಏರುಪೇರುಗಳ ಅಂಕಿಅಂಶಗಳ ಸಹಿತ ನೀಡಿರುವ ಲೇಖನ. ಸಾಹಿತ್ಯದ ಶಾಸ್ತ್ರ ವಿಭಾಗಕ್ಕೆ ಸೇರಬಹುದಾದ ಇದು ನಮ್ಮ ಆರ್ಥಿಕ ನೀತಿ, ವ್ಯವಸ್ಥೆ ಹಾಗೂ ಸಮಾಜದ ಮೇಲೆ ಅದರ ಪರಿಣಾಮಗಳೊಂದಿಗೆ ಸಲಹೆಯನ್ನೂ ಸಹ ನೀಡುತ್ತದೆ.

5. ಶ್ರೀ ಜಿ.ವಿ.ಅರುಣರವರ "ಚೆಂಗನ ಭಯೋತ್ವಾದನೆ" ಒಂದು ಹಾಸ್ಯಲೇಖನ. ಎಲ್ಲರೂ ಮೆಚ್ಚುವ ಹಾಗೆ ಸದಭಿರುಚಿಯ ಹಾಸ್ಯ ಸೃಷ್ಟಿ ಕಷ್ಟವೇ. ಅರುಣರವರಿಗೆ ಅದು ಸಿದ್ಧಿಸಿದೆ. ಮುಖದ ನೆರಿಗೆಗಳನ್ನು ಇಸ್ತ್ರಿ ಮಾಡಬಲ್ಲ ಮಿದುಬಿಸುಪಿನ ಹಾಸ್ಯ ಅವರದು. ಅದಕ್ಕೆಂದೇ 'ಚೆಂಗ' ಎಂಬ ಪಾತ್ರ ಸೃಷ್ಟಿಯಾಗಿದೆ. ಎಂಎಸ್ಎನ್ ಅವರೂ ಹೀಗೇ ಪಾಂಡು, ವಿಶ್ವ, ವಿಶಾಲು, ಮುಂತಾದ ಪಾತ್ರ ಸೃಷ್ಟಿಸಿರುವುದನ್ನು ನೆನೆಯಬಹುದು. ಆ ಪಾತ್ರಕ್ಕೆ ಲೇಖಕ ವಿಶೇಷ ನಡವಳಿಕೆ, ಭಾಷೆಯನ್ನು ಆರೋಪಿಸಿ ಹಾಸ್ಯ ಪ್ರಸಂಗಗಳನ್ನು ತರುತ್ತಾನೆ. ಇಲ್ಲಿ ಚೆಂಗ ತನ್ನ ಅರೆ ಜ್ಞಾನದಿಂದ ಹೊಸ ಅರ್ಥಕೋಶ, ಪದಕೋಶ ಹುಟ್ಟುಹಾಕಿ ನಗೆಗೆ ದಾರಿಯಾಗುತ್ತಾನೆ. ಭಯೋತ್ವಾದನೆ ಶಬ್ದದ 'ದ' ಕಾರವನ್ನು ಮಹಾಪ್ರಾಣವನ್ನಾಗಿಸುವ ಈ ಅಲ್ಪಪ್ರಾಣಿ ಅದೇ ಸರಿಯೆಂದೂ ವಾದ ಮಾಡುತ್ತಾನೆ. ಅಕ್ಷರಗಳ ಬರೆಹದಲ್ಲಿ ತಂತ್ರಗಾರಿಕೆಯನ್ನು ತನ್ನದೇ ರೀತಿಯಲ್ಲಿ ಚಿತ್ರಿಸಿ ಬೆರಗನ್ನೂ ತರುತ್ತಾನೆ. ತಿಳಿಹಾಸ್ಯದೊಂದಿಗೆ ಅಕ್ಷರ ಚಿಂತನೆಯನ್ನೂ ತರುವ ಬರೆಹವಿದು.

6. ಶ್ರೀ ಪೋಲೇನಹಳ್ಳಿ ರಮೇಶರ "ತೆರೆದ ಬಾಗಿಲು" ಸಣ್ಣಕಥೆ. ಒಂದು ಉದ್ದಿಮೆ, ಅಲ್ಲಿ ಬರುವ ಅನಿವಾರ್ಯ ಪ್ರಸಂಗ, ಅದನ್ನು ಎದುರಿಸಲೇಬೇಕಾದ ಮಾಲಿಕರು ಮತ್ತು ಕಾರ್ಮಿಕರು. ದುಡಿಯುವ ಜನರ ಪ್ರತಿನಿಧಿಯಾಗಿ ಕಥಾನಾಯಕನ ತುಮುಲ. ಮಾತಿನ ಭರದಲ್ಲಿ ಬರುವ ಕೋಪದ ನುಡಿಗಳ ಪರಿಣಾಮ. ತನ್ನ ಒಂದು ಪತ್ರದಿಂದ ಉದ್ಭವಿಸಬಹುದಾದ ವಿಷಮ ಸ್ಥಿತಿ, ಇದೇ ಸಮಯದಲ್ಲಿ ಎದುರಾದ ಮನೆಯ ದುಃಸ್ಥಿತಿ. ಎರಡನ್ನೂ ನಿಭಾಯಿಸಲು ಹೆಣಗಾಡುವ ಆ ಒಂದು ರಾತ್ರಿ– ಹೀಗೆ ಚಿತ್ರಣಗಳ ಕಟ್ಟೋಣ ಓದನ್ನು ಬಿಡದೆ ಮುಂದು ವರೆಸುವಂತೆ ತನ್ನೊಡನೆ ಕರೆದೊಯ್ಯುತ್ತದೆ, ಅಂತ್ಯಕ್ಕೆ ಕಾಯುವಂತೆ ಮಾಡುತ್ತದೆ. ಇವರ 'ಪೋರ' ಎಂಬ ಕಾವ್ಯನಾಮ ಚೆನ್ನಾಗಿ ಹೊಂದಿದೆ.

7. ಶ್ರೀಮತಿ ಶೀಲಾ ಅರಕಲಗೂಡುರವರ "ಆ ಘಟನೆಯ ಸುತ್ತ" ಚೊಕ್ಕ ಲಲಿತ ಪ್ರಬಂಧ (ಅನುಭವ ಕಥನವೂ ಸಹ). ಕಾರ್ಯಕ್ರಮವೊಂದಕ್ಕೆ ಹೋಗಿರುವ ಲೇಖಕಿ ಈಗಾಗಲೇ ಕೊಂಚ ಹೆಸರು ಮಾಡಿದವರು. ಇದರಿಂದ ತನ್ನನ್ನು ಭೇಟಿಯಾಗುವವರೆಲ್ಲ ಅದೇ ವಿಷಯವಾಗಿ ಸ್ಪಂದಿಸುವರೆಂಬ ಸಹಜ ನಿರೀಕ್ಷೆಯಲ್ಲಿರುವ ಮನಸು. ಅಲ್ಲಿ ಭೇಟಿಯಾದ ಒಂದಿಬ್ಬರು ಆ ಬಗ್ಗೆಯೇ ಹೊಗಳುತ್ತಾರೆ ಸಹ. ಇದೇ ಸಮಯಕ್ಕೆ ತಮ್ಮನ್ನು ಪಕ್ಕಕ್ಕೆ ಕರೆದ ಹಿರಿಯರೊಬ್ಬರ ಕರೆಯೂ ಅದೇ ಎನ್ನುವ ಭಾವದಲ್ಲಿ ಹೊರಟಾಗ ನಿರೀಕ್ಷಿಸದ ಸೂಚನೆಯನ್ನು ಕೇಳಿ ಪೆಚ್ಚಾಗುತ್ತಾರೆ. ಮೊದಲು ಆ ವ್ಯಕ್ತಿಯ ಬಗೆಗೆ ಕೊಂಚ ಬೇಸರವಾದರೂ ಆ ವ್ಯಕ್ತಿಯೇ ಅಂದಿನ ಕಾರ್ಯಕ್ರಮದ ಕೇಂದ್ರ ಬಿಂದು ಎಂದು ತಿಳಿದಾಗ ಅವಾಕ್ಕಾಗಿ ತಮ್ಮ ಲಹರಿ ಬದಲಾಯಿಸಿಕೊಳ್ಳುತ್ತಾರೆ. ಈಗ ಸರಳತೆ ಹಾಗೂ ವಿನಯಗಳ ನಡತೆಯೇ ಪ್ರಮುಖವಾಗಿ ಕಂಡು ತಮ್ಮ ಅನಿಸಿಕೆಯನ್ನು ತಿದ್ದಿಕೊಳ್ಳುತ್ತಾರೆ. ದ್ವೇಷ ಉಳಿಸಬಹುದಾದ ಅನುಭವ ಸೂಕ್ಷ್ಮ ಮನಸ್ಸಿದ್ದಲ್ಲಿ ನಮ್ಮ ಗ್ರಹಿಕೆಯನ್ನು ತಿದ್ದಿ ಬೆಳೆಸುವ ಪರಿ ಹೇಗೆಂದು ಲೇಖಕಿ ಚಿತ್ರಿಸಿದ್ದಾರೆ.

8. ಶ್ರೀ ಕೆ ಎನ್ ಮಹಾಬಲರವರ "ರಾತ್ರಿ ಗಸ್ತಿನ ಸಮಾಜ ಸೇವೆ" ಒಂದು ಹಾಸ್ಯ ಲೇಖನ. ವಾಸಸ್ಥಳದಲ್ಲಿ ರಾತ್ರಿ ಕಳ್ಳತನಗಳು ಹೆಚ್ಚಾದಾಗ ಅಲ್ಲಿನ ನಾಗರಿಕರೇ ಸೇರಿ ತಮ್ಮ ರಕ್ಷಣೆಯ ಭಾರವನ್ನು ಸ್ವೀಕರಿಸಿ ಪೋಲೀಸರೊಂದಿಗೆ ಸಹಭಾಗಿಗಳಾಗಿ ಗಸ್ತು ತಿರುಗುವ 'ಸಮಾಜಸೇವೆ'ಯ ಪ್ರಸಂಗದ ವಿವರಣೆ ಇಲ್ಲಿದೆ. (ಇದು ತಮಗಾಗಿಯೇ ಮಾಡಿಕೊಂಡ 'ಸ್ವಾರ್ಥ'ದ ವ್ಯವಸ್ಥೆಯಾದರೂ ಪ್ರತಿಫಲವಿಲ್ಲದೆ ನಡೆಯುವುದರಿಂದ ಸೇವೆ ಎನ್ನಬಹುದು) ಸುಮಾರು ಎಪ್ಪತರ ದಶಕದಲ್ಲಿ ನಾನೂ ಈ ರೀತಿ ಭಾಗವಹಿಸಿದ್ದು ನೆನಪಾಯಿತು. ಬಹುತೇಕರು ಸಹೋದ್ಯೋಗಿಗಳಾದುದರಿಂದ ಆರಂಭದ ದಿನಗಳ ಉತ್ಸಾಹ, ಕ್ರಮೇಣ ಮೂಡುವ ಬೇಸರ ಇವೆಲ್ಲದರ ವಿವರ ಇಲ್ಲಿದೆ. ಉತ್ಸಾಹದಲ್ಲಿ ಸಾರ್ವಜನಿಕರ ಮೇಲೆ ಅಧಿಕಾರ ಚಲಾಯಿಸುವ ಸಂಗತಿಗಳು, ದಿನ ಕಳೆದಂತೆ ತಂಡಗಳಲ್ಲೇ ಮುನಿಸು, ಸುಳ್ಳು ಕಾರಣವಿತ್ತು ತಪ್ಪಿಸಿಕೊಳ್ಳುವ, ನೆಪಹೇಳುವ ರೀತಿಗಳು ಸೇವೆಯನ್ನು ಮೊಟಕುಗೊಳಿಸುತ್ತದೆ. ಒಂದು ಅನಿವಾರ್ಯತೆಯು ಉದ್ಯೋಗವೇ ಆಗಿರುವುದಕ್ಕೂ, ಸೇವೆಯಾಗುವುದಕ್ಕೂ ಇರುವ ವ್ಯತ್ಯಾಸ ಬಿಂಬಿತವಾಗಿದೆ. ಕೊನೆಗೆ ಪೋಲೀಸರೇ ಅನುಮತಿ ನೀಡಿ (ನೋಡಲಾಗದೆ) ಸಾಕೆಂದಾಗ ನಿರಾಳರಾಗುವ ಪರಿ ನಗುತರಿಸುತ್ತದೆ. ಲಲಿತವಾಗಿ ಓದಿಸಿಕೊಳ್ಳುವ ಬರೆಹವಿದು.

9. ಶ್ರೀ ಕೆ ಆರ್ ವೆಂಕಟೇಶ (ಮನೋಹಂಸ) ರವರ ಕವನ "ಪುಷ್ಪ ನಮನ". ಎಲ್ಲರನ್ನೂ ಆಕರ್ಷಿಸುವ ಹೂಗಳು ಕವಿಮನವನ್ನು ತಟ್ಟದಿದ್ದರೆ ಹೇಗೆ? ಹರಿಹರ ಇದಕ್ಕಾಗಿ "ಪುಷ್ಪ ರಗಳೆ"ಯನ್ನೇ ಬರೆದನಲ್ಲ!. ಕವಿ ಇಲ್ಲಿ ಆರು ಪುಷ್ಪಗಳನ್ನು ವರ್ಣಿಸುವುದರ ಮೂಲಕ ನಮನ ಸಲ್ಲಿಸಿದ್ದಾರೆ. ಹೂಗಳ ಬಣ್ಣ, ರೂಪ, ಬೆಳೆವ ಪರಿ, ಇವರಿಗೆ ಮೆಚ್ಚುಗೆಯಾದ ಕಾರಣ, ಹೀಗೆ ಒಂದೊಂದು ಹೂವಿನ ಬಗೆಗೂ ನಾಲ್ಕು ಸಾಲಿನ ಮಿತಿಯೊಳಗೆ ಚುಟುಕಾಗಿ ಹೇಳಿದ್ದಾರೆ. ಎಲ್ಲೋ ಬಹು ಮುಖ್ಯವಾದ ಪರಿಮಳವನ್ನೇ ಮರೆತಂತಿದೆ? ಕೇವಲ ಸುವಾಸನೆಯಿಂದಲೇ ತಮ್ಮ ಇರವನ್ನು ಹೂ ಹಣ್ಣುಗಳು ಸೂಚಿಸಿಬಿಡುತ್ತದೆ. ಮೊದಲಿಗೆ ದೂರದಿಂದಲೇ ಸೆಳೆಯುವ ಪರಿಯದು. ಅದನ್ನೂ ಸೇರಿಸಬಹುದಿತ್ತು. ಇನ್ನಷ್ಟು ಲಯ ವೈವಿಧ್ಯವನ್ನೂ ಬಳಸಿದ್ದರೆ ಸೊಗಸಿತ್ತೆನಿಸಿತು.

10. ಶ್ರೀ ಎನ್ ಶಂಕರರಾವ್‌ರವರ ಕಥೆ 'ಆತ್ಮಾಭಿಮಾನ'. ಕಥೆಗಾರ ಪುರುಷ ಎಂದು ತಿಳಿದಿರುವುದರಿಂದ ಕಥೆಯ ಮುಖ್ಯ ಪಾತ್ರ ಹೆಣ್ಣಾಗಿರುವುದು ವಿಶೇಷವೆನಿಸುತ್ತದೆ. ಮದುವೆಯಾಗದ ಹೆಣ್ಣಿನ ಸೂಕ್ಷ್ಮ ಮನಸ್ಸಿನ ತುಮುಲಗಳನ್ನು ಚಿತ್ರಿಸುವುದು ಗಂಡಿಗೆ ಕಲ್ಪನೆಯೇ ಹೌದು. ಇಂದಿನ ಫೇಸ್‌ಬುಕ್ ಪರಿಚಯಗಳಿಂದಾಗುವ ಅನುಬಂಧ, ಆಘಾತಗಳ ಎಳೆಯನ್ನು ಇದು ಹೊಂದಿದೆ. ಪರಸ್ಪರ ಮುಖಪರಿಚಯವೇ ಇಲ್ಲದ ಜೋಡಿಗಳು ಕೇವಲ ಮಾತಿನ ಕೊಡುಕೊಳುಗೆಯಲ್ಲೇ ಆಕರ್ಷಿತರಾಗುವುದು, ಬಯಸುವುದು ಸಾಮಾನ್ಯವಾಗಿದೆ. ಇದು ಮದುವೆಯ ಘಟ್ಟಕ್ಕೆ ಬಂದಾಗ ಭೇಟಿಯಾಗಬೇಕಾದ ಅನಿವಾರ್ಯತೆ, ಕುತೂಹಲ ಹೆಚ್ಚಿಸುತ್ತದೆ. ಈ ಮೊದಲ ಭೇಟಿಯ ಕ್ಷಣಗಳು. ನಿರೀಕ್ಷೆಗಳು ಹುಸಿಯಾಗುವುದು, ಜವಾಬ್ದಾರಿಗೆ ಹಿಂಜರಿಕೆ, ಭ್ರಮನಿರಸನವಾಗಿ ಹಿಂದಿರುಗುವುದು ಇದೆಲ್ಲ ಸಂಬಂಧಗಳ ವಿಶ್ಲೇಷಣೆ ಮಾಡುತ್ತದೆ. ಸಮಾಜಕ್ಕೊಂದು ಎಚ್ಚರಿಕೆಯ ಸಂದೇಶವನ್ನೂ ಕಥೆ ನೀಡುತ್ತದೆ.

11. ಶ್ರೀ ಜಿ.ವಿ.ಹೆಗಡೆಯವರ 'ಆಂಗ್ಲ ಭಾಷೆ ಮತ್ತು ಶಿಕ್ಷಣ ಮಾಧ್ಯಮ.' ಒಂದು ಗಂಭೀರ ಚಿಂತನೆಯ ಲೇಖನ. ಬದಲಾಗಿರುವ ಬದುಕಿನ ರೀತಿಯಿಂದಾಗಿ, ಜಾಗತಿಕ ಚಿತ್ರಣದಿಂದಾಗಿ ಜಗತ್ತಿನ ಬಹಳೆಡೆಗಳಲ್ಲಿರುವ ಸ್ಥಳೀಯ ಭಾಷೆಯ ಪರಿಸ್ಥಿತಿ ನಮ್ಮೆದುರಿಗಿದೆ. ಕನ್ನಡಕ್ಕೆ ಸಂಬಂಧಿಸಿ ಇದರ ಆಗುಹೋಗುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಭಾಷಾಭಿಮಾನ ಒಂದೆಡೆ, ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇನ್ನೊಂದೆಡೆ. ಇದಕ್ಕೆ ವೇಗೋತ್ಕರ್ಷ ನೀಡುವ ಸಂಪರ್ಕ, ತಾಂತ್ರಿಕತೆ ಹಾಗೂ ಸಾಮಾಜಿಕ ಪರಿಸರ. ಈ ವಾಸ್ತವಗಳನ್ನು ಮನಗಂಡು ಚರ್ಚೆಯನ್ನು ಬೆಳೆಸಲಾಗಿದೆ. ಬಹುಭಾಷಾ ಸಂಸ್ಕೃತಿಯ ಭಾರತದಲ್ಲಿ ಇದು ಎಷ್ಟರಮಟ್ಟಿಗೆ ಸಾಧ್ಯ ಹಾಗೂ ಸಾಧು ಎಂಬ ನೋಟವನ್ನು ಲೇಖಕರು ಕೊಟ್ಟಿದ್ದಾರೆ. ವಿಸ್ತೃತ ಚರ್ಚೆಗೆ, ಚಿಂತನೆಗೆ ಇದು ಅವಕಾಶ ನೀಡಿದೆ.

12. ಶ್ರೀಮತಿ ನಾಗರತ್ನ ಚಂದ್ರಶೇಖರರ 'ಅತ್ತೆಗೊಂದು ಕಾಲ, ಕತ್ತೆಗೊಂದು ಕಾಲ'. ಸಾಂದರ್ಭಿಕ ಹಾಸ್ಯ ಲೇಖನ. ಇತ್ತೀಚೆಗೆ ಹಾರಿಬಂದ ಸುದ್ದಿಯಾದ 'ಕತ್ತೆಯ ಹಾಲಿಗೆ ಬೇಡಿಕೆಯ ಬೆಲೆ' ಯನ್ನು ಕುರಿತು ತಮ್ಮ ವ್ಯಂಗ್ಯ ದೃಷ್ಟಿಯನ್ನು ಲೇಖಕಿ ಬೀರಿದ್ದಾರೆ. ಕತ್ತೆಯ ಬಗ್ಗೆ ನಮಗೆ ಇಲ್ಲೀಯವರೆಗಿನ ನಂಬಿಕೆಗಳು, ಅನುಭವಾಮೃತಗಳು ಇತ್ಯಾದಿಗಳನ್ನು ಆಧರಿಸಿ, ಈ ಹೊಸ ಸುದ್ದಿಯಿಂದಾಗಬಹುದಾದ ಬದಲಾವಣೆ, ಅನಾಹುತಗಳ ಊಹೆಗಳನ್ನು

ತಮ್ಮದೇ ಶೈಲಿಯಲ್ಲಿ ಹಾಸ್ಯಮಯವಾಗಿ ವಿಶ್ಲೇಷಿಸಿದ್ದಾರೆ. ಕತ್ತೆ ಕಾಲು ಹಿಡಿ, ಕತ್ತೆ ಕಾಯಿ, ಕತ್ತೆ ದುಡಿಮೆ... ಹೀಗೆ ಎಲ್ಲ ಚಿತ್ರಣಗಳೂ ನಗೆಯ ಹೂರಣವಾಗಿವೆ. ಸುದ್ದಿಯೊಂದರ ಬೆನ್ನು ಹತ್ತಿ ಎಷ್ಟೆಲ್ಲ ಕೋನಗಳಲ್ಲಿ ಜಾಲಾಡಬಹುದೆನ್ನಲು ಇದು ಒಳ್ಳೆಯ ಉದಾಹರಣೆ.

13. ಶ್ರೀ ವಿಠಲ್ ಇಜೇರಿಯವರ 'ಬೆಳಕು ಬೀರುವ ಕಥೆಗಳು'. ಒಂದು ಪುಸ್ತಕ ಪರಿಚಯದ ಬರೆಹ. ಮೂಲ ಬಂಗಾಳಿಯಿಂದ ಇಂಗ್ಲಿಷಿಗೆ 'ಎನ್‌ಲೈಟನಿಂಗ್ ಸ್ಟೋರೀಸ್' ಎಂದು ಅನುವಾದಗೊಂಡು, ಅಲ್ಲಿಂದ ಕನ್ನಡಕ್ಕೆ 'ಬೆಳಕು ಬೀರುವ ಕಥೆಗಳು' ಎಂದು ಅನುವಾದಿತವಾದ ಪುಸ್ತಕವಿದು. ಏಷ್ಯಾ, ಭಾರತಗಳನ್ನೊಳಗೊಂಡು ಬೇರೆ ಬೇರೆ ಪ್ರದೇಶದ, ಸಂಸ್ಕೃತಿಯ 74 ಸಣ್ಣ ಕಥಾನಕಗಳನ್ನು ಇದು ಒಳಗೊಂಡಿದೆ. ಹಲವು ಧರ್ಮಗಳ, ಜನಾಂಗಗಳ ಬದುಕಿನ ನೋಟದ ಗೊಂಚಲಿದು. ಉದಾಹರಣೆಯಾಗಿ 'ಜಾದೂಗಾರ' ಎಂಬ ಕಥೆಯ ಸಂಕ್ಷಿಪ್ತ ವಿವರವನ್ನು ಇಲ್ಲಿ ಲೇಖಕ ನೀಡಿದ್ದಾರೆ. ಕನಸಿನ ಬಗೆಗೆ ಕುತೂಹಲವನ್ನು ಬೆಳಸಿಕೊಂಡ ರಾಜನೊಬ್ಬ ಅದನ್ನು ವಾಸ್ತವಕ್ಕೆ ಹೇಗೆ ಹೊಂದಿಸಲೆಂದು ಚಿಂತಿಸುವ ಮನೋವೈಜ್ಞಾನಿಕ ವಿಷಯ ಇದರಲ್ಲಿದೆ. ಈ ಕುತೂಹಲ ತಣಿಸಿ ಕಣ್ತೆರೆಸಲು ಜಾದೂಗಾರನೊಬ್ಬ ಬರುತ್ತಾನೆ. ತನ್ನ ಮಾಂತ್ರಿಕ ಶಕ್ತಿಯಿಂದ ಭ್ರಮಾಲೋಕವೊಂದಕ್ಕೆ ಆತನನ್ನು ಕರೆದೊಯ್ದು ಸತ್ಯ ಮತ್ತು ಭ್ರಮೆಗಳ ತೊಡಕನ್ನು ಬಿಡಿಸಿ ಹೇಳುತ್ತಾನೆ. ಹೀಗೆ ಒಂದು ಕಥೆಯನ್ನು ತೋರಿಸಿ, ಒಟ್ಟು ಗ್ರಂಥದೆಡೆಗೆ ನಮ್ಮನ್ನು ಲೇಖಕರು ಆಕರ್ಷಿಸುತ್ತಾರೆ.

14. ಶ್ರೀಮತಿ ಗೌರಿ ಭಟ್ ರವರ ಅನುಭವ ಕಥನ 'ತರ್ಕಾತೀತ ಅನುಭವ". ಹೆಸರೇ ಸೂಚಿಸಿದಂತೆ ಇದೊಂದು ಅನುಭವ ಕಥನ. ಬಹು ಹಿಂದೆ ನಡೆದ ಘಟನೆಯೊಂದು ಲೇಖಕಿಗೆ ಇನ್ನೂ ವಿಸ್ಮಯವಾಗಿಯೇ ಉಳಿದಿದೆ. ಒಂದು ರೀತಿಯ ಅತೀಂದ್ರಿಯ ಶಕ್ತಿಯ ಸತ್ಯಸಂಗತಿಯಂತಿದೆ. ಯಾರದೋ ಅನುಭವವಾಗಿದ್ದರೆ ಕೇಳಿ ಬಿಟ್ಟುಬಿಡುವ ಹಾಗಾಗಬಹುದು ಅಥವಾ ವೈಜ್ಞಾನಿಕ ಕಾರಣ ಹುಡುಕಬಹುದು. ಆದರೆ ಸ್ವತಃ ಅನುಭವವಾದಾಗ ಮನಸ್ಸು ಅಚ್ಚರಿಯ ಭಾವದಲ್ಲಿ ನಿಂತುಬಿಡುತ್ತದೆ. ಉತ್ತರ ಸಿಗದ ಪ್ರಶ್ನೆಯಾಗಿ ನೆನಪಿನಲ್ಲುಳಿಯುತ್ತದೆ. ಲೇಖಕಿಯ ಸ್ಥಳವನ್ನೇ ಕಾಣದ ಚಿಕ್ಕಪ್ಪ ಅಲ್ಲಿನ ವಿವರಗಳನ್ನು ಹೇಳಿದ್ದಲ್ಲದೆ ಬ್ರಹ್ಮರಾಕ್ಷಸನ ಇರವನ್ನೂ, ತೊಂದರೆಯನ್ನೂ ಕಾಣುವುದು, ಅದಕ್ಕೆ ಉಪಶಮನ ನೀಡುವುದು ವೈಚಾರಿಕ ಮನೋಧರ್ಮದ ಲೇಖಕಿಗೂ ಬಿಡಿಸಲಾಗದ ಒಗಟಾಗುತ್ತದೆ. ಪೂರಕವೆಂಬಂತೆ ನೆರೆಮನೆಯವರ ಅನುಭವವೂ ಇದನ್ನು ಪುಷ್ಟಿಗೊಳಿಸುತ್ತದೆ. ಇದರೊಂದಿಗೇ ನಾಗನಿಷ್ಠೆಯ ಮತ್ತೊಂದು ಪ್ರಸಂಗವನ್ನೂ ನೀಡುತ್ತಾರೆ. ನಮ್ಮೆಲ್ಲ ವಿಚಾರ, ನಂಬಿಕೆಗಳನ್ನೂ ಮೀರಿ ನಿಲ್ಲುವ ಇಂತಹ ಘಟನೆಗಳು ಹಲವರಿಗೆ ಸ್ವತಃ ಮತ್ತು ಅನೇಕರಿಗೆ ಹತ್ತಿರದವರ ಅನುಭವಗಳಾಗಿ ಬೆಳೆದುಬಿಡುತ್ತವೆ.

15. ಶ್ರೀಮತಿ ಜಿ.ವಿ. ನಿರ್ಮಲ ಅವರ 'ನೆಲದಾಳದ ಗುಹೆ' ಒಂದು ಪ್ರವಾಸ ಕಥನ. ಲೇಖಕಿ ಮೇಘಾಲಯ ರಾಜ್ಯದಲ್ಲಿ ಪ್ರವಾಸಕ್ಕೆ ಹೋದಾಗ ನೆಲದೊಡಲಿನಲ್ಲಿರುವ ಗುಹೆಯ ಭೇಟಿಗೆ ಹೋಗಿರುತ್ತಾರೆ. ಅದನ್ನು ಕಂಡಾಗ ಹಿಂದೆ ಅವರೇ ಅಮೇರಿಕದ ಟೆಕ್ಸಾಸಿನ ಇನ್ನರ್ ಸ್ಪೇಸ್ ಕ್ಯಾವರಿನ್ ಎಂಬ ಗುಹೆಗೆ ಭೇಟಿ ನೀಡಿದ್ದು ನೆನಪಾಗಿ ಆ ನೆನಪನ್ನು ಹಂಚಿಕೊಂಡಿದ್ದಾರೆ. ಬಹುಶಃ ಇಲ್ಲಿನ ದೃಶ್ಯಗಳು ಹಾಗೂ ವ್ಯವಸ್ಥೆಗಳಿಗೆ ಅಲ್ಲಿನ ಹೋಲಿಕೆಯಿಂದ

ನೆನಪಾಗಿದ್ದೀತು. ಅಲ್ಲಿನ ಗುಹೆಗಳ ಬಗ್ಗೆ ಕೆಲವು ಇತಿಹಾಸದ ವಿವರಗಳನ್ನು ನೀಡುತ್ತಾರೆ. ಅಚಾನಕ್ಕಾಗಿ ಆವಿಷ್ಕಾರಗೊಂಡ ಹತ್ತು ಸಾವಿರ ವರ್ಷಗಳ ಇತಿಹಾಸದ ಗುಹೆಗಳು, ಒಳಗೆ ರಾಸಾಯನಿಕ ಸಂಸ್ಕಾರಗಳಿಂದಾದ ವಿಭಿನ್ನ ಆಕರ್ಷಕ ವಿನ್ಯಾಸಗಳ, ಆಕಾರಗಳ ವಿಶೇಷತೆಗಳ ಬಗ್ಗೆ ಚಿತ್ರವತ್ತಾಗಿ ವಿವರಿಸುತ್ತಾರೆ. ಕೆಲವು ಛಾಯಾಚಿತ್ರಗಳನ್ನೂ ಸಹ ಕೊಟ್ಟಿರುವುದು ನಮ್ಮ ಕಲ್ಪನೆಯ ಕಾಣ್ಕೆಗೆ ನೆರವಾಗುತ್ತದೆ. ಅಲ್ಲಿನ ಮಾರ್ಗದರ್ಶಕಿಯ ನಗೆ ಮಾತುಗಳು, ಜಾರಿಕೆಯ ಭಯದಲ್ಲೂ ನೋಟದ ಆನೆ, ಗಾಢ ಕಪ್ಪುಗತ್ತಲೆಯ ಅನುಭವ, ಇವೆಲ್ಲ ನಮ್ಮನ್ನೂ ಅವರೊಂದಿಗೆ ಒಯ್ಯುತ್ತವೆ, ಈ ಹೊಸ ಲೋಕದ ಪರಿಚಯ. ಕೊನೆಯಲ್ಲಿ ಇಲ್ಲಿನ ಗುಹಾದರ್ಶನವನ್ನೂ ಕುರಿತು ಒಂದೆರಡು ಮಾತು ಹೇಳಬಹುದಿತ್ತು.

16. ಶ್ರೀ ಕೆ.ಎನ್. ಭಗವಾನ್‌ರವರ 'ಗೃಹ ಪ್ರವೇಶ' ಅನುಭವ ಕಥನ. ಉದ್ಯೋಗದಲ್ಲಿದ್ದಾಗ ನಡೆದ ಪ್ರಸಂಗಾವಧಾನದಿಂದ ಗೆಳೆಯನ ನಡತೆಯ ಬಗೆಗಿನ ಮೆಚ್ಚುಗೆಯ ಅನಾವರಣ ಇಲ್ಲಿದೆ. ಬದುಕಿನ ಹಾದಿಯಲ್ಲಿ ನಮಗೆ ಅನೇಕರ ಪರಿಚಯವಾಗುವುದುಂಟು. ಇದಕ್ಕೆ ಹಿನ್ನೆಲೆ ಹಲವಿದ್ದೀತು. ಇದರಲ್ಲಿ ಅನೇಕರು ನಮ್ಮ ಸ್ನೇಹ ವಲಯದಲ್ಲಿ ಅಚ್ಚೊತ್ತಿ ಉಳಿಯುತ್ತಾರೆ. ಕೆಲವರು ಮರೆಯಾಗಿಬಿಡುತ್ತಾರೆ. ಸಾಹಿತ್ಯಿಕ ಮನೋಭಾವದ ಇವರಿಗೆ ಮತ್ತೊಬ್ಬರಿಂದ ಪರಿಚಿತರಾದ ಸಾಹಿತ್ಯ ಪ್ರೀತಿಸುವ ಗೆಳೆಯರೊಬ್ಬರು ಸಿಗುತ್ತಾರೆ, ಆತ್ಮೀಯರೂ ಆಗುತ್ತಾರೆ. ಇವರಿಂದ ಲೇಖನ ಬರೆಸಲು ಅಪೇಕ್ಷಿಸಿದ ಅವರು ತಮ್ಮ ಮನೆಯ ಗೃಹಪ್ರವೇಶಕ್ಕೆ ಆಹ್ವಾನಿಸುತ್ತಾರೆ. ಅಲ್ಲಿಗೆ ಹೋದ ಲೇಖಕರಿಗೆ ವಿಶೇಷ ಅನುಭವವಾಗುತ್ತದೆ. ಪ್ರಸಿದ್ಧ ಬರಹಗಾರರು ಅಲ್ಲಿಗೆ ಬಂದಿದ್ದು, ಸಣ್ಣ ಮಿತಿಯಲ್ಲೇ ಸಾಹಿತ್ಯಿಕವಾಗಿ ಕಾರ್ಯಕ್ರಮ ನಡೆಸಿದ ರೀತಿ ಮೆಚ್ಚುಗೆಯಾಗುತ್ತದೆ. ಇದರೊಂದಿಗೆ ಇಂದಿನ ಮದುವೆಯಂಥಾ ವೈಭವದ ಆಚರಣೆಯ ದಿನಗಳಲ್ಲೂ ಆ ಗೆಳೆಯ ಮೆರೆದ ಸರಳತೆಯೂ ಆದರ್ಶಪ್ರಾಯವಾಗುತ್ತದೆ. ಕೇವಲ ನುಡಿಯಲ್ಲಲ್ಲದೆ ನಡತೆಯಲ್ಲೂ ಅದನ್ನೇ ಅನುಸರಿಸುವ ಕೆಲವೇ ವ್ಯಕ್ತಿಗಳಲ್ಲಿ ಆತನೂ ಒಬ್ಬನಾಗಿದ್ದು ಉತ್ತಮ ಸಂದೇಶವನ್ನೂ ನೀಡುತ್ತಾನೆ.

17. ಶ್ರೀಮತಿ ಮಾಧುರಿ ಕೃಷ್ಣರವರ ಅನುಭವ ಕಥನ 'ತಪ್ಪು'. ಬದುಕಿನ ಹಾದಿಯಲ್ಲಿ ಬಹುದೂರ ಸಾಗಿಬಂದ ನಂತರ ಆರಂಭದ ದಿನಗಳ ಪರಿಚಿತರು ಮತ್ತೆ ಸಿಕ್ಕರೆ ಮನಸ್ಸಿಗೆ ಬೇರೆಯದೇ ಅನುಭವ. ಲೇಖಕಿ ತನ್ನ ಒಬ್ಬ ಹಿಂದಿನ ಸಹಪಾಠಿ ತನ್ನ ಊರಿಗೇ ಬಂದಿದ್ದಾನೆಂಬ ಸುದ್ದಿ ತಿಳಿದು ಭೇಟಿಯಾಗುವ ಮನಸ್ಸು ಮಾಡುತ್ತಾಳೆ. ಆಕೆಗೆ ಆತನ ಅರೆಬರೆ ವಿಷಯ ತಿಳಿದಿರುತ್ತದೆ. ಮೊದಲಿಗೆ ಅವನ ಪ್ರತಿಕ್ರಿಯೆ ನಿರಾಶಾದಾಯಕವಾದರೂ ಮತ್ತೆ ಕರೆ ಬಂದು ಅಲ್ಲಿಗೆ ಹೋಗಿ ಭೇಟಿಯಾಗುತ್ತಾಳೆ. ಬಹು ವರುಷ ಬಿಟ್ಟು ಹೋದ ಒಡನಾಟ ಆ ಭೇಟಿಯಲ್ಲಿ ಚಿಗುರೊಡೆದು ನೆನಪುಗಳು ಮರುಕಳಿಸುತ್ತದೆ. ಈ ಭರದಲ್ಲಿ ವಯಸ್ಸನ್ನೂ ಮರೆತಂತಾಗಿ ಮಾತಿನಲ್ಲಿ ಎಚ್ಚರಿಕೆ ತಪ್ಪುತ್ತದೆ. ಅವನ ಜತೆಗಿರುವವರನ್ನು ಊಹಿಸಲಾಗದೆ, ಸಂಬಂಧಗಳ ಬಗ್ಗೆ ತಪ್ಪಾಗಿ ಕೇಳಿ ಪೇಚಿಗೆ ಬೀಳುತ್ತಾಳೆ. ನಂತರ ಸತ್ಯದ ಅನಾವರಣವಾಗಿ ಮನಸು ನಾಚುತ್ತದೆ. ಹೀಗೆ ಘಟನೆ ದೇಹ ಮನಸುಗಳ ಭಿನ್ನ ಚೇತನ ಶಕ್ತಿಯ ಚಿತ್ರಣವೀಯುತ್ತದೆ.

18. ಶ್ರೀಮತಿ ಗಿರಿಜಾರಾಜ್ ರವರ ಕಿರುಗಥೆ 'ವಿಪ್ರಲಂಭ'. ಸಂಸ್ಕೃತದ ಈ ಶೀರ್ಷಿಕೆಯೇ ವಿರಹದ ಸೂಚನೆಯನ್ನು ನೀಡುತ್ತದೆ. ಶೃಂಗಾರ ರಸದ ಒಂದು ಭಾಗವಾದ ಇದು ದಾಂಪತ್ಯದಲ್ಲಿನ ಒಂದು ಸನ್ನಿವೇಶ.

ಅನ್ಯೋನ್ಯವಾಗಿದ್ದ ದಂಪತಿಗಳಲ್ಲಿ ಯಾವುದೋ ಕಾರಣದಿಂದ ವೈಮನಸ್ಯ ಮೂಡಿ ಮನಸ್ಸು ವ್ಯಗ್ರಗೊಂಡಾಗ ಸಂಬಂಧವನ್ನೇ ಮುರಿದುಕೊಳ್ಳುವ ಸನ್ನಿವೇಶ ಇಂದು ಸಾಮಾನ್ಯವೇ. ಇಲ್ಲಿನ ದಂಪತಿಗಳೂ ಸಹ ಈ ವರ್ತುಲಕ್ಕೆ ಸಿಕ್ಕಿ ದೂರಾಗುತ್ತಾರೆ. ಸನಿಹ ಇಲ್ಲದಾಗ ನೆನಪುಗಳು ಹೆಚ್ಚು ಬಾಧಿಸುತ್ತದೆ. ಹಳೆಯ ಪ್ರಣಯ ಸನ್ನಿವೇಶಗಳು ಕಾಡಲಾರಂಭಿಸುತ್ತದೆ. ಆ ನೆನಪುಗಳು ನಮ್ಮೆಲ್ಲ ಜೀವನಾಸಕ್ತಿಯನ್ನು ಸೆಳೆದು ಅನಾಸಕ್ತಿ ಮೂಡಿಸುತ್ತವೆ. ಸೇರಲು ಅಹಂ ಅಡ್ಡವಾಗಿ ಕೊರಗುವಂತಾಗುತ್ತದೆ. ನಂತರ ಮೂರನೆಯವರ ನೆರವೋ, ಅನಿವಾರ್ಯ ಸನ್ನಿವೇಶವೋ ಒದಗಿ ಒಂದಾಗುವ ಸುಖಾಂತ ಎದುರಾಗುತ್ತದೆ. ಈ ಭಾವಗಳ ಚಿತ್ರಣ ಕಥೆಯಲ್ಲಿ ಒಡಮೂಡಿದೆ. ಎಪ್ಪತ್ತು ಎಂಭತ್ತರ ದಶಕಗಳಲ್ಲಿ ಬರುತ್ತಿದ್ದ ಕಥೆಗಳನ್ನು ಇದು ನೆನಪಿಸಿತು. ಇಂದಿನ ಹಲವು ಚಿತ್ರ, ಧಾರಾವಾಹಿಗಳಲ್ಲೂ ಇದನ್ನು ಕಾಣಬಹುದು.

ಒಟ್ಟಿನಲ್ಲಿ ಎಲ್ಲ ಬರಹಗಳ ಒಂದು ಒಳನೋಟ ಮಾತ್ರ ಇಲ್ಲಿದೆ. ಇದು ವಿಮರ್ಶೆಯಲ್ಲ. ಸಹೃದಯೀ ಮನಸೊಂದು ಮರುಸೃಷ್ಟಿಸಿಕೊಂಡಾಗ ಬಂದ ಭಾವಗಳಷ್ಟೆ. ವಿವರಗಳನ್ನು ಓದಿದಾಗ ಚಿತ್ರಣ ವಿಸ್ತಾರವಾದೀತು. ಎಲ್ಲರಿಗೂ ಅಭಿನಂದನೆ ಹಾಗೂ ಧನ್ಯವಾದಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 208 – ಸಂಚಿಕೆಯ ಬಿಡುಗಡೆ ದಿನಾಂಕ: 08 ಜನವರಿ 2023 – ಭಾನುವಾರ